
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಜನವರಿ 30, 2008 ರೂ. 10/-



ತಲೆ ತಿರುಗಿದ ಭಟ್ಟ ಕೆಟ್ಟ

ಗಾಳಿಪಟ ಗೋತಾ!

ನಿಮ್ಮ ಶಾಸಕರು ಕಡಿದಿದ್ದೇನು?

ಸುರಪುರ,
ಚಿಂಚೋಳಿ,
ನವಲಗುಂದ,
ಸಿರಸಿ,
ಕೊಳ್ಳೇಗಾಲ

ದಾವಣಗೆರೆ:

ಚೆಡ್ಡಿ ತಹಸೀಲ್ದಾರ್ ನಾಗರಾಜ

ಕೊಪ್ಪಳ ಜಿ.ಪಂ.

ಭ್ರಷ್ಟ ನರಸಿಂಹಯ್ಯ ಬಕಾಸುರ ನಾಡಿಗೇರ



ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿ

ತುಂಗ ರೇಣುಕಾರನ್ನು ಸಾವಿನತ್ತ ದೂಡಿದ್ದ ವೈದ್ಯ



“ನ್ಯಾನೋ”: ಕಾರು ಜನತೆಯ ಹೆಸರಲ್ಲಿ ಟಾಟನ ತೇರು

ಚಾರ್ವಾಕ

- ಶಿವಸುಂದರ್-

ನ್ಯಾನೋ ಎಂಬ ಕಾರಿನಲಿ, ಅದರ ಕನಸೇ ಭರ್ಜರಿ ಮಾರಾಟವಾಗುತ್ತಿದೆ! ಟಾಟಾ ಇದನ್ನು ಪೀಪಲ್ಸ್ ಕಾರ್-ಜನತೆಯ ಕಾರು- ಎಂದು ಕರೆದಿದ್ದಾರೆ. ಈ ಜನತೆ ಯಾರು? ಅದರ ಬಗ್ಗೆ ನ್ಯಾನೋ ಕಾರಿನ ಅನಾವರಣದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಾ ಟಾಟಾ ಸ್ಪಷ್ಟಪಡಿಸಿದ್ದಾರೆ. ಕೆಲವು ವರ್ಷಗಳ ಹಿಂದೆ ಅವರು ಒಮ್ಮೆ ನಗರ ಒಂದರಲ್ಲಿ ಚೇತಕ್ ಸ್ಕೂಟರ್ ಮೇಲೆ ಸವಾರಿ ಮಾಡುತ್ತಿದ್ದ ಒಂದು ಸಂಸಾರವನ್ನು ನೋಡಿದರಂತೆ. ಮುಂದೆ ಒಂದು ಮಗು ಹ್ಯಾಂಡಲ್ ಹಿಡಿದುಕೊಂಡು ನಿಂತಿದ್ದರೆ ಗಂಡ, ಅವನ ಹಿಂದೆ ಹೆಂಡತಿ ಮತ್ತು ಆಕೆಯ ತೊಡೆಯ ಮೇಲೊಂದು ಮಗು. ಹೀಗೆ ಆ ನಾಲ್ಕು ಜನರ ಸಂಸಾರ ಕಷ್ಟದ ಮತ್ತು ಅಪಾಯಕಾರಿ ಪ್ರಯಾಣ ಮಾಡುತ್ತಿರುವುದನ್ನು ನೋಡಿದ ಕೂಡಲೇ ಅವರಿಗೆ ಈ ಮಧ್ಯಮ ವರ್ಗಕ್ಕೆ ತಲುಪಬಹುದಾದ ನಾಲ್ಕು ಜನರ ಪುಟ್ಟ ಕಾರೊಂದನ್ನು ಉತ್ಪಾದಿಸಬೇಕು ಎಂದು ಅನಿಸಿತಂತೆ. ಸಂತೋಷ!

ಆದರೆ ಈ ಮಧ್ಯಮ ವರ್ಗದ ಕುಟುಂಬ ಕಳೆದ ನಾಲ್ಕು ದಶಕಗಳಿಂದಲೂ ರತನ್ ಟಾಟಾರ ಮನೆ ಮತ್ತು ಫ್ಯಾಕ್ಟರಿಯ ಮುಂದೆಯೇ ಓಡಾಡುತ್ತಿದ್ದರೂ ಮೂರು ವರ್ಷದ ಕೆಳಗೆ ಮಾತ್ರ ಕಾಣಿಸಿದ್ದು ಏಕೆ? ಹತ್ತು ವರ್ಷದ ಕೆಳಗೆ ಮೊಟ್ಟ ಮೊದಲ ಭಾರತೀಯ ಕಾರೆಂಬ ಹೆಗ್ಗಳಿಕೆಯ 'ಟಾಟಾ ಇಂಡಿಕಾ'ವನ್ನು ಉತ್ಪಾದಿಸುವಾಗಲೂ ಈ ಸ್ಕೂಟರ್ ಓಡಿಸುವ ಮಧ್ಯಮ ವರ್ಗ ಏಕೆ ಕಣ್ಣಿಗೆ ಕಾಣಲಿಲ್ಲ? ಈಗಲೂ ನ್ಯಾನೋ ಕಾರನ್ನು ಜನತೆಯ ಕಾರು ಎಂದು ಕರೆಯುತ್ತಿರುವಾಗ ಭಾರತದ 106 ಕೋಟಿ ಜನತೆಯಲ್ಲಿ ಇದ್ದ ಸ್ಕೂಟರ್ ಅನ್ನು ಮಾರಿಕೊಂಡು ಸೈಕಲ್‌ಗೆ ಅಥವಾ ಕಾಲ್ನಡಿಗೆಗೆ ಮರಳುತ್ತಿರುವ ನಗರದ ಮಧ್ಯಮ ವರ್ಗವಾಗಲೀ ಅಥವಾ ಗ್ರಾಮೀಣ ಭಾರತದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಮಧ್ಯಮ ವರ್ಗದ ರೈತಾಪಿ ಜನತೆಯಾಗಲೀ ಕಾಣದೆ ಸ್ಕೂಟರ್‌ನಲ್ಲಿ ಪ್ರಯಾಣ ಮಾಡುತ್ತಿದ್ದ ನಾಲ್ಕು ಜನರ ಕುಟುಂಬ ಅಥವಾ ಜಾಗತೀಕರಣ ಹುಟ್ಟಿ ಹಾಕಿರುವ ನವ ಮಧ್ಯಮ ವರ್ಗ ಮಾತ್ರ ಟಾಟಾ ಕಣ್ಣಿಗೆ ಕಾಣುತ್ತಿರುವುದಕ್ಕೆ ಏನು ಕಾರಣವಿರಬಹುದು? ಇರಲಿ ಬಿಡಿ. ನಮ್ಮದು ಅರ್ಜುನ ಸಂಸ್ಕೃತಿ. ಬೇಟೆಗಾರ ಯಾವ ಮಿಕವನ್ನು ಗುರಿಯಿಟ್ಟು ಹೊಡೆಯಬೇಕೆಂದುಕೊಳ್ಳುತ್ತಾನೋ ಆ ಗುರಿಯನ್ನು ಹೊರತುಪಡಿಸಿ ಬೇರಾವುದೂ ಆತನ ಲಕ್ಷ್ಯದಲ್ಲಿ ಇರಬಾರದು. ಮಾರುಕಟ್ಟೆ ಬೇಟೆಯಲ್ಲೂ ಅಷ್ಟೆ!

ಆದರೆ ಮಾಧ್ಯಮಗಳು ಮತ್ತು ಟಾಟಾ ಮಾರಿದ ಕನಸನ್ನು ಕಿರಾಯಿಗೆ ಕೊಂಡಿರುವ ನವ ಶ್ರೀಮಂತ ವರ್ಗ ಮತ್ತು ಮಾಧ್ಯಮಗಳು ಇದನ್ನು ಟಾಟಾ ಸಾಮ್ರಾಜ್ಯದ ಕಾರು ಮಾರುಕಟ್ಟೆಯ ವಿಸ್ತರಣೆಯ ಮತ್ತೊಂದು ಯೋಜನೆಯಾಗಿ ಮಾತ್ರ ಪರಿಗಣಿಸುತ್ತಿಲ್ಲ, ಅವರ ಪ್ರಕಾರ ಇದೊಂದು ಕ್ರಾಂತಿ. ಮಾಧ್ಯಮಗಳ ಪ್ರಕಾರ ಇದು ಭಾರತದ ಜನತೆಯ ಬಗ್ಗೆ ಟಾಟಾ ಸಂಸ್ಥಾನಕ್ಕಿರುವ ಕಾಳಜಿಯ ಪ್ರತೀಕ. ಇನ್ನೂ ಕೆಲವರ ಪ್ರಕಾರ ಇದು ಟಾಟಾನ ಸಾಮಾಜಿಕ ಜವಾಬ್ದಾರಿಯ ದ್ಯೋತಕ. ಸ್ಕೂಟರ್ ಸವಾರಿಯನ್ನು ಹಳಿಯುತ್ತಾ ಜಾಗತಿಕರಣ ಸೃಷ್ಟಿಸಿದ ಸೀಮಿತ ಅವಕಾಶಗಳನ್ನು ಪಡೆದುಕೊಂಡು ಮೇಲ್ಮುಖಿ ಚಲನೆಯಲ್ಲಿರುವ ಮಧ್ಯಮ ವರ್ಗಕ್ಕಂತೂ ರತನ್ ಟಾಟಾ ಈಗ ಭಾರತ ರತ್ನ!

ಟಾಟಾ ಸಂಸ್ಥಾನ ಈ ಮಧ್ಯೆ ತಾನು ಉದ್ಯಮದಲ್ಲಿರುವ ಬೇರೆಬೇರೆ ಕ್ಷೇತ್ರಗಳಲ್ಲಿ ಹಲವಾರು ವಿಸ್ತರಣಾ ಯೋಜನೆಗಳನ್ನು ಹಾಕಿಕೊಂಡಿದೆ. ಅವೆಲ್ಲದರ ಹಿಂದೆ ಇದ್ದದ್ದು ಕಡಿಮೆ ವೆಚ್ಚದಲ್ಲಿ ಅತ್ಯಧಿಕ ಲಾಭ ಪಡೆಯುವ ಆಸಕ್ತಿಗಳೆ ವಿನಃ ಭಾರತದ ಜನತೆಯ ಹಿತಾಸಕ್ತಿಯಲ್ಲ, ಉದಾಹರಣೆಗೆ ಎರಡು ವರ್ಷದ ಕೆಳಗೆ ಇದೇ ರತನ್ ಟಾಟಾರವರು ತಮ್ಮ ಸ್ಟೀಲ್ ಉದ್ಯಮದ ವಿಸ್ತರಣೆಯ ಭಾಗವಾಗಿ ಒರಿಸ್ಸಾದ ಕಳಿಂಗನಗರದಲ್ಲಿನ ಆದಿವಾಸಿಗಳನ್ನು ಬಲವಂತವಾಗಿ ಒಕ್ಕಲೆಬ್ಬಿಸಿ ಈಗ ಆ ಜಾಗದಲ್ಲಿ ಅತ್ಯಂತ ಅಗ್ಗದ ದರದಲ್ಲಿ ಗಣಿಗಾರಿಕೆಯನ್ನು ನಡೆಸುತ್ತಿದ್ದಾರೆ. ಕಳೆದ ವರ್ಷ ಪ್ರಾರಂಭವಾದದ್ದೇ ಈ ಯೋಜನೆಯ ವಿರುದ್ಧ ಪ್ರತಿಭಟಿಸುತ್ತಿದ್ದ ಕಳಿಂಗನಗರದ ಆದಿವಾಸಿಗಳ ಮಾರಣಹೋಮದಿಂದ. ಭಾರತದ ಜನತೆಗೆ ಜನತೆಯ ಕಾರನ್ನು ನೀಡಿದ ಜನಾಸುರಾಗಿ ಟಾಟಾಗೆ ಕಳಿಂಗನಗರದ ಆದಿವಾಸಿಗಳು ಭಾರತದ ಜನತೆ ಎಂದೆನಿಸಲೇ ಇಲ್ಲವೇಕೆ?

ಅಷ್ಟು ಮಾತ್ರವಲ್ಲ, ಇಡೀ ವಿಶ್ವವೇ ಕಂಡರಿಯದ ಕೈಗಾರಿಕಾ ದುರಂತಕ್ಕೆ ಕಾರಣರಾದ ಭೂಪಾಲಿನ ಯೂನಿಯನ್ ಕಾರ್ಬೈಡ್ ಕಂಪನಿಯನ್ನು ಈಗ ಅದರಷ್ಟೇ ಮಾರಕ ಮತ್ತು ಲಾಭಕೋರ ಕಂಪನಿಯಾದ ಡೌ ಎಂಬ ಅಮೆರಿಕದ ಕಂಪನಿ ಕೊಂಡುಕೊಂಡಿದೆ. ಈ ಕಂಪನಿ ಎರಡನೇ ಮಹಾಯುದ್ಧದಲ್ಲಿ ಜರ್ಮನಿಗೆ ಮಾರಕ ಅಸ್ತ್ರಗಳನ್ನು ಸರಬರಾಜು ಮಾಡಿದ ಮತ್ತು ಇರಾಕ್‌ನ ಸದ್ದಾಂ ಹುಸೇನ್ ಅಮೆರಿಕದ ಸ್ನೇಹಿತನಾಗಿದ್ದಾಗ ರಾಸಾಯನಿಕ ಅಸ್ತ್ರಗಳನ್ನು ಸರಬರಾಜು ಮಾಡಿದ ಕುಖ್ಯಾತ ಕಂಪನಿ.

ಅದೀಗ ಭಾರತವನ್ನು ಕೇಂದ್ರವಾಗಿಟ್ಟುಕೊಂಡು ಇಡೀ ದಕ್ಷಿಣ ಏಷಿಯಾದಲ್ಲಿ ಮಾರುಕಟ್ಟೆಯನ್ನು ಕಬಳಿಸುವ ಆಕ್ರಮಣಕಾರಿ ಮಾರ್ಕೆಟಿಂಗ್ ಯೋಜನೆಯನ್ನು ಹಾಕಿಕೊಂಡಿದೆ. ಆ ಉದ್ದೇಶದಿಂದಲೇ ಅದು ಭಾರತದ ಯೂನಿಯನ್ ಕಾರ್ಬೈಡ್ ಕಂಪನ್ನಿಯನ್ನು ಕೊಂಡುಕೊಂಡಿದೆ. ಆದರೆ ಈ ನೆಲದ ಕಾನೂನಿನ ಪ್ರಕಾರ ಡೌ ಯೂನಿಯನ್ ಕಾರ್ಬೈಡ್ ಕಂಪನಿಯನ್ನು ಕೊಂಡಮೇಲೆ ಅದರ ಜವಾಬ್ದಾರಿಯನ್ನೆಲ್ಲ ಹೊರಬೇಕಷ್ಟೆ. ಭೂಪಾಲಿನಲ್ಲಿರುವ ಆ ಕಾರ್ಖಾನೆಯನ್ನು ಲೀಕ್ ಆದ ಮೀಥೈಲ್ ಐಸೊ ಸಿಯನೇಟ್ ರಾಸಾಯನಿಕದಿಂದ ಮುಕ್ತಗೊಳಿಸುವ ಜವಾಬ್ದಾರಿಯೂ ಅದಕ್ಕಿತ್ತು. ಈ ಕೆಲಸ ಇನ್ನೂ ಆಗದೇ ಇರುವುದರಿಂದ ಭೂಪಾಲಿನ ಲಕ್ಷಾಂತರ ಜನ ಹಲವಾರು ಕಾಯಿಲೆಗಳನ್ನು ಅನುಭವಿಸುತ್ತಿದ್ದಾರೆ ಮತ್ತು ಅದು ಪೂರ್ಣವಾಗದೆ ಡೌ ಕಂಪನಿ ಭಾರತದಲ್ಲಿ ತನ್ನ ವಿಸ್ತರಣೆ ಮಾಡುವಂತಿಲ್ಲ.



ಆದರೆ ನಮ್ಮ ಟಾಟಾ ಮಹಾಶಯರು ಡೌ ಕಂಪನಿಯ ಜೊತೆ ತಮ್ಮ ರಾಸಾಯನಿಕ ಸರಕುಗಳ ಸಾಮ್ರಾಜ್ಯ ವಿಸ್ತರಣೆ ಮಾಡುವ ರಹಸ್ಯ ಯೋಜನೆ ಹೊಂದಿದ್ದರಿಂದ ಡೌ ಕಂಪನಿಯನ್ನು ಆ ಜವಾಬ್ದಾರಿಯಿಂದ ಮುಕ್ತಗೊಳಿಸಬೇಕೆಂದು ಇನ್ನಿಲ್ಲದ ಪ್ರಯತ್ನಗಳನ್ನು ಸತತವಾಗಿ ಮಾಡುತ್ತಿದ್ದಾರೆ. ಭೂಪಾಲ್ ದುರಂತದಿಂದ ಪ್ರಾಣ ಕಳೆದುಕೊಂಡವರಾಗಲೀ, ಅದರಿಂದ ಈಗಲೂ ಸಂತ್ರಸ್ತರಾಗಿರುವವರಾಗಲೀ ಭಾರತದ ಜನತೆಯೆಂದು ಟಾಟಾಗೇಕೆ ಅನಿಸುವುದಿಲ್ಲ? ಬದಲಿಗೆ ಯೂನಿಯನ್ ಕಾರ್ಬೈಡ್ ಕಂಪನಿಯ ಮಾಲೀಕ ಆಂಡರ್‌ಸನ್‌ಅನ್ನು ಯಾವ ಕಾರಣಕ್ಕೂ ಬಂಧಿಸಬಾರದೆಂದು ಭಾರತದ ಜನತೆಯ ವಿರುದ್ಧ ಆಂದೋಲನವನ್ನೇ ನಡೆಸಿದ್ದ ಆ ಕಂಪನಿಯ ಕಾನೂನು ಸಲಹೆಗಾರನಾದ ದೇವಿಡ್ ಗುಡ್ ಟಾಟಾದ ಅಮೆರಿಕನ್ ಕಾರ್ಪೊರೇಟ್ ಕಚೇರಿಯ ಮುಖ್ಯಸ್ಥನಾಗಿರುವುದೇಕೆ?

ರತನ್ ಟಾಟಾರನ್ನು ಮತ್ತು ಅವರ ನ್ಯಾನೋ ಕಾರನ್ನು ಜನತೆಯ ಕಾರೆಂದು ಸಂಭ್ರಮಿಸುತ್ತಾ ಟಾಟಾರನ್ನು ಜನತೆಯ ಉದ್ಯಮಿಯೆಂದು ಬಣ್ಣಿಸುತ್ತಿರುವ ಹೊತ್ತಿನಲ್ಲಿ ಅಹಿತಕರವಾದ ಈ ಪ್ರಶ್ನೆಗಳನ್ನು ಹಾಕಿಕೊಳ್ಳಲೇ ಬೇಕಿದೆ. ಏಕೆಂದರೆ ನ್ಯಾನೋ ಕಾರು ಟಾಟಾ ಸಾಮ್ರಾಜ್ಯದ ಕಾರು ಮಾರುಕಟ್ಟೆಯ ವಿಸ್ತರಣಾ ಯೋಜನೆಯೇ ಹೊರತು ಮತ್ತೇನೂ ಅಲ್ಲ, ಅಷ್ಟು ಮಾತ್ರವಲ್ಲ, ಕಡಿಮೆ ದರದ ಈ ಕಾರಿಗಾಗುವ ವೆಚ್ಚವನ್ನು ಟಾಟಾ ತನ್ನ ಲಾಭದ ದರವನ್ನು ಕಡಿಮೆ ಮಾಡಿ ಭರಿಸುತ್ತಿಲ್ಲ, ಏಕೆಂದರೆ ಒಂದು ಲಕ್ಷಕ್ಕೆ ಒಂದು ಕಾರು ಕೊಡಲು ಸಾಧ್ಯವಾದದ್ದು ತಮ್ಮ 500 ಜನ ತಂತ್ರಜ್ಞರು ಹಗಲು ರಾತ್ರಿ ಕೆಲಸ ಮಾಡಿ ಕಡಿಮೆ ವಚ್ಚದ ತಂತ್ರಜ್ಞಾನ ಮತ್ತು ವಸ್ತುಗಳನ್ನು ಬಳಸಿದ್ದಕ್ಕೆ ಎಂದು ಟಾಟಾ ಸಂಸ್ಥೆ ಹೇಳಿಕೊಳ್ಳುತ್ತಿದೆ. ಆದರೆ ಟಾಟಾ ತನ್ನ ಕಾರಿನ ದರವನ್ನು ಕಡಿಮೆ ಮಾಡಲು ಸಾಧ್ಯವಾದದ್ದು ಸರ್ಕಾರಗಳನ್ನು ಭ್ರಷ್ಟಗೊಳಿಸಿ ಜನರ ಕಣ್ಣಿಗೆ ಮಣ್ಣೆರೆಚುವ ಮೂಲಕ ಎಂಬುದನ್ನು ಮರೆಸಲಾಗುತ್ತಿದೆ.

ವಾರ್ಷಿಕ 1.5 ಲಕ್ಷ ಕಾರುಗಳನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಉಳ್ಳ ಈ ಕಾರ್ ಫ್ಯಾಕ್ಟರಿಯನ್ನು ಸ್ಥಾಪಿಸಲು ಆಗುವ ವೆಚ್ಚ 1700 ಕೋಟಿ ರೂಪಾಯಿಗಳು. ಇದರಲ್ಲಿ ಈ ಕಾರ್ಖಾನೆಗಾಗಿ ಭೂಮಿಯನ್ನು ಕೊಂಡುಕೊಳ್ಳಲು ತಗಲುವ ವೆಚ್ಚದಿಂದ ಮೊದಲುಗೊಂಡು ಅದನ್ನು ಅಭಿವೃದ್ಧಿಪಡಿಸಲು, ನೀರು, ವಿದ್ಯುತ್ ಇತ್ಯಾದಿಗಳ ವೆಚ್ಚ ಎಲ್ಲವೂ ಸೇರುತ್ತದೆ. ಇದಲ್ಲದೆ ಪ್ರತಿಯೊಂದು ಹಂತದಲ್ಲೂ ಸರ್ಕಾರಕ್ಕೆ ಕೊಡಬೇಕಾದ ತೆರಿಗೆ ವೆಚ್ಚವೂ ಸೇರಿರುತ್ತದೆ. ಆ ನಂತರದಲ್ಲಿ ಖಂಡಿತವಾಗಿ ಯಂತ್ರೋಪಕರಣಗಳ ಮತ್ತು ತಂತ್ರಜ್ಞಾನದ ವೆಚ್ಚ ಸೇರುತ್ತದೆ. ಆದರೆ ಒಟ್ಟಾರೆ ವೆಚ್ಚದಲ್ಲಿ ನೆಲ, ವಿದ್ಯುತ್, ನೀರು, ತೆರಿಗೆಗಳ ವೆಚ್ಚ ಏನಿಲ್ಲವೆಂದರೂ ಶೇ.30ರಿಂದ ಶೇ:40 ರಷ್ಟಾಗುತ್ತದೆ. ಆದರೆ ನ್ಯಾನೋ ಕಾರಿನ ಸಂದರ್ಭದಲ್ಲಿ ಈ ಶೇ.40 ರಷ್ಟು ವೆಚ್ಚವನ್ನು ಭರಿಸಿರುವುದು ಜನರೇ ಹೊರತು ಟಾಟಾ ಅಲ್ಲ.

ಉದಾಹರಣೆಗೆ ಈ ಕಾರು ಉತ್ಪಾದನೆಯಾಗುವುದು ಪ.ಬಂಗಾಳದ ಸಿಂಗೂರಿನಲ್ಲಿ, ಅಲ್ಲಿನ ಕಮ್ಯುನಿಸ್ಟ್ ಸರ್ಕಾರದ ಬೆಂಬಲದೊಂದಿಗೆ ಬಡ ರೈತಾಪಿಯಿಂದ ಬಲವಂತದಿಂದ 997 ಎಕರೆ ಜಮೀನನ್ನು ಕಸಿದು ಕೊಂಡು ನ್ಯಾನೊ ಕಾರ್ ಫ್ಯಾಕ್ಟರಿ ಸ್ಥಾಪಿಸಲಾಗುತ್ತಿದೆ. ಅದಿರಲಿ. ಬೇರೆ ಸಂದರ್ಭದಲ್ಲಿ ಈ 997 ಎಕರೆ ಜಮೀನಿಗೆ 140 ಕೋಟಿ ರೂ. ಪರಿಹಾರವನ್ನು ಕಂಪನಿ ನೀಡಬೇಕಾಗುತ್ತಿತ್ತು. ಆದರೆ ಇಲ್ಲಿ 140 ಕೋಟಿಗಳಲ್ಲಿ ಟಾಟಾ ನೀಡುತ್ತಿರುವುದು ಕೇವಲ ಇಪ್ಪತ್ತು ಕೋಟಿಗಳು ಮಾತ್ರ. ಅದೂ ಐದು ವರ್ಷಗಳಲ್ಲಿ. ಉಳಿದ 120 ಕೋಟಿಗಳನ್ನು ಪ. ಬಂಗಾಳದ ಸರ್ಕಾರವೇ ಬೊಕ್ಕಸದಿಂದ ನೀಡುತ್ತದೆ. ಅಂದರೆ ಜನರೇ ಟಾಟಾಗೆ ಸಬ್ಸಿಡಿ ನೀಡುತ್ತಿದ್ದಾರೆ.

ಅದೇರೀತಿ ಒಮ್ಮೆ ಜಮೀನನ್ನು ವಶಪಡಿಸಿಕೊಂಡ ನಂತರ ಆ ಭೂಮಿಯನ್ನು ಕಾರ್ಖಾನೆಗೆ ತಕ್ಕಂತೆ ಅಭಿವೃದ್ಧಿ ಪಡಿಸುವ ವೆಚ್ಚವೂ ಆ ಕಂಪನಿಯದ್ದೇ ಆಗಿರಬೇಕಿತ್ತು. ಆದರೆ ಇಲ್ಲಿ ಅದನ್ನು ಸರ್ಕಾರವೇ ಜನರ ದುಡ್ಡಿನಲ್ಲಿ ಟಾಟಾಗಾಗಿ ಮಾಡಿಕೊಡುತ್ತದೆ. ಉದಾಹರಣೆಗೆ ಸಿಂಗೂರಿನ ಆ ಪ್ರದೇಶದಲ್ಲಿ ಮಳೆ ಬಂದಾಗ

(18ನೇ ಪುಟಕ್ಕೆ)

ಎಲುಬಿಲ್ಲ ನಾಲಿಗೆಗೆ, ನಾಚಿಕೆಯಿಲ್ಲ!



“ಈವರೆಗೆ ಸಮಾಜವಾದಿ ನೆಲೆ ಹಾಗೂ ಜಾತ್ಯತೀತ ತತ್ವದಡಿ ಗುರುತಿಸಿಕೊಂಡಿರುವ ನಾವು ಈಗ ಕೋಮುವಾದಿಗಳ ಜೊತೆ ಕೈಗೂಡಿಸುವುದನ್ನು ಜನತೆ ಸಹಿಸುವುದಿಲ್ಲ.”

-ಎಂ.ಪಿ.ಪ್ರಕಾಶ್

ನೆಲವೇ ಡೊಂಕಿರುವಾಗ ಇವರು ಕುಣಿದಾರು ಹೇಗೆ?

“ಬಲಪಂಥೀಯರ ಮತ್ತು ಕಟ್ಟಾ ಎಡಪಂಥೀಯರ ಪ್ರತಿಗಾಮಿ ಮೈತ್ರಿ ಪ.ಬಂಗಾಳದಲ್ಲಿ ಅರಾಜಕತೆಯನ್ನು ಸೃಷ್ಟಿಸುತ್ತಿದೆ.”


-ಸಿಪಿಎಂ. ಪ.ಬಂಗಾಳ ರಾಜ್ಯ ಸಮಿತಿ

ವಾರದ ಅಪದ್ಧ

“ದ್ವಿತೀಯ ವಿಶ್ವಯುದ್ಧದ ಕಾಲದಲ್ಲಿ ಯಹೂದಿಗಳ ನರಹತ್ಯೆ ನಡೆದಿದೆ ಎನ್ನುವುದು ಅಮೆರಿಕನ್ನರು ಮತ್ತು ಜಿಯೋನಿಷ್ಟರು ರಚಿಸಿಕೊಂಡ ಕಟ್ಟುಕಥೆ.”

-ಸಿಲ್ವಿಯಾ ಸ್ಟಾಲ್ಫ್, ಜರ್ಮನ್ ವಕೀಲ

ನೋ ಕಾಮೆಂಟ್ಸ್



ನನ್ನ ದೃಷ್ಟಿಯಲ್ಲಿ ಭಾರತ ಮಾತ್ರವಲ್ಲ, ಇಡೀ ಭೂಮಿಯೇ ಪವಿತ್ರ, ಇ… ವಿಶ್ವದಲ್ಲಿರುವ 600 ಕೋ… ಜನಗಳಲ್ಲಿ 500 ಕೋಟಿ ಪಾಪಾತ್ಮರು ಎಂದರೆ ನಂಬಲು ಸಾಧ್ಯವೇ?

-ಪುತ್ತಿಗೆ ಮಠಾಧೀ…

“ರಾಜಕೀಯ ಬಿಟ್ಟೇನು. ಜೆಡಿಎಸ್ ಬಿಡುವುದಿ…

-ಅಲಂಗೂರು ಶ್ರೀನಿವಾ…

“ನಮ್ಮ ಜಯಕ್ಕಿಂತ ನಮ್ಮ ನಡವಳಿಕೆಯೇ … ಚರ್ಚೆಗೆ ಒಳಗಾದದ್ದು ನಿಜಕ್ಕೂ ಬೇಸರ ತರಿಸುತ್ತಿ…

-ರಿಕಿ ಪಾಂಟಿಂ…



“ಇತ್ತೀಚೆಗೆ ರಾಜಕೀಯ ಪಕ್ಷಗಳೂ ಪತ್ರಿಕೋದ್ಯಮ ಕ್ಷೇತ್ರವನ್ನು ಪ್ರವೇಶಿಸಿರುವುದರಿಂದ ಆ ಕ್ಷೇತ್ರದಲ್ಲಿ ಬ್ಲಾಕ್‌ಮೇಲ್ ಹ… ಹೆಚ್ಚುತ್ತಿದೆ.”

-ನ್ಯಾ.ಸಂತೋಷ್ ಹೆಗ್ಡೆ ಲೋಕಾಯ…

“ರಿಲಯನ್ಸ್ ಪವರ್ ಶೇರುಗಳಿಗೆ ವ್ಯಕ್ತವಾದ … ಖರೀದಿ ಬೆಂಬಲವು ಭಾರತದ ಭವಿಷ್ಯದಲ್ಲಿ ವಿಶ್ವ ಸ… ದಾಯವು ಇಟ್ಟಿರುವ ನಂಬಿಕೆಯನ್ನು ಪ್ರತಿಫಲಿಸುತ್ತ…

-ಪಿ.ಚಿದಂಬ…

“ನೀವು ಆಶಾವಾದಿಯಾಗದೆ ವಿಜ್ಞಾನಿಯಾ… ಸಾಧ್ಯವೇ ಇಲ್ಲ.”

-ನೊಬೆಲ್ ಪ್ರಶಸ್ತಿ ವಿಜೇತ ವಿ…
ದೇವಿಡ್ ಬಾಲ್ಟಿಮೊ…

ನಂಬಿದ್ರೆನಂಬಿ ಬಿಟ್ರೆಬಿಡಿ



“ರಾಷ್ಟ್ರಕ್ಕೆ ಮತ್ತು ಜನರಿಗೆ ಆರ್ಥಿಕ ಸ್ವಾತಂತ್ರ್ಯವನ್ನು ನೀಡುವುದು ನನ್ನ ಕಳಕಳಿಯ ಯತ್ನವಾಗಿದೆ.”

-ಮಾಯಾವತಿ

“ಸಿಂಗೂರಿನಲ್ಲಿ ಭೂಸ್ವಾಧೀನವನ್ನು ಮಾಡಿರು… ಸಾಮಾಜಿಕ-ಆರ್ಥಿಕ ಬೆಳವಣಿಗೆಗೆ ಮತ್ತು ಉದ… ಸೃಷ್ಟಿಗೆ.”

-ಕೊಲ್ಕತ್ತ ಉಚ್ಚ ನ್ಯಾಯಾ…

“ಭಾರತರತ್ನ ಪ್ರಶಸ್ತಿಯನ್ನು ರದ್ದುಗೊಳಿಸಿ. ಏಕೆ… ನಮ್ಮದು ರಾಜಸತ್ತೆಯಲ್ಲ, ಪ್ರಜಾಸತ್ತೆ.”

-ಸುಬ್ರಹ್ಮಣ್ಯಸ…

“ಹುಟ್ಟನಿಂದಲ್ಲ, ಸೃಜನಶೀಲ ಹಾಗೂ ಆದರ್ಶ… ಜೀವನವನ್ನು ನಡೆಸುವವನೇ ನಿಜವಾದ ಬ್ರಾಹ್ಮ…

-ಪುಂಡಲೀಕ ಹಾಲ…

ಅಮೆರಿಕ ಎಂಬ ಬಿನ್ ಲಾಡೆನ್…

“ಸಾಕ್ಷಾತ್ ಒಸಾಮ ಬಿನ್ ಲಾಡೆನ್ ವ… ನಿಂತು ಈ ದಾಳಿಯ ಹೊಣೆಯನ್ನು ತಾನೇ … ಕೊಂಡರೂ ನಿಜವಾಗಿ ಅದು ಸಿಐಎ ಮತ್ತು ಇಸ್ರೆ… ಮೊಸ್ಸಾದ್‌ಗಳ ಜಂಟಿ ಕೃತ್ಯ ಎನ್ನುವುದು ಯುರೋ… ಮತ್ತು ಅಮೆರಿಕಗಳ ಎಲ್ಲಾ ಬೇಹುಗಾರಿಕಾ ಸಂಸ್ಥೆಗ… ಈಗ ಚೆನ್ನಾಗಿ ತಿಳಿದಿದೆ.”

-ಫ್ರಾನ್ಸಿಸ್ಕೋ ಕೊಸ…
ಇಟಲಿಯ ಮಾಜಿ ಅ…

ಯಾವ ಭಾರತಕ್ಕೆ ಸೇರಿದವರು…



“ಬೌದ್ಧಿಕವಾಗಿ, ದೈಹಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ನಾ… ಭಾರತಕ್ಕೆ ಸೇರಿದವನು.”

-ದಲೈಲಾ…

ಗಾಂಧೀನಗರಕ್ಕೆ ಕೇಳಿಸೀತೆ?

“ಅಮೀರ್‌ಖಾನರ ಚೊಚ್ಚಲ ನಿರ್ದೇಶನದ ಚಿತ್ರ 'ತಾರೇ ಜಮೀನ್ ಪರ್' ಬಿಡುಗಡೆಗೊಂ… ನಾಲ್ಕೇ ವಾರಗಳಲ್ಲಿ 77 ಕೋಟಿ ರೂ. ಗಳಿಸಿದೆ.”

-ಪತ್ರಿಕಾ



ಕಂಡಹಾಗೆ

ಮರೆ ಮಾಚಿದ ಇತಿಹಾಸದ ಬಗ್ಗೆ....

ಮೊನ್ನೆ ಎಡ್ಮಂಡ್ ಹಿಲೇರಿ ತೀರಿಹೋಗಿದ್ದರ ಬಗ್ಗೆ ವರದಿ ಮಾಡಿದ ಎಲ್ಲಾ ಮಾಧ್ಯಮಗಳು ಮೌಂಟ್ ಎವರೆಸ್ಟ್ ಬಗ್ಗೆಯೂ ಬರೆದಿದ್ದವು. ಆದರೆ ಬಹಳಷ್ಟು ಜನಕ್ಕೆ ಗೊತ್ತಿಲ್ಲದಿರುವುದೇನೆಂದರೆ ಯಾವುದನ್ನು ನಾವೆಲ್ಲ ಇವತ್ತು ಮೌಂಟ್ ಎವರೆಸ್ಟ್ ಎಂದು ಕರೆಯುತ್ತೇವೋ ಆ ಶಿಖರವನ್ನು ನೇಪಾಳದ ಜನ ಸಾಗರಮಾತಾ ಎಂದೂ, ಟಿಬೆಟ್‌ನ ಜನ ಚಿಮೋಲುಂಗ್ಮಾ ಎಂದೂ, ಭಾರತದ ಜನ ಗೌರಿಶಂಕರ ಎಂದೂ ಕರೆಯುತ್ತಿದ್ದರು.

ಆದರೆ ಯಾವಾಗ 1865 ರಲ್ಲಿ ಅಂದಿನ ಬ್ರಿಟಿಷ್ ಸಾಮ್ರಾಜ್ಯದ ಸರ್ವೇಯರ್ ಜನರಲ್ ಆಫ್ ಇಂಡಿಯಾ ಸರ್ ಜಾರ್ಜ್ ಎವರೆಸ್ಟ್ ಎಂಬ ಅಧಿಕಾರಿ ಆ ಶಿಖರವನ್ನು ಅಳೆತ ಮಾಡಿದನೋ, ಆನಂತರ ಅದಕ್ಕೆ ಆತನ ಹೆಸರನ್ನೇ ಬ್ರಿಟಿಷರು ಇಟ್ಟರು. ಈಗ ಅದರ ಸುತ್ತಮುತ್ತಲಿನ ಜನ ಇಟ್ಟಿದ್ದ ಹೆಸರು ಮಾಯವಾಗಿ ಎಲ್ಲರಿಗೂ ಅದು ಮೌಂಟ್ ಎವರೆಸ್ಟ್ ಎಂದೇ ಪರಿಚಿತವಾಗಿದೆ.

ಇದನ್ನು ಯಾಕೆ ಹೇಳುತ್ತಿದ್ದೇನೆಂದರೆ ಇತ್ತೀಚೆಗೆ ಎಡ್ವಾರ್ಡೊ ಗಲಿಯಾನೊ ಎಂಬ ಉರುಗ್ವೆ ದೇಶದ ಖ್ಯಾತ ಪತ್ರಕರ್ತ ಮತ್ತು ಬರಹಗಾರ ಜನರ ಇತಿಹಾಸವನ್ನು ಹೇಗೆ ಪಟ್ಟಭದ್ರ ಹಿತಾಸಕ್ತಿಗಳು ಮರೆಮಾಚುತ್ತವೆ ಎಂಬುದನ್ನು ಕುರಿತು ಒಂದು ಪುಸ್ತಕ ಬರೆದಿದ್ದಾರೆ.

"ಇತಿಹಾಸವು ನಡೆದಾಡುವ ವಿರೋಧಾಭಾಸವಿದ್ದಂತೆ ಮತ್ತು ಅಸಮಂಜಸತೆ ಅದರ ಕಾಲುಗಳನ್ನು ನಿಯಂತ್ರಿಸುತ್ತಿರುತ್ತದೆ. ಆ ಕಾರಣದಿಂದಾಗಿಯೇ ಇತಿಹಾಸದ ಮೌನದಲ್ಲೇ ಹಲವಾರು ಸತ್ಯಗಳು ಅಡಗಿರುತ್ತವೆ ಮತ್ತು ಹಲವೊಮ್ಮೆ ಸುಳ್ಳು ಹೇಳುವ ಮೂಲಕವೂ ಸತ್ಯವನ್ನು ತೆರೆದಿಡುತ್ತದೆ" ಎಂದು ಹೇಳಿರುವ ಗಲಿಯಾನೊ ಅಂತಹ ಹಲವು ಸತ್ಯಗಳನ್ನು ತಮ್ಮ ಪುಸ್ತಕದಲ್ಲಿ ಪಟ್ಟಿ ಮಾಡಿದ್ದಾರೆ. ಅವುಗಳಲ್ಲಿ ಒಂದು ಉದಾಹರಣೆ ಮೌಂಟ್ ಎವರೆಸ್ಟ್ ವೃತ್ತಾಂತವನ್ನೇ ಹೋಲುತ್ತದೆ. ಅದು ಬ್ರಿಟಿಷ್ ವಸ್ತುಸಂಗ್ರಹಾಲಯದಲ್ಲಿರುವ ಎಲ್ಗಿನ್ ಅಮೃತಶಿಲೆಗಳಿಗೆ ಸಂಬಂಧಪಟ್ಟಿದ್ದು. ಗ್ರೀಕ್ ದೇಶದಲ್ಲಿನ ಪಾರ್ಥೆನಾನ್ ಮೂಲದ ಈ ಶಿಲೆಗಳಿಗೆ ಇದ್ದ ಸ್ಥಳೀಯ ಹೆಸರು ಫಿಡಿಯಾಸ್. ಆದರೆ ಅವುಗಳನ್ನು ಎಲ್ಗಿನ್ ಎಂಬ ಬ್ರಿಟಿಷ್ ವ್ಯಕ್ತಿ ವಸ್ತುಸಂಗ್ರಹಾಲಯಕ್ಕೆ ಮಾರಿದ್ದರಿಂದ ಆತನ ಹೆಸರನ್ನೇ ಅದಕ್ಕೆ ನೀಡಲಾಗಿದೆ. ಆ ಮೂಲಕ ಅವುಗಳ ಸ್ಥಳೀಯ ಇತಿಹಾಸವನ್ನೇ ಮರೆಮಾಚಲಾಗಿದೆ.

ಗಲಿಯಾನೊ ಇಂತಹದ್ದೇ ಹಲವಾರು ಇತರೆ ಉದಾಹರಣೆಗಳನ್ನೂ ನೀಡಿದ್ದಾರೆ. ವಿಶ್ವ ಇತಿಹಾಸವನ್ನರಿಯಲು ಅವು ನೆರವಾಗಬಹುದೆಂಬ ಕಾರಣಕ್ಕೆ ಇಲ್ಲಿ ಹಲವನ್ನು ನೀಡಿದ್ದೇನೆ.


■ ಯೂರೋಪಿನ ಪುನರುಜ್ಜೀವನಕ್ಕಾಗಿ ನೆರವಾದದ್ದು ಗನ್ ಪೌಡರ್, ದಿಕ್ಸೂಚಿ ಮತ್ತು ಮುದ್ರಣ ಯಂತ್ರ ಎಂಬ ಸಂಶೋಧನೆಗಳು. ಆದರೆ ವಾಸ್ತವವಾಗಿ ಈ ಮೂರು ಪಸ್ತುಗಳನ್ನು ಚೀನಾ ದೇಶದವರು ಅದಕ್ಕೂ ಮುನ್ನವೇ ಸಂಶೋಧಿಸಿದ್ದರು. ಮಾತ್ರವಲ್ಲ ಚೀನಿಯರ ಇತರೆ ಸಂಶೋಧನೆಗಳನ್ನು ಯೂರೋಪಿಯನ್ನರು 'ಮರು ಸಂಶೋಧಿಸುತ್ತಾ' ಅವುಗಳು ತಮ್ಮ ಕೊಡುಗೆಗಳು ಎಂದು ಹೇಳಿದರು.

■ ಅರ್ಜೆಂಟಿನಾದಲ್ಲಿರುವ ಅತಿ ಎತ್ತರದ ಸ್ಮಾರಕಕ್ಕೆ ಜನರಲ್ ರೋಕಾನ ಹೆಸರಿಡಲಾಗಿದೆ. ಈ ಪ್ರದೇಶಕ್ಕೆ ರೋಕಾನ ಕೊಡುಗೆ ಏನೆಂದರೆ ಪಟಗೊನಿಯಾದಲ್ಲಿದ್ದ ಬುಡಕಟ್ಟು ಜನರನ್ನು 19 ನೇ ಶತಮಾನದಲ್ಲಿ ನಿರ್ನಾಮ ಮಾಡಿದ್ದು.

■ ಜಾನ್ ಲಾಕೀ ಎಂಬ ಸ್ವಾತಂತ್ರ್ಯದ ಬಗೆಗಿನ ತತ್ವಜ್ಞಾನಿ ರಾಯಲ್ ಆಫ್ರಿಕಾ ಕಂಪನಿಯ ಶೇರುದಾರನಾಗಿದ್ದ. ಆ ಕಂಪನಿಯ ಮುಖ್ಯ ಕಸುಬು ಆಫ್ರಿಕಾದ ಜನರನ್ನು ಗುಲಾಮರನ್ನಾಗಿಸಿ ಕೊಂಡು-ಮಾರುವುದು.

■ ಗುಲಾಮರನ್ನು ಸಾಗಿಸಲು ಬಳಸುತ್ತಿದ್ದ ಹಲವು ಹಡಗುಗಳ ಹೆಸರುಗಳು ವೋಲ್ಟೇರ್, ಜೀಸಸ್, ವಿಶ್ವಾಸ, ಸಮಾನತೆ ಮತ್ತು ಸ್ನೇಹ ಎಂಬುದಾಗಿತ್ತು.

■ ಅಮೆರಿಕವನ್ನು ಸ್ಥಾಪಿಸಿದ ಇಬ್ಬರು ಹಿರಿಯರ ಹೆಸರುಗಳು ಅಧಿಕೃತ ಇತಿಹಾಸದಿಂದಲೇ ಮರೆಯಾಗಿವೆ. ಯಾಕೆಂದರೆ. ಅವರಲ್ಲಿ ರಾಬರ್ಟ್


ಎಡ್ವಾರ್ಡೊ ಗಲಿಯಾನೊ

ಕಾರ್ಟರ್ ಎಂಬಾತ ತನಗಾಗಿ ದುಡಿಯುತ್ತಿದ್ದ ಕರಿಯರಿಗೂ ಸ್ವಾತಂತ್ರ್ಯ ನೀಡಿದ್ದ ಮತ್ತು ಗವರ್ನರ್ ಮೋರಿಸ್ ಎಂಬಾತ ಕರಿಯ ಗುಲಾಮರು ಇತರರಿಗಿಂತ ಕೀಳು ಎಂಬ ಅಂಶವನ್ನು ಸಂವಿಧಾನದಲ್ಲಿ ಸೇರಿಸುವುದನ್ನು ವಿರೋಧಿಸಿದ್ದ. ಅವರ ಈ ನಿಲುವಿನಿಂದಾಗಿಯೇ ಅವರಿಬ್ಬರನ್ನು ಈಗ ಸಾಮಾ ಹಿಕ ನೆನಪಿನಿಂದಲೇ ಗಡಿಪಾರು ಮಾಡಲಾಗಿದೆ.

■ 1234 ರಿಂದ ಏಳು ಶತಮಾನಗಳ ಕಾಲ ಚರ್ಚ್‌ಗಳಲ್ಲಿ ಮಹಿಳೆಯರು ಹಾಡುವುದನ್ನು ನಿಷೇಧಿಸಲಾಗಿತ್ತು. ಕಾರಣ ಅವರ ದನಿಗಳು ಅಪವಿತ್ರವೆಂದು ಭಾವಿಸಲಾಗಿತ್ತು.

■ 1793 ರ ಫ್ರೆಂಚ್ ಕ್ರಾಂತಿಯ ನಂತರ ಸ್ವಾತಂತ್ರ, ಸಮಾನತೆ ಮತ್ತು ಭ್ರಾತೃತ್ವ ಎಂಬ ಮೂರು ಸೂತ್ರಗಳನ್ನು ಘೋಷಿಸಿದಾಗ 'ಪುರುಷರ ಹಕ್ಕುಗಳು' ಎಂಬ ಕಾನೂನನ್ನು ಪ್ರಕಟಿಸಲಾಗಿತ್ತು. ಆಗ ಕ್ರಾಂತಿಕಾರಿ ತೀವ್ರವಾದಿ ಒಲಿಂಪಿಯಾ ದೆ ಗೂಜ್ ಎಂಬಾಕೆ 'ಮಹಿಳೆಯರ ಹಕ್ಕುಗಳು' ಎಂಬ ಕಾನೂನನ್ನೂ ಪ್ರಕಟಿಸಬೇಕು ಎಂದು ಒತ್ತಾಯಿಸಿದ್ದಳು. ಹಾಗೆ ಕೇಳಿದ್ದಕ್ಕೆ ಅವಳ ಶಿರಚ್ಛೇಧನೆ ಮಾಡಲಾಯಿತು.

■ ರಾಣಿ ಥಿಯೊಡೋರಾಳನ್ನು ಯಾರೂ ಕ್ರಾಂತಿಕಾರಿ, ಮಹಿಳಾವಾದಿ ಎಂದು ನೆನಪಿಸಿಕೊಳ್ಳುವುದಿಲ್ಲ. ಆದರೆ 1500 ವರ್ಷಗಳ ಹಿಂದೆ ಆಳಿದ್ದ ಈಕೆ ಮಹಿಳೆಯರಿಗೆ ಗರ್ಭಪಾತ ಮತ್ತು ವಿಚ್ಛೇದನಾ ಹಕ್ಕುಗಳನ್ನು ನೀಡಿದ್ದ ಪ್ರಥಮ ಮಹಿಳಾವಾದಿ.

■ ಚೀನಾದ ಪೀಕಿಂಗ್‌ನಿಂದ ಯೂರೋಪಿಗೆ ತಂದ ಪ್ರಥಮ ಪೀಕಿನೀಸ್ ನಾಯಿಗೆ ಇಂಗ್ಲಿಷರು 'ಲೂಟಿ' ಎಂದು ಹೆಸರಿಟ್ಟರು. ಬ್ರಿಟಿಷರು ಚೀನಾ ದೇಶವನ್ನು ಲೂಟಿ ಹೊಡೆದದ್ದರ ಸಂಕೇತವಾಗಿ ಆ ಹೆಸರು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ.

■ ಮುಕ್ತ ವ್ಯಾಪಾರ ಮತ್ತು ಸ್ವಾತಂತ್ರ್ಯದ ಹೆಸರಲ್ಲಿ ಪರಗ್ವೇ ದೇಶವನ್ನು 1870 ರಲ್ಲಿ ಸಂಪೂರ್ಣವಾಗಿ ನಾಶ ಮಾಡಲಾಯಿತು. ಅಲ್ಲಿಯವರೆಗೂ ಒಂದೇ ಒಂದು ನಯಾಪೈಸೆಯ ಸಾಲವನ್ನು ಮಾಡಿರದಿದ್ದ ಆ ದೇಶ ಐದು ವರ್ಷಗಳ ಯುದ್ಧದ ನಂತರ ಎಷ್ಟು ತತ್ತರಿಸಿತ್ತೆಂದರೆ ಪ್ರಥಮ ಬಾರಿಗೆ ಇಂಗ್ಲೆಂಡಿನಿಂದ ಸಾಲ ಪಡೆದು ಬ್ರೆಜಿಲ್, ಅರ್ಜೆಂಟಿನಾ ಮತ್ತು ಉರುಗ್ವೆ ದೇಶಕ್ಕೆ ನೀಡಿತು. ಕೊಲ್ಲಲ್ಪಟ್ಟ ದೇಶವೇ ತನ್ನ ಕೊಲೆಗಡುಕರಿಂದ ಹಣ ಸಾಲ ಪಡೆಯುವಂತ ಪರಿಸ್ಥಿತಿ ಆದಾಗಿತ್ತು.

■ ಕುಖ್ಯಾತ ಚಿತ್ರಹಿಂಸೆಯ ಯಾತನಾ ಶಿಬಿರಗಳನ್ನು ಮೊದಲ ಬಾರಿ ಆಫ್ರಿಕಾದಲ್ಲಿ ಪ್ರಾರಂಭಿಸಿದವರು ಬ್ರಿಟಿಷರು. ಆನಂತರ 2 ನೇ ವಿಶ್ವ ಮಹಾಯುದ್ಧದಲ್ಲಿ ಯಹೂದಿಯರನ್ನು ಕೊಲ್ಲಲು ಅದನ್ನು ಉಪಯೋಗಿಸಿದವರು ಜರ್ಮನರು.

■ 1936 ರ ಒಲಪಿಂಕ್ಸ್ ಅನ್ನು ಆಯೋಜಿಸಿದ್ದು ಹಿಟ್ಲರ್. ಅಂದು ಫುಟ್‌ಬಾಲ್‌ನಲ್ಲಿ ಆಸ್ಟ್ರಿಯಾ ದೇಶವನ್ನು ಪೇರು ದೇಶ ಸೋಲಿಸಿತ್ತು. ಹಿಟ್ಲರ್‌ನ ಜನ್ಮಭೂಮಿ ಆಸ್ಟ್ರಿಯಾ ಆಗಿದ್ದರಿಂದ ಆ ಮ್ಯಾಚನ್ನೇ ಒಲಂಪಿಕ್ಸ್ ಸಮಿತಿ ರದ್ದುಗೊಳಿಸಿತ್ತು.

■ ಕೊಲೆಗಡುಕ ಹಿಟ್ಲರ್ ಕಾರ್ಪೊರೇಟ್ ಕಂಪನಿಗಳ ಮಿತ್ರನಾಗಿದ್ದ. ಎರಡನೇ ಮಹಾಯುದ್ಧ ನಡೆಯುತ್ತಿದ್ದಾಗಲೇ ಜರ್ಮನ್ ಮಾರುಕಟ್ಟೆಗೆಂದು ಕೋಕೊಕೋಲಾ ಕಂಪನಿ ಫಾಂಟಾ ಎಂಬ ಪಾನೀಯವನ್ನು ತಯಾರಿಸಿತ್ತು. ಹಾಗೆಯೇ IBM ಕೂಡ ಯಹೂದಿಯರನ್ನು ಗುರುತಿಸುವ ಮತ್ತು ವರ್ಗೀಕರಿಸುವ ತಂತ್ರಜ್ಞಾನವನ್ನೂ ನೀಡಿತ್ತು.

■ 1953 ರಲ್ಲಿ ಕಮ್ಯುನಿಸ್ಟ್ ಜರ್ಮನಿಯಲ್ಲಿ ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಪ್ರತಿಭಟಿಸಿ ಬೀದಿಗಿಳಿದರು. ಆಗ ರಷ್ಯಾದ ಮಿಲಿಟರಿ ಟ್ಯಾಂಕ್‌ಗಳು ಅವರ ಬಾಯನ್ನು ಬಂದ್ ಮಾಡಿದ್ದವು. ಇದನ್ನು ನೋಡಿ ಬರ್ಟೋಲ್ಟ್ ಬ್ರೆಕ್ಟ್ ಎಂಬ ಖ್ಯಾತ ನಾಟಕಕಾರ ಒಂದು ಸಲಹೆಯನ್ನು ನೀಡಿದ್ದ: "ಸರ್ಕಾರವೇ ತನ್ನ ಪ್ರಜೆಗಳನ್ನು ನಾಶ ಮಾಡಿ ತನಗೆ ಸೂಕ್ತವಾದ ಜನರನ್ನು ಆಯ್ಕೆ ಮಾಡಿಕೊಳ್ಳುವುದು ಸುಲಭವಲ್ಲವೇ?"

■ 1964 ರಲ್ಲಿ ಟಾನ್ಕಿನ್ ಬೇ ಎಂಬಲ್ಲಿ ವಿಯಟ್ನಾಮ್ ಸೈನ್ಯವು ಅಮೆರಿಕದ ಎರಡು ಹಡಗುಗಳ ಮೇಲೆ ದಾಳಿ ನಡೆಸಿದೆ ಎಂದು ಆರೋಪಿಸಿ ಅಮೆರಿಕ ವಿಯಟ್ನಾಮ್ ಮೇಲೆ ಯುದ್ಧ ಸಾರಿತು. ಸಾವಿರಾರು ವಿಯಟ್ನಾಮ್ ಜನರನ್ನು ಹತ್ಯೆ ಮಾಡಿದ ನಂತರ ಅಮೆರಿಕದ ರಕ್ಷಣಾ ಸಚಿವ ಟಾನ್ಕಿನ್ ಬೇವಲ್ಲಿ ಯಾವುದೇ ದಾಳಿ ನಡೆದಿರಲಿಲ್ಲ ಎಂದು ಒಪ್ಪಿಕೊಂಡ.

ನಲವತ್ತು ವರ್ಷಗಳ ನಂತರ ಇರಾಕ್ ಮೇಲೂ ಇಂತಹದ್ದೇ ಕುತಂತ್ರವನ್ನು ಅಮೆರಿಕ ನಡೆಸಿತು.

■ ಇರಾಕಿನಲ್ಲಿ ನಾಗರೀಕತೆಯನ್ನು ಸ್ಥಾಪಿಸಲೆಂದು ಅಮೆರಿಕ ದಾಳಿ ಮಾಡುವ ಸಾವಿರ ವರ್ಷಗಳ ಹಿಂದೆಯೇ ಈ 'ಹಿಂದುಳಿದ' ಪ್ರದೇಶದಲ್ಲಿ ಜಗತ್ತಿನ ಪ್ರಪ್ರಥಮ ಪ್ರೇಮ ಕವನವನ್ನು ರಚಿಸಲಾಗಿತ್ತು. ಸುಮೇರಿಯಾ ಭಾಷೆಯಲ್ಲಿರುವ ಈ ಕವನವನ್ನು ಮಣ್ಣಿನ ಮೇಲೆ ಬರೆಯಲಾಗಿತ್ತಲ್ಲದೆ ಅದು ದೇವತೆ ಮತ್ತು ಕುರುಬನೊಬ್ಬನ ಪ್ರೇಮ ಪ್ರಸಂಗ ಕುರಿತದ್ದಾಗಿತ್ತು.

ಇದು ನಿಜವಾದ ಇತಿಹಾಸ, ಜನರನ್ನು ಬಲಿ ತೆಗೆದುಕೊಂಡ ಇತಿಹಾಸ, ಸಂಸ್ಕೃತಿಗಳನ್ನು ನಾಶ ಮಾಡಿದ ಇತಿಹಾಸ. ಆದರೆ ಪಟ್ಟಭದ್ರದ ದೃಷ್ಟಿಕೋನದಿಂದ ಬರೆದ ಇತಿಹಾಸದಲ್ಲಿ ಈ ಯಾವುದಕ್ಕೂ ಪ್ರಾಮುಖ್ಯತೆ ಇರುವುದಿಲ್ಲ.

-ಗೌರಿ ಲಂಕೇಶ್

ಮುಂದಿನ ವಾರದಿಂದ ಲಂಕೇಶ್....12/- ರೂ

ಮುಂದಿನ ಸಂಚಿಕೆಯಿಂದ ನಿಮ್ಮ 'ಲಂಕೇಶ್' ವಾರ ಪತ್ರಿಕೆಯ ಬೆಲೆ ಇನ್ನೆರಡು ರೂ. ಜಾಸ್ತಿಯಾಗ ಲಿದೆ. ಬೇರೆಲ್ಲಾ ವಾರಪತ್ರಿಕೆಗಳ ಬೆಲೆ ಈಗಾಗಲೇ 12/- ರೂ. ತಲುಪಿ ಬಹಳ ತಿಂಗಳುಗಳಾಗಿವೆ. ಆದರೆ ನಾವು ನ್ಯೂಸ್ ಪ್ರಿಂಟ್, ಸಾರಿಗೆ, ಸಂಬಳ ಮತ್ತಿತರ ಖರ್ಚುಗಳ ಹೊರೆ ನಮ್ಮ ಮನೆ ಬಾಗಿಲವರೆಗೂ ಬರುವತನಕ ಸಹಿಸಿಕೊಂಡೇ ಬಂದಿದ್ದೇವು.

ಈಗ ನೀವೊಂಚೂರು ಹೆಗಲು ನೀಡಿ ನಮಗೆ ನೆರವಾಗಿ. ನೀವು ತೆರುವ ಕೇವಲ 2 ರೂ. ಪತ್ರಿಕೆಗೆ ಆಕ್ಸಿಜನ್ ನೀಡುತ್ತದೆ.

-ಪಿ.ಎಲ್

2008ರ ವಿಶೇಷಾಂಕ!

ಬರುವ ಮಾರ್ಚ್ ತಿಂಗಳಲ್ಲಿ ನಿಮ್ಮ ಈ ಪತ್ರಿಕೆಗೆ ಮೂರು ವರ್ಷಗಳಾಗುತ್ತವೆ. ಅದರ ಪ್ರಯುಕ್ತ ಒಂದು ವಿಶಿಷ್ಟವಾದ ವಿಶೇಷಾಂಕವನ್ನು ತರಲಿದ್ದೇವೆ. ಆ ವಿಶೇಷಾಂಕಕ್ಕೆ ನಮ್ಮ ಓದುಗ ಮಿತ್ರರಿಗೆ ಈ ಬಾರಿ ಆಯ್ಕೆ ಮಾಡಿರುವ ವಿಷಯ

ಇಂಗ್ಲಿಷ್ ನನ್ನನ್ನು ಹೆದರಿಸಿದ ಬಗೆ!

ನಿಮ್ಮಲ್ಲಿ ಬಹಳಷ್ಟು ಜನ ಇಂಗ್ಲಿಷ್ ಎಂಬ ಭಾಷೆಯಿಂದಾಗಿ ತಮಾಷೆಯ, ಗಂಭೀರವಾದ ಪ್ರಸಂಗಗಳನ್ನು ಖಂಡಿತವಾಗಿಯೂ ಎದುರಿಸಿರುತ್ತೀರಿ. ಆ ಪ್ರಸಂಗವನ್ನು ಕುರಿತು ನಿಮ್ಮ ಅನುಭವವನ್ನು ತಿಳಿಸಿರಿ. ಚೆನ್ನಾಗಿದ್ದವನ್ನು ಆಯ್ಕೆ ಮಾಡಿ ವಿಶೇಷಾಂಕದಲ್ಲಿ ಪ್ರಕಟಿಸುತ್ತೇವೆ. ನಿಮ್ಮ ಬರಹ 200 ಪದಗಳಿಗೆ ಸೀಮಿತವಾಗಿರಲಿ ಮತ್ತು ಜನವರಿ 31ರೊಳಗೆ ನಮ್ಮನ್ನು ತಲುಪಲಿ.

Murder for gain, ಅಂದರೆ ಲಾಭಕ್ಕಾಗಿ ಕೊಲೆ!

ದಂಡುಪಾಳ್ಯದ ನರಹಂತಕರು, ಪಾತಕಿಗಳಾದ ಶ್ಯಾಮ್ ಮತ್ತು ರವಿ, ವಿಕೃತಕಾಮಿ ಉಮೇಶ್ ರೆಡ್ಡಿ ಮತ್ತು ಇತ್ತೀಚಿನ ಲೇಡಿ ಕಿಲ್ಲರ್ ಮಲ್ಲಿಕಾ ಮುಂತಾದವರನ್ನು ವಿಚಾರಿಸಿಕೊಳ್ಳಲು ಪೊಲೀಸರಿದ್ದಾರೆ, ಕೋರ್ಟಿದೆ. ಇವತ್ತಲ್ಲ ನಾಳೆ ಗಲ್ಲುಶಿಕ್ಷೆ ತಪ್ಪಿದ್ದಲ್ಲ ನಿಜ. ಆದರೆ ಡಾ. ಗೋಪಿನಾಥ್ ಎಂಬ ಕೊಲೆಗಡುಕನನ್ನು ನೇಣಿಗೆ ಹಾಕುವವರ್‍ಯಾರು?

ದಂಡುಪಾಳ್ಯದ ಹಂತಕರು ಮಾಡಿದ್ದನ್ನೇ ಈತ ಡಾಕ್ಟರ್ ವೇಷದಲ್ಲಿ ಮಾಡುತ್ತಾ ಬಂದಿದ್ದಾನೆ. ಸಣ್ಣದೊಂದು ಕ್ಯಾನ್ಸರ್ ಗಡ್ಡೆಯನ್ನು ಕುಯ್ದು ಹೊರತೆಗೆಯುವುದು ಸುಲಭ. ಕಿದ್ವಾಯಿಯಂಥ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನಿಧಾನ ಮತ್ತು ಆರೈಕೆಯಲ್ಲಿ ಅಸಡ್ಡೆ ಎಂಬುದನ್ನು ಬಿಟ್ಟರೆ ದುಡ್ಡಿಗಾಗಿ ರೋಗಿಗಳನ್ನು ಕೊಲ್ಲುವುದಿಲ್ಲ. ಅಂಥಾ ಮಲ್ಯ, ಅಪೊಲೋ ಥರದ ಆಸ್ಪತ್ರೆಗಳೇ ರೋಗಿಗಳಿಂದ ದುಡ್ಡು ಸುಲಿಯುತ್ತವೆಯೇ ಹೊರತು ಇಷ್ಟೊಂದು ಲಜ್ಜೆಗೆಟ್ಟು ರೋಗಿಯ ಪ್ರಾಣದೊಂದಿಗೆ ಚೆಲ್ಲಾಡುವುದಿಲ್ಲ, ಆದರೆ ಡಾ. ಗೋಪಿನಾಥ್ ನರಹಂತಕ. ದುಡ್ಡಿಗಾಗಿ ಕರ್ನಾಟಕದ ಖ್ಯಾತ ವ್ಯಂಗ್ಯ ಚಿತ್ರಕಾರ ಪಿ. ಮಹಮ್ಮದ್‌ರ ಹದಿಹರೆಯದ ಪತ್ನಿಯನ್ನೇ ಕೊಂದು ಹಾಕಿದ್ದಾನೆ. ಮತ್ತೊಬ್ಬ ಪತ್ರಕರ್ತೆ ತುಂಗರೇಣುಕ ಈತನ ಯಮಪಾಷದಿಂದ ಬಚಾವಾದರೂ ಈತನಕ ಚೇತರಿಸಿಕೊಂಡಿಲ್ಲ. ಸಣ್ಣಪುಟ್ಟ ಕ್ಯಾನ್ಸರ್ ರೋಗಿಗಳೇನಾದರೂ ಡಾ. ಗೋಪಿನಾಥ್ ಕೈಗೆ ಸಿಲುಕಿದರೆಂದರೆ ಮತ್ತೆ ಜೀವಂತವಾಗಿ ಹೊರಬರುವುದಿಲ್ಲ!




ಡಾ.ವಿಷ್ಣುವರ್ಧನ್ ಜೊತೆ ತುಂಗ ರೇಣುಕ

ಇಂಥ ರಕ್ತಪಿಪಾಸು ವೈದ್ಯ ಡಾ. ಗೋಪಿನಾಥ್ ಸದ್ಯ ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿಯ ಡೈರೆಕ್ಟರ್ ಮತ್ತು ಸರ್ಜನ್. ಸಾಲದ್ದಕ್ಕೆ ಮಲ್ಯ ಆಸ್ಪತ್ರೆಯಲ್ಲೂ ಕ್ಯಾನ್ಸರ್ ರೋಗಿಗಳನ್ನು ನಿಭಾಯಿಸುತ್ತಾನೆ. ಜಯನಗರದ ಗುಣಶೀಲ ನರ್ಸಿಂಗ್ ಹೋಮ್ ಪಕ್ಕದಲ್ಲಿ ಈತನದೇ ಅಂಬುಜ ಹೆಲ್ತ್ ಕೇರ್ ಎಂಬ ಕ್ಯಾನ್ಸರ್ ಕ್ಲಿನಿಕ್ಕಿದೆ. ಕಿದ್ವಾಯಿಯ ಅಧ್ವಾನದಿಂದ ರೋಸತ್ತ ಕ್ಯಾನ್ಸರ್ ರೋಗಿಗಳು ದುಡ್ಡು ಖರ್ಚಾದರೂ ಪರವಾಗಿಲ್ಲ ಉತ್ತಮ ಆರೈಕೆ ಮತ್ತು ಚಿಕಿತ್ಸೆ ಸಿಕ್ಕರೆ ಸಾಕೆಂದು ಈ ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿ ಎಂಬ ದುಡ್ಡುಬಾಕ ದವಾಖಾನೆಗೆ ಬರುತ್ತಾರೆ. ಸುಬ್ಬಯ್ಯ ಸರ್ಕಲ್ ಸಮೀಪದ ಈ ಆಸ್ಪತ್ರೆಯನ್ನು ಹುಟ್ಟುಹಾಕಿದ್ದು ಡಾ. ಅಜಯ್‌ಕುಮಾರ್. ಜೊತೆಗೆ ಡಾಕ್ಟರ್‌ಗಳಾದ ಶೇಖರ್ ಪಾಟೀಲ್, ಶ್ರೀನಾಥ್, ರಮೇಶ್ ಮತ್ತು ಕೆ. ಗೋಪಿನಾಥ್ ಇದರ ಡೈರೆಕ್ಟರ್‌ಗಳು. ಇವರ್‍ಯಾರೂ ನುರಿತ

ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿ

ತುಂಗ ರೇಣುಕರನ್ನು ಸಾವಿನತ್ತ ದೂಡಿದ್ದ ವೈದ್ಯ

ಕ್ಯಾನ್ಸರ್ ರೋಗದ ಬಗ್ಗೆ ಅದರ ಚಿಕಿತ್ಸೆಯ ಬಗ್ಗೆ ಆಳಜ್ಞಾನವಿಲ್ಲದ ರೋಗಿಗಳ ರಕ್ತ ಹೀರುವುದನ್ನೇ ತನ್ನ ಕಾಯಕ ಮಾಡಿಕೊಂಡಿರುವ ಡಾ. ಗೋಪಿನಾಥ್ ಮತ್ತು ಆನಂದ್ ಜೋಡಿಗೆ ಶಿಕ್ಷೆ ಕೊಡುವವರ್‍ಯಾರು? ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿ ಎಂಬ ನರಕವನ್ನು ಮುಚ್ಚಿಸುವವರ್‍ಯಾರು? ನರಹಂತಕ ಗೋಪಿನಾಥ್‌ನನ್ನು ಜೈಲಿಗೆ ಹಾಕುವವರ್‍ಯಾರು?



ರಕ್ಕಸ ವೈದ್ಯ ಡಾ. ಗೋಪಿನಾಥ್

ಕ್ಯಾನ್ಸರ್ ತಜ್ಞರಾಗಲಿ, ಸೇವಾಸಕ್ತ ಹೃದಯವಂತರಾಗಲಿ ಖಂಡಿತ ಇಲ್ಲ. ಈ ಪೈಕಿ ಮೂಲತಃ ಹೊಸದುರ್ಗದ ಬಳಿಯ ಕೆಲ್ಲೋಡು ಗ್ರಾಮದ ಕೆ. ಗೋಪಿನಾಥ್ ಹುಟ್ಟಾ ಧನಪಿಶಾಚಿ.

ಪ್ರಾರಂಭದಲ್ಲಿ ಮಲ್ಯ ಆಸ್ಪತ್ರೆಯಲ್ಲಿ ಆಂಕಾಲಜಿ ಸರ್ಜನ್ ಆಗಿದ್ದು ಅಲ್ಲಿಗೆ ಬರುವ ಪ್ರಭಾವಿಗಳಲ್ಲದ, ದುಡ್ಡಿನ ತಾಕತ್ತಿಲ್ಲದ, ಕ್ಯಾನ್ಸರ್ ರೋಗದ ಬಗ್ಗೆ ಅದರ ಚಿಕಿತ್ಸೆಯ ಬಗ್ಗೆ ಆಳ ಜ್ಞಾನವಿಲ್ಲದ ರೋಗಿಗಳ ರಕ್ತ ಹೀರುವುದನ್ನೇ ತನ್ನ ಕಾಯಕ ಮಾಡಿಕೊಂಡ. ಮಲ್ಯ ಆಸ್ಪತ್ರೆಗೆ ಬರುವ ರೋಗಿಗಳು ಕೋಟ್ಯಾಧಿಪತಿಗಳಾಗಿರಬೇಕು. ಅಂತಿಲ್ಲದವರನ್ನು ಅಲ್ಲಿನ ಆಡಳಿತವರ್ಗವೇ ಉಪಾಯವಾಗಿ ಡಾ. ಗೋಪಿನಾಥ್ ಥರದವರ ಮೂಲಕ ಕಮ್ಮಿ ರೇಟಿಗೆ ಚಿಕಿತ್ಸೆಯ ನೆಪದಲ್ಲಿ ಬೇರೆ ಆಸ್ಪತ್ರೆಗಳಿಗೆ ಸಾಗ ಹಾಕುತ್ತದೆ. ಅಂಥ ಕ್ಯಾನ್ಸರ್ ರೋಗಿಗಳನ್ನು ಕರೆತಂದು ಚಿಕಿತ್ಸೆಯ ನೆಪದಲ್ಲಿ ಸುಲಿದು ಕೊನೆಗೆ ಪ್ರಾಣಕ್ಕೂ ಸಂಚಕಾರ ತರುತ್ತಲೇ ಬಂದವನು ಡಾ. ಕೆ. ಗೋಪಿನಾಥ್.

ಖ್ಯಾತ ಸಿನಿಮಾ ಪತ್ರಕರ್ತೆ ತುಂಗರೇಣುಕ ಈತನ ಲೇಟೆಸ್ಟ್ ಬಲಿಪಶು. ಕನ್ನಡದ ಬಹುತೇಕ ಸಿನಿಮಾ ನಟರ ಪಾಲಿಗೆ ಅಕ್ಕನಂತಿರುವ ತುಂಗರೇಣುಕರಿಗೆ 2006 ರ ಡಿಸೆಂಬರ್ ಹೊತ್ತಿಗೆ ಸ್ತನದ ಕ್ಯಾನ್ಸರ್ ಪತ್ತೆಯಾಗಿದೆ. ಅದು ಪ್ರಾಥಮಿಕ ಹಂತದಲ್ಲೇ ಪತ್ತೆಯಾದ ಚಿಕ್ಕದೊಂದು ಗೋಲಿಗಾತ್ರದ ಗಡ್ಡೆಯಾಗಿತ್ತು.

ಬಹುಶಃ ಯಾರೇ ಕರ್ತವ್ಯನಿಷ್ಠ ಕ್ಯಾನ್ಸರ್ ತಜ್ಞನಿಗದು ಸಣ್ಣಮಟ್ಟದ ಆಪರೇಷನ್ ಮಾಡಿ ಗಡ್ಡೆ ಹೊರಕ್ಕೆ ತೆಗೆಯುವ ಚಿಕಿತ್ಸೆಯಷ್ಟೇ. ಅದ್ಯಾರು ತಲೆ ಕೆಡಿಸಿದರೋ ಪತ್ರಕರ್ತೆ ತುಂಗರೇಣುಕ ಮತ್ತವರ ಪತಿ ರಂಗಕರ್ಮಿ ನಾಗರಾಜಮೂರ್ತಿ ಹಿಂದೆಮುಂದೆ ವಿಚಾರಿಸದೇ ಸೀದಾ ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿಗೆ ಬಂದುಬಿಟ್ಟರು. ಅದೇನು ದೌರ್ಭಾಗ್ಯವೋ ಬೇರೆ ಮಾನವಂತ ಡಾಕ್ಟರ್‌ಗಳೆಲ್ಲರನ್ನೂ ಬಿಟ್ಟು ಈ ಗೋಪಿನಾಥನೇ ಬಂದು ಅವರ ಪ್ರಕರಣವನ್ನು ಕೈಗೆತ್ತಿಕೊಂಡ.

ಮೊದಮೊದಲು ನಗುಮುಖದಲ್ಲೇ "ಯು ಆರ್ ಲಕ್ಕೀ, ಯಾಕೆ ಗೊತ್ತಾ? ದೇಹದ ಬೇರೆ ಯಾವ ಭಾಗಕ್ಕೂ ಕ್ಯಾನ್ಸರ್ ಹಬ್ಬಿಲ್ಲ ನೋಡಿ, ಅದಕ್ಕೇ.... ಯು ಆರ್ ಲಕ್ಕೀ! ಏನೂ ಯೋಚನೆ ಮಾಡಬೇಡಿ. ಮೂರನೇ ದಿನಕ್ಕೆ ಬಂದು ಅಡ್ಮಿಟ್ ಆಗಿ. ಐದಾರು ದಿನಕ್ಕೇ ನಗುನಗುತ್ತ ವಾಪಸ್ ಹೋಗ್ತೀರಿ" ಎಂದು ಗಿಲೀಟಿನ ಮಾತಾಡಿದ್ದ ಡಾ. ಗೋಪಿನಾಥ್.

ಇಲ್ಲಿ ಪತ್ರಕರ್ತೆ ತುಂಗರೇಣುಕ ಮತ್ತವರ ಪತಿ ನಾಗರಾಜಮೂರ್ತಿ ಮಾಡಿಕೊಂಡ ಯಡವಟ್ಟೆಂದರೆ ಗೋಪಿನಾಥ್ ಹೇಳಿದ್ದನ್ನೇ ನಂಬಬಿಟ್ಟದ್ದು ಮತ್ತು ಈ

ರಾ. ಸೋಮನಾಥ್

ಬಗ್ಗೆ ಸೆಕೆಂಡ್ ಒಪೀನಿಯನ್‌ಗಾಗಿ ಬೇರೆ ಕ್ಯಾನ್ಸರ್ ತಜ್ಞರನ್ನು ಕಾಣದೇ ಹೋಗಿದ್ದು. ಸಣ್ಣದೊಂದು ಗೋಲಿಗಾತ್ರದ ಗಡ್ಡೆಗೆ ಗೋಪಿನಾಥ್ ಇಡೀ ಎಡ ಸ್ತನವನ್ನೇ ಕತ್ತರಿಸುತ್ತೇನೆಂದಿದ್ದ. ಅಲ್ಲಿಗೆ ಪ್ಲಾಸ್ಟಿಕ್ ಸರ್ಜರಿ ಮಾಡಿ ಕೃತಕ ಸ್ತನವನ್ನು ಜೋಡಿಸುತ್ತೇನೆಂದೂ, ಹಾಗೇ ಕೃತಕ ಶೇಪ್ ಕೊಡುವುದಕ್ಕಾಗಿ ಹೊಟ್ಟೆಯ ಭಾಗವನ್ನು ಕುಯ್ದು ಅಲ್ಲಿಂದ ಚರ್ಮ ತೆಗೆದು ಸ್ತನಕ್ಕೆ ಜೋಡಿಸಿ ಪ್ಲಾಸ್ಟಿಕ್ ಸರ್ಜರಿ ಮಾಡುತ್ತೇನೆಂದೂ ಗೋಪಿನಾಥ್ ಹೇಳಿದ್ದೇ ದುಡ್ಡು ದೋಚುವ ತಂತ್ರವಾಗಿತ್ತು!

ಮತ್ತು ಈತನ ವಂಚಕ ಸಾಥಿ ಮಲ್ಯ ಆಸ್ಪತ್ರೆಯ ಪ್ಲಾಸ್ಟಿಕ್ ಸರ್ಜರಿಯ ಖದೀಮ ಡಾ. ಆನಂದ್ ಎಂಬಾತನಿಗೆ ಬರಲು ಗಿರಾಕಿ ಕಲ್ಪಿಸುವುದೇ ಡಾ. ಗೋಪಿನಾಥ್‌ನ ಹುನ್ನಾರವಾಗಿತ್ತು.




BIOದ ಧಣಿ ಅಜಯಕುಮಾರ್ ಮತ್ತು ಆತನ ಪತ್ನಿ ಭಾಗ್ಯ


ಆಪರೇಷನ್ನಿಗೆ ದಿನವೂ ಗೊತ್ತಾಯಿತು. ಯಾರ್‍ಯಾರೋ ಖ್ಯಾತ(!) ಡಾಕ್ಟರುಗಳನ್ನು ಕರೆಸಿ ಗೋಪಿನಾಥ್ ಅನಗತ್ಯವಾಗಿ ಎಡ ಸ್ತನ ಪೂರ್ತಿ ಕತ್ತರಿಸಿ ಹಾಕಿಸಿದ್ದ. ಆ ಭಾಗಕ್ಕೆ ಹೊಟ್ಟೆಯನ್ನು ವಿನಾಕಾರಣ ಕುಯ್ದು ಅಲ್ಲಿಂದ ತೆಗೆದ ಚರ್ಮವನ್ನು ಎದೆ ಭಾಗಕ್ಕೆ ಹೊಲಿದಿದ್ದ. ಆಪರೇಷನ್ ಮುಗಿದು ಬಿಐಓದ ತೀವ್ರ ನಿಗಾ ಘಟಕ ಅಂದರೆ ಐಸಿಯುದಲ್ಲಿ ಅನಾಥ ಹೆಣದಂತೆ ಬಿಸಾಡಲಾಗಿತ್ತು. ನೀರು ಕೇಳಿದರೆ ಯಾವುದೋ ಕೊಳಕಲು ಪ್ಲಾಸ್ಟಿಕ್ ಚೊಂಬಿನಿಂದ ನೀರು ತಂದು ಬಾಯಿಗೆ ಹುಯ್ಯುತ್ತಿದ್ದರು. ಬೆಳಿಗ್ಗೆಯೋ ಸಂಜೆಯೋ ಯಾವಾಗಲೋ ಬರುವ ಡಾಕ್ಟರ್‌ಗಳು. ಮಿಕ್ಕ... ಹರಟೆ ಕೊಚ್ಚುತ್ತಾ ನಿಲ್ಲುವ ನರ್ಸ್‌ಗಳು. ಸ್ಪಾಂಜ್‌ಬಾತ್ ಅಂತ ಮಾಡಲು ಬಂದು ಹೇಗೇಗೋ ಮಾಡಿ... ನೋವು ತರಿಸುತ್ತಿದ್ದರು.

ಪ್ರಾರಂಭದಲ್ಲಿ ಪ್ಲಾಸ್ಟಿಕ್ ಸರ್ಜರಿ ಮಾಡಲು ಬಂ... ಖದೀಮ ಡಾ. ಆನಂದ್ ಆನಂತರ ಏಕಾಏಕಿ ನಾಪ... ಯಾಗಿಬಿಟ್ಟ. ಮೊದಮೊದಲು ಬೆರಳುದ್ದ ಹೋ... ಓಪನ್ ಮಾಡ್ತೀವಿ ಅಂದಿದ್ದವರು, ಚಿಕ್ಕದಾಗಿ ಕುಯ್ದ... ಹೊಲಿಯಲು ಕಷ್ಟ ಎಂದು ಅರ್ಧ ಅಡಿ ಕುಯ... ಹಾಕಿದ್ದರು. ಹಾಗೇ 20 ದಿನಗಳ ಕಾಲ ಆಸ್ಪತ್ರೆಯ... ನರಳಿದ್ದಲ್ಲದೇ ಒಂದೂವರೆ ಲಕ್ಷ ರೂಪಾಯಿಗಳಷ್ಟು ಫೀಜು ಕಿತ್ತಿದ್ದರು.

ದುರಂತವೆಂದರೆ ಪತ್ರಕರ್ತೆ ತುಂಗರೇಣುಕ... ದೌರ್ಭಾಗ್ಯ ಇಷ್ಟಕ್ಕೇ ಮುಗಿಯಲಿಲ್ಲ. ಆಸ್ಪತ್ರೆಯಿಂ... ಬಿಡುಗಡೆಯಾಗಿ ಎರಡು ತಿಂಗಳ ಕಾಲ ಮನೆಯ... ಹಾಸಿಗೆ ಹಿಡಿದ ತುಂಗರೇಣುಕರ ಒಂದು ಸಮ... ಮುಗಿಯುವ ಹೊತ್ತಿಗೆ ಮತ್ತೊಂದು ಸಮ...

ಪ್ರತಿಭಟನೆಗೆ ವಿಷ್ಣು, ಜಗ್ಗೇಶ್?





ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿ ಎಂಬ ಕ್ಯಾನ್ಸರ್ ಆಸ್ಪತ್ರೆ ಶುರುವಾಗಿದ್ದೇ ಕಿದ್ವಾಯಿಯ ವಿರುದ್ಧ. ಅಲ್ಲಿಗಿಂತಲೂ ಉತ್ತಮ ಸೇವೆ ಕೊಡುವ ಗುರಿ ಹೊತ್ತು ಡಾ. ಅಜಯ್‌ಕುಮಾರ್, ಡಾ. ಶ್ರೀನಾಥ್, ಶೇಖರ್ ಪಾಟೀಲ್ ಮುಂತಾದವರು ಆರಂಭಿಸಿದ BIO ಕ್ರಮೇಣ ದುಡ್ಡುಬಾಕ ಆಸ್ಪತ್ರೆಯಾಯಿತು. ನರ್ಸ್‌ಗಳು ಸೋಂಭೇರಿಗಳಾದರು. ಡಾ. ಗೋಪಿನಾಥ್ ಥರದವರಂತೂ ದುಡ್ಡು ದೋಚುವುದನ್ನೇ ಒಂದು ಕಾಯಕ ಮಾಡಿಕೊಂಡರು. ಇದರ ಪರಿಣಾಮವೆಂಬಂತೆ ಇಲ್ಲಿನ ಒಬ್ಬೊಬ್ಬ ಡಾಕ್ಟರ್ ತನ್ನದೇ ಪ್ರತ್ಯೇಕ ಕ್ಯಾನ್ಸರ್ ಆಸ್ಪತ್ರೆ ಆರಂಭಿಸಿದ. ಇಲ್ಲಿನ ಬಹುತೇಕ ಆಪರೇಷನ್ನುಗಳಿಗೆ ಪೂರ್ವಭಾವಿ ಅಧ್ಯಯನ, ತಯಾರಿಗಳೇ ಇಲ್ಲವಾಯಿತು.

ಆಯಾ ಸಂದರ್ಭಕ್ಕೆ ತೋಚಿದಂತೆ ಯಾವುದೇ ಸಿದ್ಧತೆಯಿಲ್ಲದೇ ಆಪರೇಷನ್ ನಂತರ ಸೂಕ್ತ ಆರೈಕೆಯಿಲ್ಲದೆ ಪತ್ರಕರ್ತೆ ತುಂಗರೇಣುಕ ಥರದವರೂ ಬಲಿಯಾದದ್ದು BIO ವಿರುದ್ಧ ದೊಡ್ಡ ಪ್ರತಿಭಟನೆಯನ್ನೇ ಹುಟ್ಟುಹಾಕಿದೆ. ತುಂಗರೇಣುಕರ ಅಕ್ಕಂದಿರು ಈಗಾಗಲೇ BIO ವಿರುದ್ಧ ಕಿಡಿಕಾರುತ್ತಿದ್ದಾರೆ. ಕನ್ನಡ ಚಿತ್ರರಂಗದ ಹಿರಿಯ ನಟ ವಿಷ್ಣುವರ್ಧನ್, ಜಗ್ಗೇಶ್ ಥರದವರೇ ತುಂಗರೇಣುಕರಿಗಾದ ಅನ್ಯಾಯದ ವಿರುದ್ಧ ಡಾ. ಗೋಪಿನಾಥ್ ಮೇಲೆ ಕಿಡಿಕಾರುತ್ತಿದ್ದಾರೆಂದರೆ, ಪ್ರತಿಭಟನೆಗೆ ಕರೆಕೊಡುತ್ತಿದ್ದಾರೆಂದರೆ ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿ ಮತ್ತು ಅದರ ಯಮ ವೈದ್ಯರ ವಿರುದ್ಧ ಸರ್ಕಾರ ತನಿಖೆ ಆರಂಭಿಸುವ ದಿನಗಳು ದೂರವಿಲ್ಲ. ಎಲ್ಲಕ್ಕೂ ಮಿಗಿಲಾಗಿ ಮತ್ತೊಬ್ಬ ಪತ್ರಕರ್ತ ಪಿ. ಮಹಮ್ಮದ್ ತಮ್ಮ ಪತ್ನಿಯನ್ನು ಕೊಂದ ಗೋಪಿನಾಥ್ ವಿರುದ್ಧ ಪೊಲೀಸರಿಗೆ ದೂರು ಕೊಡಬೇಕು. ಖತೀಜಾ ಸಾವನ್ನು ಕೊಲೆ ಪ್ರಕರಣವನ್ನಾಗಿ ಪರಿಗಣಿಸುವಂತೆ ನಾಡಿನ ಎಲ್ಲಾ ಪ್ರಜ್ಞಾವಂತರೂ ಒತ್ತಾಯ ಹೇರಲೇಬೇಕು.

ಇದು ಕೊಲೆಯಲ್ಲದೇ ಮತ್ತೇನು?

ಡಾ. ಗೋಪಿನಾಥ್ ಎಂಥಾ ಕಟುಕ ಎಂಬುದಕ್ಕೆ ಪ್ರಜಾವಾಣಿಯ ಖ್ಯಾತ ವ್ಯಂಗ್ಯ ಚಿತ್ರಕಾರ ಪಿ. ಮಹಮ್ಮದ್‌ರ ಪತ್ನಿ ಖತೀಜಾರ ದಾರುಣ ಅಂತ್ಯಕ್ಕಿಂತಲೂ ಬೇರೆ ಉದಾಹರಣೆ ಬೇಕಿಲ್ಲ.

36 ರ ಹರೆಯದ ಮೂರು ಮಕ್ಕಳ ತಾಯಿ ಖತೀಜಾರ ಬಲಕಿವಿಯ ಬಳಿ ಸಣ್ಣದೊಂದು ಗುಳ್ಳೆ ಕಾಣಿಸಿತ್ತು. ಮೊದಮೊದಲು ಅದನ್ನು ಆಯುರ್ವೇದಿಕ್ ವೈದ್ಯರೊಬ್ಬರ ಬಳಿ ತೋರಿಸಲಾಗಿತ್ತು, ಪ್ರಯೋಜನ ಕಾಣದೇ ಕಿದ್ವಾಯಿ ಆಸ್ಪತ್ರೆಗೆ ತೋರಿಸಿದ್ದಾರೆ. ಅಲ್ಲೂ ಅಧ್ವಾನವೆನಿಸಿ ಕೊನೆಗೆ ಮಲ್ಯ ಆಸ್ಪತ್ರೆಗೆ ಬಂದು ಡಾ. ಗೋಪಿನಾಥ್‌ರನ್ನು ಕಂಡಿದ್ದಾರೆ. ಪರೀಕ್ಷಿಸಿದ ಗೋಪಿನಾಥ್ "ಇಲ್ಲಾದರೆ ಒಂದು ಲಕ್ಷ ಖರ್ಚಾಗುತ್ತದೆ. ಅದನ್ನೇ 40 ಸಾವಿರಕ್ಕೆ BIO ದಲ್ಲಿ ನಾನು ಮಾಡಿಸಿಕೊಡುತ್ತೇನೆ" ಅಂದಿದ್ದಾನೆ. ಒಂದೆರಡು ಗಂಟೆಯೊಳಗೆ ಆಪರೇಷನ್ ಮುಗಿಸಿ ಹತ್ತೇ ದಿನದಲ್ಲಿ ಮನೆಗೆ ಹೊರಡಬಹುದು ಎಂದಿದ್ದಾನೆ. ನಂಬಿದ ಮಹಮ್ಮದ್ 2002 ರ ಮೇ 10 ರಂದು ಪತ್ನಿ ಖತೀಜಾರನ್ನು BIO ಗೆ ಸೇರಿಸಿದ್ದಾರೆ.

ಆಪರೇಷನ್ ಮಾಡಿದ ಗೋಪಿನಾಥ್ ಮನಸ್ಸು ಮಾಡಿದ್ದರೆ ಅನಾಯಾಸವಾಗಿ ಗಲ್ಲದ ಗುಳ್ಳೆಯನ್ನು ತೆಗೆದು ಹಾಕಬಹುದಿತ್ತು. ಆದರೆ ಪ್ಲಾಸ್ಟಿಕ್ ಸರ್ಜರಿಯ ಖದೀಮ ಡಾ. ಆನಂದ್‌ಗೆ ಗಿರಾಕಿ ಹುಟ್ಟಿಸಬೇಕಲ್ಲ; ಅದಕ್ಕೆ ಗುಳ್ಳೆ ತೆಗೆದ ನಂತರ ಪ್ಲಾಸ್ಟಿಕ್ ಸರ್ಜರಿ ಮಾಡಿಸಲೇಬೇಕು ಅಂದಿದ್ದಾನೆ. ಗುಳ್ಳೆ ತೆಗೆದವನೇ ಗಲ್ಲದ ಮತ್ತೊಂದು ಭಾಗದಿಂದ ಚರ್ಮ ಕಿತ್ತು ಅದನ್ನು ಇಲ್ಲಿಗೆ ಪ್ಯಾಚ್ ಮಾಡಿ ಹೊಲಿದು ತೇಪೆ ಹಾಕಿದ್ದ. ಮುಖಕ್ಕೆ ಹಾಕಿದ ತೇಪೆ ಎರ್ರಾಬಿರ್ರಿ ಹೊಲಿದಿದ್ದರಿಂದಾಗಿ ಕ್ರಮೇಣ ಚರ್ಮ ಬಿಗಿಯತೊಡಗಿತು. ಉಸಿರಾಡುವುದೂ ಕಷ್ಟವಾಯಿತು. ಬರುಬರುತ್ತ ಹಾಕಿದ ತೇಪೆಯೇ ಕೊಳೆತು ಕೀವು ಸೋರತೊಡಗಿತು. ಪ್ಲಾಸ್ಟಿಕ್ ಸರ್ಜರಿ ಮಾಡಿದ್ದ ಡಾ. ಆನಂದ್ ತುಂಗರೇಣುಕರ ಹೊಟ್ಟೆ ಕುಯ್ದು ಎದೆಗೆ ತೇಪೆ ಹಾಕಿದ್ದರಿಂದ ಹೇಗೆ ಅದು ಕೊಳೆಯತೊಡಗಿತ್ತೋ ಇಲ್ಲೂ ಹಾಗೇ ಆಗಿತ್ತು. ಕೇಳಿದ್ದಕ್ಕೆ ಗೋಪಿನಾಥ್ ಬೇರೆಯದೇ ಕತೆ ಹೊಸೆದ. ಹೊಸ ಚರ್ಮವನ್ನು ಹಳೇ ಚರ್ಮ ಒಪ್ಪುತ್ತಿಲ್ಲವಾದ್ದರಿಂದ ಅದನ್ನು ತೆಗೆಯಬೇಕು, ಅದಕ್ಕೆ ಎರಡನೇ ಬಾರಿ ಇನ್ನೊಂದು ಆಪರೇಷನ್ ಮಾಡಬೇಕು ಅಂದ.



ಪ್ರಜಾವಾಣಿಯ ಖ್ಯಾತ ವ್ಯಂಗ್ಯ ಚಿತ್ರಕಾರ ಪಿ. ಮಹಮ್ಮದ್‌ರ ಪತ್ನಿ ಖತೀಜಾ

ಎರಡನೇ ಬಾರಿ ಆಪರೇಷನ್ ಮಾಡಿ ಕೊಳೆತ ಚರ್ಮ ತೆಗೆಯುವ ಹೊತ್ತಿಗೆ ಖತೀಜಾರ ದೇಹವೇ ನಂಜಾಗಿ ಹೋಗಿತ್ತು, ಅದಕ್ಕೆ ದಿನಕ್ಕೊಂದು ಬಾಟಲಿ ರಕ್ತ ಕೊಡಬೇಕೆಂದು ಗೋಪಿನಾಥ್ ಆದೇಶ ಬೇರೆ ಕೊಟ್ಟ. ಆದರೆ ರಕ್ತವನ್ನು ತಮ್ಮ ಆಸ್ಪತ್ರೆಯಿಂದಲೇ ಕೊಳ್ಳಬೇಕು ಎಂಬ ಷರತ್ತು ಹಾಕಿದ್ದ. ಪತಿ ಮಹಮ್ಮದ್ ತಾವೇ ರಕ್ತ ಕೊಡುತ್ತೇವೆಂದರೆ ಬೇಡ ನಿಮಗೆ ಬೀಪಿ ಇದೆ ಎಂದಿದ್ದ. ಏನಾದರೂ ಮಾಡಿ ದುಡ್ಡು ಕೀಳಲು ಗೋಪಿನಾಥ್ ತನ್ನ ಆಸ್ಪತ್ರೆಯಿಂದಲೇ ರಕ್ತ ಕೊಳ್ಳಲು ಪೀಡಿಸುತ್ತಿದ್ದ. ಇದರಿಂದ ರೋಸತ್ತ ಮಹಮ್ಮದ್ ಕೊನೆಗೆ ಬೇರೆ ಯಾವುದೋ ಬ್ಲಡ್ ಬ್ಯಾಂಕಿನಿಂದ ಕೊಂಚ ರಿಯಾಯಿತಿ ದರಕ್ಕೆ ರಕ್ತ ತಂದು ಕೊಟ್ಟರೆ, ಅದನ್ನೇ ಜಿದ್ದಾಗಿ ಪರಿಗಣಿಸಿದ ಡಾ. ಗೋಪಿನಾಥ್ ಈ ಒಂದೇ ಕಾರಣಕ್ಕೇ ಮಹಮ್ಮದ್‌ರ ಪತ್ನಿ ಖತೀಜಾರನ್ನು ಕೊಂದೇಬಿಟ್ಟ!

ಅದೂ ಎಂಥಾ ನಿರ್ಲಜ್ಜ ಕೃತ್ಯವೆಂದರೆ ಯಾವುದೇ ಆಸ್ಪತ್ರೆಯಲ್ಲಿ ಹೊರಗಿನಿಂದ ಯಾರೇ ರಕ್ತ ತಂದರೂ ಅದನ್ನು ರೋಗಿಗೆ ಕೊಡುವ ಮುನ್ನ ಪರೀಕ್ಷಿಸುತ್ತಾರೆ. ರೋಗಿಯೊಬ್ಬನಿಗೆ ರಕ್ತ ಕೊಡುವ ಮುನ್ನ ಅದನ್ನು ಪರೀಕ್ಷಿಸಬೇಕೆಂಬುದು ವೈದ್ಯಶಾಸ್ತ್ರದ ಮೂಲತತ್ವ ಕೂಡ. ವಿಚಿತ್ರವೆಂದರೆ ಗೋಪಿನಾಥ್ ಮಹಮ್ಮದ್ ತಂದು ಕೊಟ್ಟ ರಕ್ತವನ್ನು ಪರೀಕ್ಷೆ ಕೂಡ ಮಾಡದೇ ಖತೀಜಾರ ದೇಹಕ್ಕೆ ಚುಚ್ಚಿಬಿಟ್ಟ. ರಕ್ತ ಕೊಟ್ಟ ಹತ್ತೇ ನಿಮಿಷಕ್ಕೆ ಖತೀಜಾರ ದೇಹದ ಮೇಲೆ ಕೆಂಪು ಗುಳ್ಳೆಗಳೆದ್ದವು. ಹಾಸಿಗೆಯಲ್ಲೇ ವಿಲಿವಿಲಿ ಒದ್ದಾಡತೊಡಗಿದರು. ಇದು ಗೊತ್ತಾಗಿದ್ದೇ ಮಹಮ್ಮದ್ ಆಸ್ಪತ್ರೆಯ ಅಧಿಕಾರಿಗಳನ್ನು ದಬಾಯಿಸಿದರೆ, ಆಸ್ಪತ್ರೆಯವರು ಅಲ್ರೀ ನಮ್ಮಿಂದ ರಕ್ತ ಖರೀದಿಸೋದು ಬಿಟ್ಟು ಶಿವಾಜಿರಾವ್ ಬ್ಲಡ್ ಬ್ಯಾಂಕಿನಿಂದ ಯಾಕ್ರೀ ರಕ್ತ ತಂದ್ರಿ. ಬುದ್ಧಿ ಇದೆಯೇನ್ರೀ ನಿಮಗೆ ಎಂದು ದಬಾಯಿಸುತ್ತಿದ್ದರು!

ಹಾಗಾದ್ರೆ ರಕ್ತ ಪರೀಕ್ಷಿಸದೇ ಕೊಟ್ರಾ? ಎಂದು ಮಹಮ್ಮದ್ ಕೇಳಿದ್ದಕ್ಕೆ ಗೋಪಿನಾಥ್ ಹೌದು ಎಂದ. ಇನ್ನೊಮ್ಮೆ ರಕ್ತದಲ್ಲಿ ಕೊಬ್ಬಿನ ಅಂಶಗಳಿದ್ರೆ ಅದು ರೋಗಿಗೆ ಸೆಟ್ ಆಗೋಲ್ಲ ಅಂದ. ಮತ್ತೊಮ್ಮೆ ರಕ್ತ ಕೊಟ್ಟವನೂ ರಕ್ತ ಪಡೆದವನೂ ಒಂದೇ ರೀತಿಯ ಆಹಾರ ತಗೋತಿದ್ರೆ ಮಾತ್ರವೇ ಬ್ಲಡ್ಡು ಸೆಟ್ಟಾಗ್ತದೆ ಎಂದು ಪೆದ್ದುಪೆದ್ದಾಗಿ ಡೈಲಾಗ್ ಹೊಡೆದ. ರಕ್ತ ಹೊಂದದೆ ಖತೀಜಾರ ಕಿಡ್ನಿಯೇ ವಿಫಲಗೊಂಡಿತ್ತು. ರಕ್ತದೊತ್ತಡ ಕ್ಷೀಣಿಸುತ್ತಲೇ ಬಂತು. ಇತ್ತ ಖತೀಜಾ ರಕ್ತ ಹೊಂದದೇ ವಿಲಿವಿಲಿ ಒದ್ದಾಡುತ್ತಾ ಕೊನೆಯುಸಿರೆಳೆಯುತ್ತಿದ್ದರೆ BIO ನ ಒಬ್ಬನೇ ಒಬ್ಬ ಡಾಕ್ಟರ್ ಆಕೆಯನ್ನು ಬಂದು ನೋಡಲಿಲ್ಲ, ಸಾಯುವುದನ್ನು ಕಣ್ಣಾರೆ ಕಂಡೂ ನರ್ಸ್‌ಗಳು ಹರಟೆ ಹೊಡೆಯುತ್ತಿದ್ದರು. ಅಂತಿಮವಾಗಿ ರಾತ್ರಿಯಿಡೀ ನರಳಿದ ಖತೀಜಾ ಯಾವುದೇ ಡಾಕ್ಟರ್ ಬಾರದೇ, ನರ್ಸ್‌ಗಳೂ ಆರೈಕೆ ಮಾಡದೇ, ಪರೀಕ್ಷಿಸದೇ ಕೊಟ್ಟ ರಕ್ತದಿಂದಾಗಿ ಬೆಳಿಗ್ಗೆಯ ಹೊತ್ತಿಗೇ ಹೆಣವಾಗಿದ್ದರು. ಅದಾಗಿ ಎಷ್ಟೋ ಹೊತ್ತಿಗೆ ಬಂದ ಡಾ. ಗೋಪಿನಾಥ್ ಒಂದೂವರೆ ಲಕ್ಷದ ಫೀಜು ಕಟ್ಟಿದ ನಂತರವೇ ಹೆಣ ಕೊಡುತ್ತೇನೆಂದು ಹಠ ಹಿಡಿದಿದ್ದ. ಇದು ಕೊಲೆಯಲ್ಲದೇ ಮತ್ತೇನು? ●

ಶುರುವಾಗಿತ್ತು.

ಕುಯ್ದು ಹಾಕಿದ್ದ ಎಡಸ್ತನಕ್ಕೆ ಹೊಟ್ಟೆ ಕುಯ್ದು ಮಾಂಸ ಮೆತ್ತಿಸಿ ಪ್ಲಾಸ್ಟಿಕ್ ಸರ್ಜರಿ ಮಾಡಿದ್ದರಲ್ಲ; ಅದು ಮೂರು ತಿಂಗಳ ಹೊತ್ತಿಗೆ ಕೊಳೆಯಲಾರಂಭಿಸಿತ್ತು, ಒಳಗೆಲ್ಲ ಕೀವು ತುಂಬಿಕೊಂಡು ಇದ್ದಕ್ಕಿದ್ದಂತೆ ದಪ್ಪಗಾಗಲು ಶುರುವಾಗಿತ್ತು. ವಾಸ್ತವವಾಗಿ ಸರ್ಜರಿಯನ್ನೇ ಸರಿಯಾಗಿ ಮಾಡಿರಲಿಲ್ಲ, ಅಸಲಿಗೆ ಪ್ಲಾಸ್ಟಿಕ್ ಸರ್ಜರಿಯ ಅಗತ್ಯವೇ ಇರಲಿಲ್ಲ, ಮಲ್ಯ ಆಸ್ಪತ್ರೆಯ ಪ್ಲಾಸ್ಟಿಕ್ ಸರ್ಜರಿಯ ಖದೀಮ ಡಾ. ಆನಂದ್‌ಗೆ ಗಿರಾಕಿ ಕಲ್ಪಿಸುವುದಕ್ಕಾಗಿಯೇ ಗೋಪಿನಾಥ್ ಅನಗತ್ಯವಾಗಿ ಸ್ತನ ಕತ್ತರಿಸಿ ಹಾಕಿದ್ದ, ಸಾಲದ್ದಕ್ಕೆ ಆ ಜಾಗಕ್ಕೆ ಹೊಟ್ಟೆ ಕುಯ್ದು ತಂದಿದ್ದ ಚರ್ಮ ಹೊಲಿದು ಅನಗತ್ಯ ಪ್ಲಾಸ್ಟಿಕ್ ಸರ್ಜರಿ ಮಾಡಿಸಿದ್ದ. ಹೊಟ್ಟೆ ಕುಯ್ದು ಹಾಕಿದ್ದು ಒಂದೆಡೆಯಾದರೆ ಮತ್ತೊಂದೆಡೆ ಕತ್ತರಿಸಿ ತೆಗೆದ ಸ್ತನಕ್ಕೆ ಜೋಡಿಸಿದ್ದ ಕೃತಕ ಸ್ತನವೇ ಕೊಳೆತುಹೋಗಿತ್ತು!

ಯಾವತ್ತು ಸ್ತನದಲ್ಲಿ ತುರುಕೆಯಾಗಿ ಒಳಭಾಗ ಮುರಗಟ್ಟುತ್ತಾ ಬಂತೋ ತುಂಗರೇಣುಕ ಮತ್ತೆ ಡಾ. ಗೋಪಿನಾಥ್ ಕಂಡು ಕಣ್ಣೀರಿಟ್ಟಿದ್ದಾರೆ. ನಿಮ್ಮ ಲಾಭಕ್ಕಾಗಿ ನನ್ನ ಬದುಕನ್ನ ಹಾಳು ಮಾಡಿದಿರಲ್ಲ ಎಂದು ಶಾಪ ಹಾಕಿದ್ದಾರೆ. ಗೋಪಿನಾಥ್‌ನ ದಾರ್ಷ್ಟ್ಯ ಎಂಥಾದ್ದೆಂದರೆ ಹೀಗೆ ಎರಡನೇ ಬಾರಿ ತನ್ನ ಬಳಿ ಬಂದ ತುಂಗರೇಣುಕರನ್ನು ಹೆದರಿಸಿ ಗೆಟ್‌ಔಟ್ ಅಂದಿದ್ದಾನೆ. ಎದೆ ಬಡಿದುಕೊಂಡೇ ಗೋಪಿನಾಥ್ ಛೇಂಬರಿನಿಂದ ಹೊರಬಿದ್ದ ತುಂಗರೇಣುಕರ ಪ್ರಾಣ ಉಳಿಸಿದ್ದು ಮತ್ತೊಬ್ಬ ಕ್ಯಾನ್ಸರ್ ತಜ್ಞ ಡಾ. ಚಂದ್ರಶೇಖರ್ ಮತ್ತು ಡಾ. ಗಿರಿಜಮ್ಮ. ಬಹುಶಃ ಗೋಪಿನಾಥ್ ಮತ್ತು ಡಾ. ಆನಂದ್ ಜೋಡಿ ಪ್ಲಾಸ್ಟಿಕ್ ಸರ್ಜರಿ ಮಾಡಿ ಜೋಡಿಸಿದ್ದ ಕೃತಕ ಸ್ತನವನ್ನು ಡಾ. ಚಂದ್ರಶೇಖರ್ ಎರಡನೇ ಬಾರಿ ಆಪರೇಷನ್ ಮಾಡಿ ತೆಗೆಯದೇ ಹೋಗಿದ್ದರೆ ಪತ್ರಕರ್ತ ತುಂಗರೇಣುಕ ಈ ಹೊತ್ತಿಗೆ ಬದುಕುತ್ತಿರಲಿಲ್ಲ.




ಬೆಂಗಳೂರು ಇನ್ಸ್‌ಸ್ಟಿಟ್ಯೂಟ್ ಆಫ್ ಅಂಕಾಲಜಿ

ಇದು ಒಬ್ಬ ತುಂಗರೇಣುಕರ ಕತೆಯಲ್ಲ, ಗೋಪಿನಾಥ್‌ರನ್ನು ನಂಬಿದ ತಪ್ಪಿಗೆ ಪ್ರಜಾವಾಣಿಯ ಖ್ಯಾತ ವ್ಯಂಗ್ಯ ಚಿತ್ರಕಾರ ಪಿ. ಮಹಮ್ಮದ್‌ರ ಪತ್ನಿ ಖತೀಜಾ ಅನ್ಯಾಯವಾಗಿ ಪ್ರಾಣ ಕಳೆದುಕೊಂಡರು (ಬಾಕ್ಸ್ ನೋಡಿ). ಕನ್ನಡ ಪ್ರಭದ ಹಿರಿಯ ವರದಿಗಾರ ಸದಾಶಿವ ಈತನನ್ನು ನಂಬಿ ಸತ್ತೇ ಹೋದರು. ಹೇಳುತ್ತಾ ಹೋದರೆ ಡಾ. ಗೋಪಿನಾಥ್ ಮತ್ತು ಆನಂದ್ ಸೇರಿಕೊಂಡು ಕನಿಷ್ಠ ಎರಡು ಡಜನ್ ಕ್ಯಾನ್ಸರ್ ರೋಗಿಗಳ ಪ್ರಾಣ ಕಿತ್ತಿದ್ದಾರೆ. ಜೊತೆಗೆ ದುಡ್ಡನ್ನೂ ಕಿತ್ತಿದ್ದಾರೆ. ಇದೇ ಕೃತ್ಯವನ್ನು ಒಬ್ಬ ಕ್ರಿಮಿನಲ್ ಮಾಡಿದರೆ ಜನ ಅದನ್ನು ಅಪರಾಧ ಎನ್ನುತ್ತಾರೆ. ಆದರೆ ಡಾ. ಗೋಪಿನಾಥ್ ಮತ್ತು ಆನಂದ್ ಜೋಡಿ ದುಡ್ಡಿಗಾಗಿ ಕೊಲ್ಲುತ್ತಾ ಬಂದ ಕ್ಯಾನ್ಸರ್ ರೋಗಿಗಳಿಗೆ ನ್ಯಾಯ ಕೊಡಿಸುವವರ್ಯಾರು? ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಅಂಕಾಲಜಿ ಎಂಬ ನರಕವನ್ನು ಮುಚ್ಚಿಸುವವರ್ಯಾರು? ನರಹಂತಕ ಗೋಪಿನಾಥ್‌ನನ್ನು ಜೈಲಿಗೆ ಹಾಕುವವರ್ಯಾರು? ■


ಸಿರಸಿ

ಚಪಲ ಚೆನ್ನಿಗರಾಯ ವಿವೇಕಾನಂದ ವೈದ್ಯ!

ಒಬ್ಬೊಬ್ಬ ಶಾಸಕನದು ಒಂದೊಂದು ರೀತಿಯ ಕತೆ. ಶಿರಸಿ-ಸಿದ್ದಾಪುರ ಮೀಸಲು ಕ್ಷೇತ್ರವನ್ನು ಎರಡು ಬಾರಿ ಪ್ರತಿನಿಧಿಸಿದ ಬಿಜೆಪಿಯ ವಿವೇಕಾನಂದ ವೈದ್ಯನ ವರಸೆಗಳನ್ನು ಕಂಡು ಜನ 'ಇಂಥವನು ನಮ್ಮ ಶಾಸಕ' ಎಂದು ಹೇಳಿಕೊಳ್ಳಲು ನಾಚಿಕೆ ಪಟ್ಟುಕೊಳ್ಳುತ್ತಾರೆ. ಸದಾ ಅಮಲೇರಿಸಿಕೊಂಡು ಮೂಗುಬೊಟ್ಟುಗಳ ಶೋಕಿಯಲ್ಲಿ ತೊಡಗಿರುವುದು ಅವನ ದಿನಚರಿಯ ಭಾಗವಾಗಿಹೋಗಿದೆ. ಕ್ಷೇತ್ರವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಬೇಕಿದ್ದ ಕ್ಷೇತ್ರದ ಶಾಸಕ ಇಂತಹ ಮೋಜಿನಲ್ಲಿ ತೊಡಗಿರುವುದನ್ನು ನೋಡಿ ಜನ ಅಸಹ್ಯಪಟ್ಟುಕೊಳ್ಳುತ್ತಿರುವುದಂತೂ ಸತ್ಯ.



ಶಿರಸಿಯಲ್ಲಿ ವಾಚ್ ರಿಪೇರಿ ಅಂಗಡಿ ಇಟ್ಟುಕೊಂಡಿದ್ದ ವಿವೇಕಾನಂದ ವೈದ್ಯ ಅದ್ಹೇಗೋ ಸಂಘಪರಿವಾರದ ಸಂಪರ್ಕಕ್ಕೆ ಬಂದ. ಚೆನ್ನಾಗಿ ಲಾಠಿ ತಿರುಗಿಸುತ್ತಾ ಆರ್‌ಎಸ್‌ಎಸ್, ವಿಎಚ್‌ಪಿ ಎಂದೆಲ್ಲ ತಿರುಗಾಡಿ ಬಹುಬೇಗನೇ ಚೆಡ್ಡಿ ವಲಯದಲ್ಲಿ ಬೆಳಕಿಗೆ ಬಂದ. ಕೊನೆಗೆ ರಾಜಕೀಯದಲ್ಲಿ ತನ್ನ ಕೆರಿಯರ್ ರೂಪಿಸಿಕೊಳ್ಳುವುದಕ್ಕೆ ಬಿಜೆಪಿ ಸೇರಿದ. ಹೇಗೂ ಸಂಘಪರಿವಾರದಲ್ಲಿ ಪಳಗಿದವನಾಗಿದ್ದರಿಂದ ಸುಲಭವಾಗಿ ಬಿಜೆಪಿಯ ಟಿಕೇಟ್ ಕೂಡ ಸಿಕ್ಕಿತು. ಶಿರಸಿಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ ಗೋಪಾಲ ಕಾನಡೆ, ಜೆಡಿಎಸ್‌ನಿಂದ ಸ್ಪರ್ಧಿಸಿದ ಪಿ.ಎಸ್.ಜೈವಂತರ ಎಡವಟ್ಟು ರಾಜಕಾರಣದಿಂದ ಬಿಜೆಪಿಗೆ ಅನುಕೂಲವಾಗಿತ್ತು, ಕಾಂಗ್ರೆಸ್, ಜೆಡಿಎಸ್‌ಗಳಿಂದ ಪ್ರಬಲವಾದ ಪ್ರತಿರೋಧವಿರದಿದ್ದುದರಿಂದ ಹಾಳೂರಿಗೆ ಉಳಿದವನೇ ಗೌಡ ಎಂಬಂತೆ ಗೆದ್ದುಬಂದು ಶಾಸಕನೂ ಆದ.



ವಿವೇಕಾನಂದ ವೈದ್ಯ

ಮೂಲತಃ ದಲಿತನಾಗಿರುವ ಈತ ಸದಾ ಭಜರಂಗಿ ಚೆಡ್ಡಿಗಳ ಕಾಲಡಿಯಲ್ಲೇ ಬಿದ್ದಿದ್ದವನು. ಬ್ರಾಹ್ಮಣಶಾಹಿ ಚೆಡ್ಡಿಗಳು ದಲಿತ ಹಿನ್ನಲೆಯ ಜನರನ್ನು ಹೇಗೆ ನೋಡುತ್ತಾರೆ ಎಂಬ ಕನಿಷ್ಠ ಜ್ಞಾನವೂ ಇಲ್ಲದೇ ಅವರ ಸೇವೆ ಮಾಡುತ್ತಾ ಬಂದಿರುವವನು.

ಶಿರಸಿಯಲ್ಲಿ ಸಣ್ಣ ವಾಚ್ ರಿಪೇರಿ ಅಂಗಡಿ ಇಟ್ಟುಕೊಂಡಿದ್ದ ವೈದ್ಯ ಇಂದು ಕೋಟ್ಯಾಧಿಪತಿಯಾಗಿ ಬೆಳೆದಿದ್ದಾನೆಂದರೆ ಅದೆಷ್ಟರಮಟ್ಟಿಗೆ ಶಿರಸಿಯನ್ನು ಕೊಳ್ಳೆ ಹೊಡೆದಿದ್ದಾನೆಂದು ಊಹಿಸಿಕೊಳ್ಳಬಹುದು. ಅಧಿಕಾರಿಗಳ ವರ್ಗಾವಣೆ ಮಾಡುವುದಕ್ಕೆ ಲಂಚ, ಕಾಮಗಾರಿಗಳ ಕಾಂಟ್ರಾಕ್ಟ್ ಕೊಡಿಸುವುದಕ್ಕೆ ಕಮೀಷನ್, ಅಷ್ಟೇಏಕೆ, ಶಾಸಕರ ಹೆಸರುಳ್ಳ ಲೆಟರ್‌ಹೆಡ್‌ಗೂ 5-10 ಸಾವಿರ ರೂ. ನಿಗದಿಪಡಿ ಮಾರಿಕೊಂಡಿದ್ದಾನೆಂದರೆ ಈತನಿಗೆ ದುಡ್ಡು ಮಾಡುವ ಖಯಾಲಿ ಅದೆಷ್ಟರಮಟ್ಟಿಗೆ ಇದೆ ಎಂಬುದನ್ನು ಅರ್ಥಮಾಡಿಕೊಳ್ಳಿ.

ಸಿದ್ದಾಪುರ ಕೋರ್ಲಕಟ್ಟಾ ಉಸರಿಯಲ್ಲಿ ಸ.ನಂ.30ರಲ್ಲಿ 60 ಎಕರೆಗೂ ಹೆಚ್ಚು ಜಮೀನು ಖರೀದಿಸಿದ್ದಾನೆ. ಆರ್‌ಎಸ್‌ಎಸ್‌ಗಳು, ಭಜರಂಗಿಗಳು, ಬಿಜೆಪಿ ಕಾರ್ಯಕರ್ತರು ನಡೆಸುವ ಹಫ್ತಾ ವಸೂಲಿಗೆ ವೈದ್ಯನ ಅನುಮತಿಯೇನೂ ಬೇಕಿಲ್ಲ, ಶಿರಸಿ-ಸಿದ್ದಾಪುರಗಳಲ್ಲಿ ನಡೆಯುವ ರೇಪ್, ರೌಡಿಸಂನಂತಹ ಅಪರಾಧಿ ಕೃತ್ಯಗಳಲ್ಲಿ ತೊಡಗಿರುವ ಮಹಾಶಯರೂ ಇವರೆ. ಅವರಿಗೆಲ್ಲ ವೈದ್ಯನ ಶ್ರೀರಕ್ಷೆಯಿದೆ.

ಈ ಸಲವೂ ಮೀಸಲು ಕ್ಷೇತ್ರ ಮುಂದುವರಿದರೆ ತಾನೇ ಮುಂದಿನ ಅಭ್ಯರ್ಥಿ ಎಂದು ವೈದ್ಯ ಹೇಳಿಕೊಂಡಿದ್ದಾನೆ. ಆದರೆ ಅದು ತುಸು ಕಷ್ಟ. ಈಗಾಗಲೇ ಕ್ಷೇತ್ರದಾದ್ಯಂತ ತನ್ನ ರಾಸಲೀಲೆಗಳಿಂದಲೇ ಕುಖ್ಯಾತನಾಗಿರುವ ಈತನನ್ನು ನಂಬಿಕೊಂಡರೆ ಬಿಜೆಪಿ ನೆಲಕಚ್ಚುತ್ತದೆಂಬ ಭಯ ಬಿಜೆಪಿಗಿರುವುದರಿಂದ ಈತನಿಗೆ ಟಿಕೆಟ್ ಸಿಗುವುದು ಕಷ್ಟ. ಅಲ್ಲದೆ, ರೌಡಿ ಸಂಸದ ಅನಂತಕುಮಾರ್ ಹೆಗಡೆ ತನ್ನ ಕಪಿ ಸೈನ್ಯದ ನಾಯಕ ಕದಂಬ ಸೊಸೈಟಿಯ ಪ್ರಭಾಕರನಿಗೆ ಟಿಕೆಟ್ ಕೊಡಬೇಕೆಂದು ಬಿಜೆಪಿ ವರಿಷ್ಠರಿಗೆ ದುಂಬಾಲು ಬಿದ್ದಿದ್ದಾನೆ. ವಿವೇಕಾನಂದ ವೈದ್ಯ ಯುಡ್ಡಿಯ ಶಿಷ್ಯನಾಗಿರುವುದರಿಂದ ಅನಂತಕುಮಾರ್ ಬಣದವರೂ ಇವನಿಗೆ ಟಿಕೆಟ್ ತಪ್ಪಿಸಲು ಹವಣಿಸುತ್ತಿದ್ದಾರೆ. ಆದರೂ ಶಿರಸಿ ಕ್ಷೇತ್ರ ವಿಂಗಡಣೆಯಾಗಿ ಈಗಿನ ಮೀಸಲು ಕ್ಷೇತ್ರ ಕೈತಪ್ಪಿದರೆ ತಾನು ಶಿಕಾರಿಪುರಕ್ಕೆ ಹೋಗುತ್ತೇನೆಂದೂ, ಯುಡಿಯೊರಪ್ಪ ಶಿರಸಿ ಕ್ಷೇತ್ರಕ್ಕೆ ಸ್ಪರ್ಧಿಸುತ್ತಾರೆಂದೂ ಎಲ್ಲ ಕಡೆ ಹೇಳುತ್ತಾ ತಿರುಗುತ್ತಿದ್ದಾನೆ. ಅದೇನೇ ಇರಲಿ, ಒಂದು ವೇಳೆ ವೈದ್ಯನಿಗೆ ಟಿಕೆಟ್ ಸಿಕ್ಕರೂ ಜನ ಅವನನ್ನು ಮೂಲೆಗಟ್ಟುವುದು ಗ್ಯಾರಂಟಿ.

- ಅಂಕೋಲಾ ರಮೇಶ

ದಾವಣಗೆರೆ ಜಿಲ್ಲೆಯ ಮಲೆಬೆನ್ನೂರಿನಲ್ಲಿ ಕೋಮುಗಲಭೆಗಳನ್ನು ಹುಟ್ಟು ಹಾಕುವಲ್ಲಿ ಕೋಮುವಾದಿಗಳು ಹಾಗೂ ಸುದ್ದಿವೀರ ಅಧಿಕಾರಿಗಳಿಬ್ಬರೂ ಒಂದಾಗಿ, ಜೊತೆಗೆ ತಮ್ಮ ತಾಳಕ್ಕೆ ತಾಳ ಹಾಕುವ ಮಾಧ್ಯಮದವರು ಸಿಕ್ಕರೆ ಏನೆಲ್ಲಾ ಅವಘಡಗಳು ಸಂಭವಿಸುತ್ತವೆ ಎನ್ನುವುದಕ್ಕೆ ಇತ್ತೀಚೆಗೆ ನಡೆದ ಘಟನೆಗಳೇ ಸಾಕ್ಷಿ. ಈ ಕುರಿತ ಒಂದು ವರದಿ ಇಲ್ಲಿದೆ.

ಚೆಡ್ಡಿತೊಟ್ಟ ತಹಸೀಲ್ದಾರ ಎಚ್.ಬಿ.ನಾಗರಾಜ



ಕೋಮುವಾದಿಗಳು ಮತ್ತು ಸೂಕ್ಷ್ಮ ವಿಷಯಗಳನ್ನೇ ಹಿಂಜಿ, ಹಿರಿದು ಸುದ್ದಿ ಮಾಡಲೆತ್ನಿಸುವ ಸುದ್ದಿವೀರ ಅಧಿಕಾರಿಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಇವರಿಬ್ಬರೂ ಒಂದಾಗಿ, ತಮಗೆ ತಾಳ ಹಾಕುವ ಮಾಧ್ಯಮದವರನ್ನು ಬಳಸಿಕೊಂಡರೆ ಮತಾಂತರ, ಪ್ರಚೋದನೆ, ಶಾಂತಿಭಂಗ ಮುಂತಾದ ಪದಗಳು ಬೇರೆ ಬೇರೆ ಬಣ್ಣ ಪಡೆದುಕೊಂಡು ಏನೆಲ್ಲಾ ಅವಘಡಗಳು ಸಂಭವಿಸುತ್ತವೆ ಎನ್ನುವುದಕ್ಕೆ ಇತ್ತೀಚೆಗೆ ದಾವಣಗೆರೆ ಜಿಲ್ಲೆಯ ಮಲೆಬೆನ್ನೂರಿನಲ್ಲಿ ನಡೆದ ಘಟನೆಗಳೇ ಸಾಕ್ಷಿ.

ಪ್ರಮೋದ್ ಮುತಾಲಿಕನೆಂಬ ವಿಚ್ಛಿದ್ರುಕಾರಿಯ ಕೋಮುದ್ವೇಷದ ಭಾಷಣ ಮತ್ತು ಸಂಘಪರಿವಾರದವರ ಕುತಂತ್ರಗಳಿಂದಾಗಿ ಕಳೆದ ಒಂದೇ ವರ್ಷದಲ್ಲಿ ಮಲೆಬೆನ್ನೂರಿನಲ್ಲಿ ಮೂರು-ನಾಲ್ಕು ಬಾರಿ ಕೋಮು ಗಲಭೆಗಳು ನಡೆದಿವೆ. ಅದು ಸಾಲದೆಂಬಂತೆ ಈಗ ಮತ್ತೆ ಸಂಘಪರಿವಾರದ ರಾಜಕೀಯ ಸ್ವಾರ್ಥ ಮತ್ತು ಹರಿಹರದ ತಹಸೀಲ್ದಾರ ಎಚ್.ಬಿ.ನಾಗರಾಜನ ಕುತಂತ್ರ ಬುದ್ಧಿಯಿಂದಾಗಿ ಕ್ರೈಸ್ತ ಸಮುದಾಯದ ಅಲ್ಪಸಂಖ್ಯಾತರು ಸಾರ್ವಜನಿಕರ ಮುಂದೆ ಕೇಡಿಗಳಾಗಿ ಗುರುತಿಸಿಕೊಳ್ಳಬೇಕಾದ ಒತ್ತಾಯಕ್ಕೊಳಗಾಗಿದ್ದಾರೆ. ಅಷ್ಟೇ ಅಲ್ಲದೆ, ತಹಸೀಲ್ದಾರ ನಾಗರಾಜನ ಕುತಂತ್ರದಿಂದಾಗಿ ಜೈಲು ಸೇರಬೇಕಾದಂತಹ ಪರಿಸ್ಥಿತಿ ಎದುರಾಗಿದೆ.

ವಿಕ ಎಬ್ಬಿಸಿದ ಗಾಳಿಸುದ್ದಿ

ದಿನಾಂಕ 11.11.2007 ರಂದು ವಿಜಯ ಕರ್ನಾಟಕ ಎಂಬ ಸಂಘ ಪರಿವಾರದ ಪತ್ರಿಕೆಯ ವರದಿಗಾರನನ್ನು ಮುಂದಿಟ್ಟುಕೊಂಡು ಸ್ಥಳೀಯ ಆರ್‌ಎಸ್‌ಎಸ್‌ನ ಒ.ಜಿ.ಪ್ರಭಾಕರ್ (ಗ್ರಾಮ ಪಂಚಾಯತಿ ಸದಸ್ಯ), ನಾಗರಾಜ, ಪ್ರಕಾಶ, ಸಿದ್ದೇಶ ಮತ್ತು ಗ್ರಾಮ ಪಂಚಾಯತಿ ಅಧ್ಯಕ್ಷ ಜಮೀರ್ ಅಹ್ಮದ್ ಮುಂತಾದವರು ಕ್ರೈಸ್ತರು ಪ್ರಾರ್ಥನೆ ಮಾಡುತ್ತಿದ್ದ ಮನೆಯೊಳಗೆ ಅಕ್ರಮ ಪ್ರವೇಶ ಮಾಡಿ, ಫೋಟೋ ತೆಗೆದು 'ಮತಾಂತರಕ್ಕೆ ಬಲವಂತ ಮಾಡುತ್ತಿದ್ದೀರಿ' ಎಂದು ದಾಂಧಲೆ ಎಬ್ಬಿಸಿದ್ದರು.

ಪ್ರಾರ್ಥನೆ ಸಲ್ಲಿಸುತ್ತಿದ್ದ ಎಲ್ಲರೂ "ನಾವು ಸ್ವ-ಇಚ್ಛೆಯಿಂದ ಪ್ರಾರ್ಥನೆ ಸಲ್ಲಿಸುತ್ತಿದ್ದೇವೆ, ನಮ್ಮನ್ನು ಯಾರೂ ಬಲವಂತ ಮಾಡಿಲ್ಲ" ಎಂದು ದಾಂಧಲೆ ಮಾಡಲು ಬಂದವರೊಂದಿಗೆ ವಾಗ್ವಾದಕ್ಕಿಳಿದರು. ಅಂದು ಪ್ರಾರ್ಥನಾ ಮಂದಿರದಲ್ಲಿ ನಡೆದದ್ದು ಅಷ್ಟೇ.


ಆದರೆ ವಿ.ಕ. ಪತ್ರಿಕೆ 'ಮತಾಂತರಕ್ಕೆ ಆಕ್ಷೇಪ, ಪ್ರಾರ್ಥನಾ ಕೇಂದ್ರಕ್ಕೆ ದಾಳಿ' ಎಂಬ ಶೀರ್ಷಿಕೆ ಕೊಟ್ಟು, ಸಂಘಪರಿವಾರದವರ ಹೇಳಿಕೆಗಳನ್ನೇ ಪ್ರಧಾನವಾಗಿಸಿ ಮೊದಲ ಬಾರಿಗೆ ಗಾಳಿಸುದ್ದಿಯೆಬ್ಬಿಸಿತು. ಯಾವಾಗ ಈ ವರದಿ ಪ್ರಕಟವಾಯಿತೋ, ಒಂದು ತಿಂಗಳವರೆಗೂ ಈ ಘಟನೆಯ ಬಗ್ಗೆ ಒಂದಲ್ಲಾ ಒಂದು ಊಹಾಪೋಹಗಳನ್ನು ಸಂಘಪರಿವಾರದವರು ಜನರ ನಡುವೆ ಹರಿಯಬಿಟ್ಟು ಇದೊಂದು ಗಂಭೀರ ಸಮಸ್ಯೆ ಎಂಬಂತೆ ಬಿಂಬಿಸಿದರು.

ಆದರೆ, ವಿ.ಕ. ಪತ್ರಿಕೆ ಮಾತ್ರ ಈ ಘಟನೆಯ ಬಗ್ಗೆ 'ಹಿಂದೂ ದೇವರುಗಳ ಅವಹೇಳನ', 'ಮಲೆಬೆನ್ನೂರಿನಲ್ಲೀಗ ಮತಾಂತರದ ಭೀತಿ', 'ಅಕ್ಕಪಕ್ಕದವರನ್ನೂ ನಂಬದ ಸ್ಥಿತಿ', '27ಕ್ಕೆ ಮಲೆಬೆನ್ನೂರು ಬಂದ್', 'ಬಲೆಗೆ ಬೀಳುತ್ತಿರುವ ಮಹಿಳೆಯರು' ಎಂದೆಲ್ಲಾ ನಿನ್ನೆ ಮೊನ್ನೆಯವರೆಗೂ ವರದಿಗಳನ್ನು ಪ್ರಕಟಿಸಿ ಕೋಮು ದ್ವೇಷದ ಕಾವನ್ನು ಕಾಪಾಡುತ್ತಿದೆ.


ತಹಸೀಲ್ದಾರ ಚೆಡ್ಡಿಗಳ ಏಜೆಂಟ್!

ಮಲೆಬೆನ್ನೂರು ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಬ್ರಿಜೇಶ್ ಮ್ಯಾಥ್ಯೂ 11-11-2007 ರಂದು ಘಟನೆಯ ಬಗ್ಗೆ ಹರಿಹರ ತಹಸೀಲ್ದಾರ ನಾಗರಾಜನಿಗೆ ಲಿಖಿತ ವರದಿ ಕೊಟ್ಟಿದ್ದಾರೆ. ಈ ವರದಿಯನ್ನು ಆಧಾರವಾಗಿಟ್ಟುಕೊಂಡ ತಹಸೀಲ್ದಾರ ಮಲೆಬೆನ್ನೂರಿನ ಪಾಸ್ಟರ್ ಗಂಗಾಧರ್ ಅವರಿಗೆ ನೋಟೀಸು ಜಾರಿ ಮಾಡಿ 'ನೀವು ಶಾಂತಿಭಂಗ ಉಂಟುಮಾಡುತ್ತೀರೆಂಬುದು ನನಗೆ ಮನವರಿಕೆಯಾಗಿರುತ್ತದೆ' ಎಂದು ಹೇಳಿ ಸಿ.ಆರ್.ಪಿ.ಸಿ. ಸೆಕ್ಷನ್ 107ರ ಅನ್ವಯ ಕ್ರಮ ಜರುಗಿಸಲು ಮುಂದಾಗಿದ್ದಾನೆ. ಅಷ್ಟೇ ಅಲ್ಲ, ಪಾಸ್ಟರ್ ಗಂಗಾಧರ್ ಮತ್ತು ಆತನ ಹೆಂಡತಿ ನಿರ್ಮಲ, ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿರುವ ಹಜರತ್ ಆಲಿ ಮತ್ತು ಆತನ ಹೆಂಡತಿ ಚಮನ್ ಬೀ ಅವರಿಗೆ 17-12-2007ರಂದು ವಿಚಾರಣೆಗೆ ಹಾಜರಾಗಲು ಸಮನ್ಸ್ ನೀಡಿದ್ದಾನೆ. ಶಾಂತಿಭಂಗವಾಗುತ್ತಿದ್ದರೆ ತಹಸೀಲ್ದಾರನೊಬ್ಬ ಮಾಡಲೇಬೇಕಾದ ಕರ್ತವ್ಯ ಇದು ನಿಜ. ಆದರೆ ನಾಗರಾಜ ತಹಸೀಲ್ದಾರನಂತೆ ವರ್ತಿಸಲಿಲ್ಲ ಎಂಬುದೇ ಸಮಸ್ಯೆ.


ಹರಿಹರ



ಬಷೀರ




ಗಂಗಾಧರ



ಹಜರತ್ ಆಲಿ

17-12-2007ರಂದು ವಿಚಾರಣೆಗೆ ಹಾಜರಾದ ಗಂಗಾಧರ್ ಮತ್ತು ಇತರರು ಹರಿಹರ ತಹಸೀಲ್ದಾರ್ ಕಚೇರಿಗೆ ಸೂಕ್ತ ಜಾಮೀನಿನೊಂದಿಗೆ ಬಂದಿದ್ದಾರೆ. ಆದರೆ ಅಂದು ನಾಗರಾಜ ಹೊಟ್ಟೆಗೆ ಅದೇನು ತಿಂದಿದ್ದನೋ ಗೊತ್ತಿಲ್ಲ- ಇದ್ದಕ್ಕಿದ್ದಂತೆ ಗಂಗಾಧರ ಮತ್ತು ಇತರರ ಮೇಲೆ ರೋಫು ಹಾಕಲು ಶುರುಮಾಡಿ 'ಅರೆಸ್ಟ್ ಮಾಡ್ರೀ ಇವ್ರುನ್ನ' ಎಂದು ಕೂಗಾಡಿದ್ದಾನೆ. ತನ್ನ ಕಚೇರಿಯಲ್ಲಿ ವಿಚಾರಣೆ ನಡೆಸುವುದನ್ನು ಕೈಬಿಟ್ಟು ಎಲ್ಲರನ್ನು ನೇರ ಮಲೆಬೆನ್ನೂರಿಗೇ ಕರೆದುಕೊಂಡು ಹೋಗಿದ್ದಾನೆ.

ಸಂಘಪರಿವಾರದ ಪೂರ್ವ ಯೋಜನೆಯಂತೆ ಮಲೆಬೆನ್ನೂರು ನಾಡ ಕಚೇರಿಯಲ್ಲಿ ಸೇರಿದ್ದ ನೂರಿನ್ನೂರು ಜನರ ನಡುವೆಯೇ ಪಾಸ್ಟರ್ ಗಂಗಾಧರ್, ಹಜರತ್ ಆಲಿ, ನಿರ್ಮಲಾ ಹಾಗೂ ಚಮನ್ ಬೀ ಅವರನ್ನು ತಹಸೀಲ್ದಾರ್ ನಾಗರಾಜ ಸಾರ್ವಜನಿಕವಾಗಿ ವಿಚಾರಣೆಗೊಳಪಡಿಸಿದ್ದಾನೆ. ಗಂಗಾಧರ್‌ರನ್ನು 'ನಿನಗೆ ಈ ಅಂಗಿ, ವಾಚು ಎಲ್ಲಿಂದ ಬಂದ್ವು? ನಿನ್ನನ್ನ ಗಡೀಪಾರು ಮಾಡಿಸ್ತೀನಿ...' ಎಂದು ಹೆದರಿಸಿದ್ದಾನೆ. ಇದನ್ನು ಕೇಳಿ ಸಂಘಪರಿವಾರದವರು ಸುಮ್ಮನಿರುತ್ತಾರೆಯೇ? ಸಂಘಪರಿವಾರದ ಒ.ಜಿ.ಪ್ರಭಾಕರ, ಸುರೇಶ್ ಶಾಸ್ತ್ರಿ ಮುಂತಾದವರು ತಹಸೀಲ್ದಾರನಿಗಿಂತಲೂ ಹೀನಾಯವಾಗಿ ಬೈದಿದ್ದಾರೆ. ಅಷ್ಟಕ್ಕೇ ನಿಲ್ಲದೇ ಮುಂದುವರೆದ ನಾಗರಾಜ ಸ್ಥಳದಲ್ಲಿದ್ದ ಪಿ.ಎಸ್.ಐ. ಬ್ರಿಜೇಶ್ ಮ್ಯಾಥ್ಯೂ (ಈತ ರೋಮನ್ ಕ್ಯಾಥೋಲಿಕ್, ಮತಾಂತರದ ಆರೋಪ ಹೊತ್ತಿರುವವರು ಪೆಂತೆಕೋಸ್ತರು) ಅವರಿಗೆ 'ಇವ್ರನ್ನ ಅರೆಸ್ಟ್ ಮಾಡಿ ರಾತ್ರಿಯೆಲ್ಲಾ ಚೆನ್ನಾಗಿ ರಿಪೇರಿ ಮಾಡ್ರಿ' ಎಂದು ಹೇಳಿದ್ದಾನೆ.



ಜಿಲ್ಲಾಧಿಕಾರಿ ದ್ಯಾಬೆರಿ

ಆದರೆ ಬ್ರಿಜೇಶ್ ಮ್ಯಾಥ್ಯೂ 'ನೀವು ಆ ರೀತಿ ಕಂಪ್ಲೇಂಟ್ ಕೊಡಿ' ಎಂದು ಹೇಳಿ ಅಲ್ಲಿಂದ ಎದ್ದು ಹೋದಾಗ ತಹಸೀಲ್ದಾರ್ ನಾಗರಾಜನಿಗೆ ಮುಕುಳಿ ಉರಿಬಿದ್ದು 'ನೀವು ಡ್ಯೂಟಿ ಸರಿಯಾಗಿ ಮಾಡ್ತಾ ಇಲ್ಲ' ಎಂದು ಸ್ಥಳದಲ್ಲಿದ್ದ ಇತರ ಪೊಲೀಸರನ್ನು ದಬಾಯಿಸಿದ್ದಾನೆ. ಇತ್ತೀಚೆಗೆ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂದಿದ್ದ ಬೀರೇಶ ಎಂಬ ಪಿಗ್ಮಿ ಕಲೆ... ಮಾಡುವ ಹುಡುಗ ಗಂಗಾಧರರನ್ನು ಬೆಂಬಲಿಸುತ್ತಿದ್ದ... ಕಾರಣದಿಂದ ಆತನನ್ನೂ ನಾಡಕಚೇರಿಗೆ ಎಳೆತಂ... 'ಇವನನ್ನು ಕೆಲಸದಿಂದ ತೆಗೆದ್ಹಾಕಿ' ಎಂ... ವಿ.ಎಸ್.ಎಸ್.ಎನ್. ಬ್ಯಾಂಕ್ ಅಧ್ಯಕ್ಷರಿಗೆ ಆದೇಶಿಸಿದ್ದ... ಅಷ್ಟೇ ಅಲ್ಲ, ಗಂಗಾಧರನ ಮನೆಗೆ ನೀಡಿದ್ದ ವಿದ್ಯು... ಸಂಪರ್ಕವನ್ನು ಸ್ಥಗಿತಗೊಳಿಸುವಂತೆ ಕೆಪಿಟಿಸಿಎಲ್‌ನವ... ಹಾಗೂ ಅವರ ಮನೆ ಖಾಲಿಮಾಡಿಸುವಂ... ಗ್ರಾಮಪಂಚಾಯಿತಿಯವರಿಗೆ, ಹಜರತ್ ಆಲಿ... ಟೈಲರ್ ಅಂಗಡಿಯನ್ನು ಖಾಲಿಮಾಡಿಸುವಂ... ಮಳಿಗೆಯ ಮಾಲೀಕರಿಗೆ ಹೇಳಿದ್ದಾನೆ. ಮುಂ... ವರೆದು, "ಇವರನ್ನು ಗಡೀಪಾರು ಮಾಡ... ಜಿಲ್ಲಾಧಿಕಾರಿಗಳಿಗೆ ಶಿಫಾರಸು ಮಾಡುತ್ತೇನೆ" ಎಂ... ಹೇಳಿ ಸಂಘಪರಿವಾರದವರ ಋಣ ತೀರಿಸಿಕೊಂಡಿದ್ದಾ... ಈ ತಹಸೀಲ್ದಾರ ನಾಗರಾಜ!

ಇಲ್ಲಿ ಎದುರಾಗುವ ಪ್ರಶ್ನೆಯೇನೆಂದರೆ, ಈ ರೀ... ಬಹಿರಂಗ ವಿಚಾರಣೆ ನಡೆಸಲು ಮತ್ತು ಕೆಲಸದಿಂ... ಕಿತ್ತು ಹಾಕಿಸುವ, ವಿದ್ಯುಚ್ಛಕ್ತಿ ಸ್ಥಗಿತಗೊಳಿಸು... ಮನೆಗಳನ್ನೇ ಖಾಲಿ ಮಾಡಿಸುವ ಮೌಖಿಕ ಆದೇ... ನೀಡುವ ಹಕ್ಕನ್ನು ತಹಸೀಲ್ದಾರ ನಾಗರಾಜನಿ... ಕೊಟ್ಟವರ್‍ಯಾರು? ಎನ್ನುವುದು. ತಾನೊಬ್ಬ ಸರ್ಕಾ... ಅಧಿಕಾರಿ, ತನಗೊಂದು ಚೌಕಟ್ಟಿದೆ ಎನ್ನುವುದ... ಮರೆತು ಈ ವಿಷಯದಲ್ಲಿ ಈತ ಹದ್ದು ಮೀ... ವರ್ತಿಸಿದ್ದಾನೆ. 26-12-2007ರಂದು ಮಲೆಬೆನ್ನೂ... ಭೇಟಿ ನೀಡಿದ ಜಿಲ್ಲಾಧಿಕಾರಿ ಎಂ.ಬಿ.ದ್ಯಾಬೇರಿ ಕೂ... ತಹಸೀಲ್ದಾರ್ ನಾಗರಾಜ ಹೇಳಿದ್ದನ್ನೇ ಸಾರ್ವಜನಿ... ಮುಂದೆ ಹೇಳಿದ್ದಾನೆ.


ಜಿಲ್ಲಾಧಿಕಾರಿಯ ಸಮ್ಮುಖದಲ್ಲೇ ಬೀರೇಶನ... ಬಂಧಿಸಿ, ಅಂದೇ ಜೈಲಿಗೆ ಕಳಿಸಲಾಗಿದೆ. ಈ ಇಬ್ಬ... ಅಧಿಕಾರಿಗಳು ಗಂಗಾಧರ್ ಮನೆಯ ವಿದ್ಯುಚ್ಛಕ್ತಿ ಸಂಪ... ವನ್ನು ಮೀಟರ್ ಬೋರ್ಡ್ ಸಮೇತ ಕಿತ್ತುಹಾಕಿಸಿ ಆ... ಹೆಂಡತಿ, ಮಕ್ಕಳನ್ನು ಕತ್ತಲಲ್ಲಿ ಬದುಕುವಂತೆ ಮಾಡು... ಯಶಸ್ವಿಯಾಗಿದ್ದಾರೆ. ಅಂತೆಯೇ, ಹಜರತ್ ಆ... ಟೈಲರ್ ಕೆಲಸ ಮಾಡಿಕೊಂಡಿದ್ದ ಮಳಿಗೆಯಿಂ... ಆತನನ್ನು ಹೊರಹಾಕಲಾಗಿದೆ. ಪಿಗ್ಮಿ ಕಲೆಕ್ಷ... ಬೀರೇಶ ತನ್ನ ಕೆಲಸವನ್ನು ಸದ್ಯದ... ಕಳೆದುಕೊಳ್ಳುವ, ಗಂಗಾಧರ್ ತನ್ನ ಮನೆಯ... ಕಳೆದುಕೊಳ್ಳುವ ದಿನಗಳು ದೂರವಿಲ್ಲವೆನಿಸುತ್ತ... ಇದು ಸಂಘಪರಿವಾರ ಮತ್ತು ಸರ್ಕಾ... ಅಧಿಕಾರಿಗಳು ಒಂದಾಗಿ ನಡೆಸುತ್ತಿರುವ ದೌಜ... ಗಳ ಒಂದು ಸ್ಯಾಂಪಲ್.

ಕ್ರೈಸ್ತರನ್ನು ಜೈಲಿಗಟ್ಟಿದ ತಹಸೀಲ್ದಾರ

ಯಾವಾಗ ಜಿಲ್ಲಾಧಿಕಾರಿಯೇ ತನ್ನ ಕೋಮುವಾ... ಕಿತಾಪತಿಗಳಿಗೆ ಬೆಂಬಲವಾಗಿ ನಿಂತನೋ ಇದರಿಂ... ಉತ್ತೇಜಿತನಾದ ನಾಗರಾಜ 28-12-200... ತಹಸೀಲ್ದಾರ್ ಕೋರ್ಟಿಗೆ ಹಾಜರಾದ ಗಂಗಾಧರ್ ಮ...

ಮುತಾಲಿಕನನ್ನು ಜೈಲಿಗೆ ಹಾಕಿಸೋರ್‍ಯಾರು?

ಪ್ರಮೋದ್ ಮುತಾಲಿಕನಿಗೆ ಹೀಗೇ ಮಾತನಾಡಲು ಮುಂದೆಯೂ ಅವಕಾಶ ಕೊಟ್ಟರೆ ಬರಲಿರುವ ವಿಧಾನಸಭಾ ಚುನಾವಣೆಯ ಹೊತ್ತಿಗೆ ಕರ್ನಾಟಕದ ಬಹಳಷ್ಟು ಕಡೆ ಕೋಮುದಳ್ಳುರಿ ಹೊತ್ತಿ ಸಹೋದರರಂತೆ ಬದುಕುತ್ತಿರುವ ಸಾಮಾನ್ಯ ಜನರು ಶತ್ರುಗಳಂತೆ ಬಡಿದಾಡಿಕೊಂಡು ರಕ್ತ ಹರಿಯುವುದರಲ್ಲಿ ಅನುಮಾನವಿಲ್ಲ. ಇವನ ಬಾಯಿಗೆ ಕಡಿವಾಣ ಹಾಕದೇ ಇದ್ದರೆ "ಸೆಕ್ಯುಲರ್ ಸಿದ್ಧಾಂತವೇ ನಮ್ಮ ಅಡಿಪಾಯ" ಎಂದು ಹೇಳುವ ಸರ್ಕಾರ ಮತ್ತು ಕಾನೂನು ರಕ್ಷಣೆ ಮಾಡುತ್ತೇವೆಂದು ಹೇಳಿಕೊಳ್ಳುವ ಪೊಲೀಸರು ಪ್ರಮೋದ್ ಮುತಾಲಿಕನ ಕೋಮುವಾದಿ ಕುತಂತ್ರಗಳಿಗೆ ಪೋಷಣೆ ನೀಡಿದಂತಾಗಿ ಮುಂದಿನ ಅನಾಹುತಗಳಿಗೆ ಪರೋಕ್ಷವಾಗಿ ಕಾರಣರಾಗುತ್ತಾರೆ.



ಕಳೆದ ಜನವರಿ 13ರಂದು ದಾವಣಗೆರೆಯ ರೇಣುಕಾ ಮಂದಿರದಲ್ಲಿ ಶ್ರೀರಾಮ ಸೇನೆಯ ಜಿಲ್ಲಾ ಘಟಕವನ್ನು ಉದ್ಘಾಟಿಸಲು ಬಂದಿದ್ದ ಪ್ರಮೋದ್ ಮುತಾಲಿ... ಹಿಂದೆಂದಿಗಿಂತಲೂ ಹದ್ದು ಮೀರಿ ಮಾತನಾಡಿದ್ದಾ... ನೇರವಾಗಿ ಮುಸ್ಲಿಂ ಸಮುದಾಯವನ್ನು ಕುರಿ... ತುಚ್ಛವಾಗಿ ಮಾತನಾಡಿದ್ದಲ್ಲದೆ ಅ... ಸಂಖ್ಯಾತರ ಹತ್ಯಾಕಾಂಡಗಳೇ ಹಿಂದು... ತ್ವದ ಅಂತರಾಳ' ಎಂದಿದ್ದಾನೆ.

ಓಟುಗಳಿಗಾಗಿ ಮುಸ್ಲಿಮರ... ಓಲೈಸುತ್ತಿರುವ ರಾಜಕೀಯ ಪಕ್ಷಗಳ... ಟೀಕಿಸುವ ನೆಪದಲ್ಲಿ ಮುಸ್ಲಿಮ... ಅಭಿವೃದ್ಧಿಗೆ ಯಾವುದೇ ಅನುದಾ... ವನ್ನು ನೀಡಬಾರದು' ಎಂದು ಹೇ... ಗುಜರಾತ್‌ನಲ್ಲಿ ನರೇಂದ್ರ ಮೋ... ಆಡಳಿತವು ನಡೆಸಿದ ಮುಸ್ಲಿಮ... ನರಮೇಧವನ್ನು ಬಹಿರಂಗವಾಗಿ ಸ... ರ್ಥಿಸಿಕೊಂಡಿದ್ದಾನೆ. ತಸ್ಲಿಮಾ ನಸ್ರಿ... ರನ್ನು ನರೇಂದ್ರ ಮೋದಿ ಗುಜರಾ... ಆಹ್ವಾನಿಸಿರುವುದೇ ನಿಜವಾದ ಹಿಂದೂತ್ವ ಎಂ... ಹೇಳಿ ಟೆನಿಸ್ ಕ್ರೀಡಾಪಟು ಸಾನಿಯಾ ಮಿರ್ಜಾ... ಧರಂಸಿಂಗ್ ಸರ್ಕಾರ ನೀಡಿದ ಐದು ಲಕ್ಷ ರ...

ಹಜರತ್ ಅಲಿಯವರು ನೀಡಿದ್ದ ಜಾಮೀನನ್ನು ತಿರಸ್ಕರಿಸಿ, ಜೈಲಿಗೆ ಕಳಿಸಿದ್ದಾನೆ. ಇವರ ಪರವಾಗಿ ವಾದಿಸಲು ಹೋಗಿದ್ದ ವಕೀಲ ಎಲ್.ಎಚ್.ಅರುಣ್‌ಕುಮಾರ್‌ರವರ ಮೇಲೆ 'ಇಂಥವರ ಕೇಸು ತಗಳ್ಳಾಕೆ ಬಂದೀರಲ್ರೀ' ಎಂದು ಹರಿಹಾಯ್ದಿದ್ದಾನೆ. ಈ ಕೇಸಿಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನೂ ವಕೀಲರಿಗೆ ಕೊಡದೇ, ಕಾನೂನು ರೀತಿಯೂ ವರ್ತಿಸದೇ ಉದ್ದೇಶಪೂರ್ವಕವಾಗಿ ಗಂಗಾಧರ್ ಮತ್ತು ಹಜರತ್ ಅಲಿಯನ್ನು ನಾಲ್ಕೈದು ದಿನ ಜೈಲಿನಲ್ಲಿ ಕೊಳೆಯುವಂತೆ ಮಾಡಿದ್ದಾನೆ. ಸಿ.ಆರ್.ಪಿ.ಸಿ. ಸೆಕ್ಷನ್ 107ಕ್ಕೆ ಸಂಬಂಧಿಸಿದಂತೆ ಜಾಮೀನು ಕೊಟ್ಟರೂ ಅದನ್ನು ತಿರಸ್ಕರಿಸಿ ಕಾನೂನುಭಂಗ ಮಾಡಿದ ಕುಕೀರ್ತಿ ನಾಗರಾಜನಿಗೇ ಸಲ್ಲಬೇಕು! ಕೇವಲ ಹದಿನೈದು ದಿನಗಳಲ್ಲೇ ಮೂರು ಬಾರಿ ಪ್ರತ್ಯೇಕವಾಗಿ, ಹೆಣ್ಣುಮಕ್ಕಳು ಒಳಗೊಂಡಂತೆ ಒಟ್ಟು 12 ಮಂದಿಯ ಮೇಲೆ ನಾಗರಾಜ ಸಿ.ಆರ್.ಪಿ.ಸಿ. ಸೆಕ್ಷನ್ 107, 151 ರಂತೆ ಏಕಪಕ್ಷೀಯವಾಗಿ ಪ್ರಕರಣಗಳನ್ನು ದಾಖಲಿಸಿರುವುದು ದುರುದ್ದೇಶವಲ್ಲದೆ ಮತ್ತೇನು?

ಮಲೇಬೆನ್ನೂರಿನಲ್ಲಿಯ ವಾಸ್ತವವೇನು?

ವಾಸ್ತವವೇನೆಂದರೆ, ಸಂಘಪರಿವಾರ, ಹರಿಹರದ ತಹಸೀಲ್ದಾರ ನಾಗರಾಜ ಹಾಗೂ ಕೆಲವು ಪತ್ರಕರ್ತರು ಏನೆಲ್ಲಾ ಎಗರಾಡಿದರೂ 'ತನ್ನನ್ನು ಬಲವಂತದಿಂದ ಮತಾಂತರ ಮಾಡಿಸಲಾಗಿದೆ' ಎಂದು ಒಬ್ಬನೇ ಒಬ್ಬ ವ್ಯಕ್ತಿ ಇದುವರೆಗೂ ದೂರು ಕೊಟ್ಟಿಲ್ಲ, ಬಹಿರಂಗವಾಗಿ ಎಲ್ಲೂ ಹೇಳಿಕೊಂಡಿಲ್ಲ. ಶಾಂತಿಭಂಗ, ಬಲವಂತದ ಮತಾಂತರ ಮುಂತಾದ ಮಾತುಗಳು ಹುಟ್ಟುತ್ತಿರುವುದು ಸಂಘಪರಿವಾರಿಗಳಿಂದ ಮತ್ತು ತಹಸೀಲ್ದಾರ್ ನಾಗರಾಜನಿಂದ ಮಾತ್ರ! ಬಲವಂತವಾಗಿ ಮತಾಂತರ ಮಾಡಿಸುವ ಬಗ್ಗೆ ಖಚಿತ ದೂರುಗಳನ್ವಯ ಕಾನೂನು ಪ್ರಕಾರ ಕ್ರಮ ಕೈಗೊಂಡರೆ ಅದನ್ನು ಸ್ವಾಗತಿಸಬಹುದು. ಆದರೆ ಸಂಘಪರಿವಾರ ಮತ್ತದರ ತುತ್ತೂರಿಗಳಾದ ಕೆಲವು ಪತ್ರಿಕೆಗಳು ಎಬ್ಬಿಸಿದ ಪುಕಾರುಗಳೇ ಸತ್ಯವೆಂದು ಬಹಿರಂಗವಾಗಿ ಹೇಳಿಕೆ ನೀಡುವುದಲ್ಲದೇ ಅನ್ಯಧರ್ಮೀಯರ ಬಗ್ಗೆ ಅಸಹನೆಯನ್ನೆಬ್ಬಿಸುವ ನಾಗರಾಜನಂತಹ ಅಧಿಕಾರಿಗಳನ್ನು ಕೋಮುವಾದಿಗಳ ಕೈಗೊಂಬೆಯೆನ್ನದೆ ಬೇರೇನೆನ್ನಬೇಕು?

ಮಲೇಬೆನ್ನೂರಿನಲ್ಲಿ ಇತ್ತೀಚೆಗೆ ಮೂರು ನಾಲ್ಕು ಬಾರಿ ನಡೆದ ಕೋಮುಗಲಭೆಗಳಲ್ಲಿ ಶಾಂತಿಭಂಗಕ್ಕೆ, ಭಯಭೀತ ವಾತಾವರಣಕ್ಕೆ, ಅಮಾಯಕ ಹೆಣ್ಣುಮಕ್ಕಳ ಅತ್ಯಾಚಾರಗಳಿಗೆ ಸಂಘಪರಿವಾರದವರು ನೇರವಾಗಿ ಕಾರಣರಾಗಿದ್ದರೂ ಇದುವರೆಗೂ ಅವರ ವಿರುದ್ಧ ಕ್ರಮಗಳನ್ನು ಕೈಗೊಂಡಿಲ್ಲ. ಆದರೆ ಊಹಾಪೋಹಗಳಿಗೆ ಬೆಲೆ ಕೊಟ್ಟು ಪ್ರಚಾರವನ್ನು ಗಿಟ್ಟಿಸುತ್ತಿರುವ ಜಿಲ್ಲಾಧಿಕಾರಿ ಎಂ.ಬಿ.ದ್ಯಾಬೇರಿ, ತಹಸೀಲ್ದಾರ ನಾಗರಾಜನಂತಹ ಅಧಿಕಾರಿಗಳಿಂದಲೇ ಸಮಾಜದ ಸ್ವಾಸ್ಥ್ಯ ಹಾಗೂ ಶಾಂತಿ ಕೆಡುವುದರಲ್ಲಿ ಅನುಮಾನವೇ ಇಲ್ಲ.


-ಚಂದ್ರಶೇಖರ ತೋರಣಘಟ್ಟ

ಬರಗೆಟ್ಟ ನರಸಿಂಹಯ್ಯನಿಗೆ ಬಕಾಸುರ ನಾಡಿಗೇರನೆ ನಾಡಿ ಮತ್ತು ಗೇರು!

ಕೊಪ್ಪಳ ಜಿಲ್ಲಾ ಪಂಚಾಯತ್‌ನ ಕೆಲ ಸದಸ್ಯರು ಅದನ್ನು ಏರಿಗೆ ಎಳೆದರೆ, ಅದರ ಮುಖ್ಯ ಕಾರ್ಯದರ್ಶಿ ನರಸಿಂಹಯ್ಯ ಮಾತ್ರ ಕೆರೆಗೆ ಎಳೆಯುತ್ತಿದ್ದಾನೆ. ಕಾರಣ ಈ ಬರಗೆಟ್ಟ ನರಸಿಂಹಯ್ಯನಿಗೆ ಬಕಾಸುರ ನಾಡಿಗೇರ್ ಎಂಬ ಹಲಾಲುಕೋರನೇ ಬ್ರೈನ್ ಅಂತೆ. ಹಾಗಂತ ಜಿಲ್ಲೆಯ ಕ್ಲಾಸ್ I, ಗೆಜೆಟೆಡ್ ಅಧಿಕಾರಿಗಳೆದುರು ಯಾವ ಮುಲಾಜೂ ಇಲ್ಲದೆ ಸ್ವತಃ ನರಸಿಂಹಯ್ಯನೇ ಹೇಳುತ್ತಾನೆ. ಏನಾದರೂ ಮಾಹಿತಿ ಬೇಕಿದ್ದರೆ ಎಫ್.ಡಿ.ಎ ಲೆವೆಲ್ಲಿನ ನಾಡಿಗೇರ್‌ನಿಂದಲೇ ಮಾರ್ಗದರ್ಶನವನ್ನೂ ತಗೊಳ್ಳಿ ಎನ್ನುತ್ತಾನೆ ನರಸಿಂಹಯ್ಯ.

ಹಿಂದೆ ಜಲನಿರ್ಮಲ ಯೋಜನೆಯನ್ನು ಗುಡಿಸಿ ಗುಂಡಾಂತರ ಮಾಡಿದ್ದ ಲಕ್ಷ್ಮಿ ನರಸಿಂಹಯ್ಯ ಎಂಬಾತನಿಗೆ ಈ ನರಸಿಂಹಯ್ಯ ತನ್ನ ತಲೆಯನ್ನು ಒಪ್ಪಿಸಿದ್ದ. ಬಕಾಸುರನ ಜೆರಾಕ್ಸ್ ಕಾಪಿಯಂತಿದ್ದ ಲಕ್ಷ್ಮಿನರಸಿಂಹಯ್ಯನನ್ನು ಸಭೆಯಲ್ಲಿ ಪಕ್ಕ ಕೂಡಿಸಿಕೊಳ್ಳುತ್ತಿದ್ದ. ಅದೊಮ್ಮೆ ಸಲ್ಲದ ವ್ಯಕ್ತಿಗೆ ಇಲ್ಲದ ಮಹತ್ವ ಕೊಡುತ್ತಿರುವ ಬಗ್ಗೆ ಸದಸ್ಯರು ವಿರೋಧಿಸಿದಾಗ, ಲಕ್ಷ್ಮಿನರಸಿಂಹಯ್ಯನು ಸಿಎಸ್ ನರಸಿಂಹಯ್ಯನ ಚೇಂಬರ್‌ನಲ್ಲೇ ಇರುತ್ತಿದ್ದ. ನರಸಿಂಹಯ್ಯ ಮತ್ತು ಸಂಗಾತಿಗಳ ತಿನ್ನಾಟ, ಹಾರಾಟಕ್ಕೆ ಮೆತ್ತಗಾಗಿರುವುದು ಸಜ್ಜನ ಉಪಕಾರ್ಯದರ್ಶಿ ರವಿ ಬಸರಿಹಳ್ಳಿ.

ಲಕ್ಷ್ಮಿನರಸಿಂಹಯ್ಯ ಹೋದಮೇಲೆ ಆ ಕೆಲಸಕ್ಕೆ ಸುರೇಶ ನಾಡಿಗೇರ್ ಎಂಬುವವನನ್ನು ಇಟ್ಟುಕೊಂಡಿದ್ದಾರೆ ನರಸಿಂಹಯ್ಯ. ಮೂಲತಃ ಬಿಸಿಎಂ ಇಲಾಖೆಯಲ್ಲಿದ್ದು, ಅಲ್ಲಿಯೂ ಮೇಯ್ದು ಜಿಲ್ಲಾ ಪಂಚಾಯ್ತಿಗೆ ಸೂಪರಿಂಟೆಂಡೆಂಟ್ ಅಂತ ಕಳೆದ ಐದು ವರ್ಷದಿಂದ ವಕ್ಕರಿಸಿರುವ ನಾಡಿಗೇರ್, ಸೀನಿಯರ್‌ಗಳನ್ನೇ ಹಿಂದಿಕ್ಕಿ ಎಲ್ಲದರಲ್ಲೂ ಕೈಯಾಡಿಸುವ ಡೀಲಿಂಗ್ ಮಾಸ್ಟರ್.


ಡಾ. ಮುಲ್ಲಾ

ಆದರೂ ಈತನನ್ನು ನರಸಿಂಹಯ್ಯ ಎಷ್ಟು ನಂಬಿದ್ದಾನೆಂದರೆ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯಲ್ಲೂ ಆತ "ನಾಡಿಗೇರ್ ಈಸ್ ಮೈ ಬ್ರೈನ್, ನಿಮ್ಮ ಕೆಲಸಗಳಿಗೆ ನಾಡಿಗೇರ್‌ನನ್ನು ಭೇಟಿಯಾಗಿ ಮಾರ್ಗದರ್ಶನ ತಗೊಳ್ಳಿ" ಅಂತ ನಾಚಿಕೆ ಇಲ್ಲದೆ ಹೇಳುತ್ತಾನೆ.


ಎಫ್.ಡಿ.ಸಿ ಲೆವೆಲ್ಲಿನ ಸೂಪರಿಂಟೆಂಡೆಂಟ್ ನಾಡಿಗೇರ್ ತನ್ನ ಬ್ರೈನ್ ಅಂತ ನರಸಿಂಹಯ್ಯ ಹೇಳಿದ ಮೇಲೆ ಆತನಿಗೆ ಬ್ರೈನ್ ಇಲ್ಲ ಅಂದಂತಾಯಿತಲ್ಲವೇ. ಹಾಗಾದರೆ ಆತ ಇದ್ದರೆಷ್ಟು, ಬಿಟ್ಟರೆಷ್ಟು? ಅಂದಹಾಗೆ, ತಲೆ ಇಲ್ಲದವರನ್ನು ಕೊಪ್ಪಳ ಬಳಿಯ ಸಿಂದೋಗಿ ಎಂಬ ಗ್ರಾಮದಲ್ಲಿ ಕೆಡವಿ ಹಾಕಿ ಮೂಗು, ಕಿವಿ ಮತ್ತೊಂದು ಜಾಗಕ್ಕೆ ಎಂಥದೋ ರಸ ಹಿಂಡುತ್ತಾರೆ.

ಕೊಪ್ಪಳ

ಇದ್ದುದರಲ್ಲಿಯೇ ಜಿಲ್ಲಾ ಪಂಚಾಯ್ತಿ ಆಳಿದ ಮಹಿಳೆಯರಲ್ಲಿಯೇ ಉತ್ತಮ ಎನಿಸಿಕೊಂಡಿರುವ ಅಧ್ಯಕ್ಷೆ ಮಾಲತಿ ನಾಯಕ ಯಾವುದಾದರೂ ಅನುದಾನದಡಿಯಲ್ಲಿ ನರಸಿಂಹಯ್ಯನಿಗೆ ಸಿಂದೋಗಿಯಲ್ಲಿ ಟ್ರೀಟ್‌ಮೆಂಟ್ ಕೊಡಿಸಬಾರದೇ?

ಇದೇ ನರಸಿಂಹಯ್ಯ ಹಳ್ಳಿಗಳಿಗೆ ಭೇಟಿ ಕೊಟ್ಟಾಗ ಮಹಿಳೆಯರನ್ನು "ಮಕ್ಕಳೆಷ್ಟು?" ಅಂತ ಕೇಳುತ್ತಾನೆ. ಅವರು ನಾಲ್ಕು/ಐದು ಅಂತ ಉತ್ತರ ಕೊಟ್ಟರೆ "ಹಂದಿ, ನಾಯಿ ಹಡೆದಂತೆ ಹಡೆಯೋಕೆ ನಾಚಿಕೆ ಆಗಲ್ವ" ಅಂತ ಹೀಯಾಳಿಸುತ್ತಾನೆ. ಇವನಿಗೆ ಜನಸಂಖ್ಯೆ ನಿಯಂತ್ರಣದ ಬಗ್ಗೆ ಕಾಳಜಿ ಇದ್ದರೆ ಅವರಿಗೆ ಅದರ ಬಗ್ಗೆ ತಿಳಿವಳಿಕೆ ಹೇಳಲಿ. ಅದನ್ನು ಬಿಟ್ಟು ಹೀಗೆ ಬಾಯಿಗೆಬಂದಂತೆ ಮಾತನಾಡಿದರೆ ಅಧಿಕಾರಿಗಳ ಬಗ್ಗೆ ಜನ ಏನೆಂದುಕೊಂಡಾರು?

ಇನ್ನು ಈತನ ಕಚೇರಿಗೆ ಯಾರಾದರೂ ಬಂದರೆ ಅವರಿಗೆ ಭಗವದ್ಗೀತೆಯ ಕಥೆ ಹೇಳಲು ಶುರು ಮಾಡಿ ತಲೆಚಿಟ್ಟು ಹಿಡಿಸಿಬಿಡುತ್ತಾನೆ. ಅದಿಲ್ಲವೆಂದರೆ ಚೀನಾ, ಜಪಾನ್, ಹಾಂಕಾಂಗ್ ಅಂತ 27 ರೀಲಿನ ಸಿನಿಮಾ ಹೇಳಲು ಆರಂಭಿಸುತ್ತಾನೆ. ಅತ್ತ ಹಳ್ಳಿ ಹೆಣ್ಣುಮಕ್ಕಳನ್ನು ಹಂದಿ, ನಾಯಿ ಅಂತ ಹೀಯಾಳಿಸಿ, ಇತ್ತ ಭಗವದ್ಗೀತೆ ಪುರಾಣ ಹೇಳೋದು, ಮತ್ತೊಮ್ಮೆ ಚೀನಾ, ಜಪಾನ್.... ಅಂತ ಬಡಬಡಿಸುವುದನ್ನು ನೋಡಿ ಈತನಿಗೆ ನಿಜವಾಗಲೂ ತಲೆ ಇಲ್ಲ ಅಂತ ಜಿಲ್ಲಾ ಪಂಚಾಯ್ತಿ ಆಡಿಕೊಳ್ಳುತ್ತಿದೆ. ಆದರೆ ನಾಡಿಗೇರ್‌ನಂತಹವರನ್ನು ತನ್ನ ಬ್ರೈನ್ ಅಂತ ನರಸಿಂಹಯ್ಯ ಹೇಳಿಕೊಂಡ ಮೇಲೆ ಮತ್ತೇಕೆ ಅನುಮಾನ?


ನರಸಿಂಹಯ್ಯ

ಹಾಗಂತ ನರಸಿಂಹಯ್ಯ ಬರೀ ಐಲು ಪೈಲು ಗಿರಾಕಿ ಅಂತ ತಿಳಿಯಬೇಡಿ. ಹಗರಣ ಮಾಡಿ ತಿನ್ನುವುದರಲ್ಲಿ ಈತ ಮಸ್ತಾದ ಜಟ್ಟಿಯೇ. ಈಗ್ಗೆ ಎಂಟು ತಿಂಗಳ ಹಿಂದೆ ಮುಲ್ಲಾ ಎಂಬ ಡಿಎಚ್‌ಓ ಡಿ ಗ್ರೂಪ್ ಮತ್ತು ವಾಹನ ಚಾಲಕರ ನೇಮಕಾತಿ (ಮ್ಯಾನ್‌ಪವರ್ ಏಜೆನ್ಸಿ ಮೂಲಕ ನೇಮಕಾತಿ)ಯನ್ನು ಹೊರಜಿಲ್ಲೆಯವರಿಗೆ ಕೊಡುವ ಉದ್ದೇಶದಿಂದ ಇಂಗ್ಲಿಷ್‌ನಲ್ಲಿ ಟೆಂಡರ್ ಕರೆದಿದ್ದ. ಅದನ್ನು ಕರವೇ, ಕಸಾಪ, ದಲಿತ ಸಂಘಟನೆಗಳ ಅರೆಬೆತ್ತಲೆ ಮೆರವಣಿಗೆ ಮೂಲಕ ಪ್ರತಿಭಟಿಸಿದ್ದವು. ಅದೇ ಹೊತ್ತಿಗೆ ಡಿಸಿಸಿ ಬಸವರಾಜ್ ತರಬೇತಿಗೆಂದು ಎಂಟು ತಿಂಗಳ ರಜೆ ಮೇಲೆ ಹೋದಾಗ ನರಸಿಂಹಯ್ಯ ಪ್ರಭಾರಿ ಡಿಸಿಯಾಗಿ ಬಂದು ಕುಂತ.

ಇಂಗ್ಲಿಷ್‌ನಲ್ಲಿ ಮುದ್ರಿತ ಟೆಂಡರ್‌ಗೆ ಬರೀ ಎರಡೇ ಸಂಸ್ಥೆಯಿಂದ ಟೆಂಡರ್ ಬಂದರೂ ಮುಲ್ಲಾ ಮತ್ತು ನರಸಿಂಹಯ್ಯ ಜೊತೆಗೂಡಿ ಹಳೇ ದಿನಾಂಕದ ಮೇಲೆ ಅನುಮೋದನೆ ಕೊಟ್ಟೇಬಿಟ್ಟರು. ಅನುಮೋದನೆಯನ್ನು ಪಡೆದ ಧಾರವಾಡದ ಮಾತಾ ಟೆಕ್ನಾಲಜಿ ಸಂಸ್ಥೆ ಮುಲ್ಲಾ ಮತ್ತು ನರಸಿಂಹಯ್ಯಗೆ ಕೊಟ್ಟಿದ್ದು ಎರಡು ಲಕ್ಷ ರೂಪಾಯಿ.

ಅಷ್ಟೇ ಅಲ್ಲ, ತನ್ನ ನಿವೃತ್ತಿಯ ದಿನ ಮಾತಾ ಟೆಕ್ನಾಲಜಿಗೆ ಅನುಮೋದನೆ ನೀಡಿದ ಮುಲ್ಲಾ 55 ಜನ ಡಿ ಗ್ರೂಪ್ ನೌಕರರಿಂದ ತಲಾ 20 ಸಾವಿರದಂತೆ 11 ಲಕ್ಷ, 8 ಜನ ಡ್ರೈವರ್‌ಗಳಿಂದ ತಲಾ 40 ಸಾವಿರದಂತೆ 3 ಲಕ್ಷ 20 ಸಾವಿರ ರೂಪಾಯಿಗಳನ್ನು ಪಡೆದು ಅದನ್ನು ತನ್ನ ಜೇಬಿಗಿಳಿಸಿ, ಸ್ವಲ್ಪವನ್ನು ನರಸಿಂಹಯ್ಯನ ಬಾಯಿಗೆ ತುರುಕಿ, ಇಲಾಖೆಯಿಂದ ಬೀಳ್ಕೊಡುಗೆ ಮಾಡಿಸಿಕೊಂಡು ಮನೆಗೆ ಹೋದ.

ಸತ್ಯ ಏನೆಂದರೆ ನರಸಿಂಹಯ್ಯ ಮತ್ತು ಮುಲ್ಲಾ ಸೇರಿಕೊಂಡು ಹೀಗೆ ನೇಮಕ ಮಾಡಿಕೊಂಡ ಒಟ್ಟು 63 ನೌಕರರಿಗೆ ಎಂಟು ತಿಂಗಳಾದರೂ ಸಂಬಳ ಕೊಟ್ಟಿಲ್ಲ, ಕಾರಣ ಆರೋಗ್ಯ ಇಲಾಖೆಯ ಹಣಕಾಸು ವಿಭಾಗ ಈ ನೇಮಕಕ್ಕೆ ಅನುಮತಿಯನ್ನೇ ನೀಡಿಲ್ಲ. ಅಷ್ಟೇ ಅಲ್ಲದೆ ಜಿಲ್ಲಾ ಪಂಚಾಯತ್‌ನ ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿ ಸಭೆಯಲ್ಲೂ ಇದಕ್ಕೆ ಒಪ್ಪಿಗೆ ಸಿಕ್ಕಿಲ್ಲ. ಹೀಗೆ ಅಕ್ರಮವಾಗಿ ನೇಮಕ ಮಾಡಿಕೊಂಡಿರುವ ನೌಕರರಿಗೆ ಈಗ ಕನಿಷ್ಠ 30 ಲಕ್ಷದಷ್ಟು ಸಂಬಳ ಬಾಕಿ ಇದೆ. ದುಡ್ಡು ಹೊಡಕೊಂಡ ಮುಲ್ಲಾ ತನ್ನ ಖಾಸಗಿ ದವಾಖಾನೆಯಲ್ಲಿ ರೊಕ್ಕ ಸುಲಿಯುತ್ತಿದ್ದರೆ, ಮಾಮೂಲು ಪಡೆದ ನರಸಿಂಹಯ್ಯನನ್ನು ಕೇಳಿದರೆ ಮತ್ತದೇ ಭಗವದ್ಗೀತೆ ಪುರಾಣ ಶುರುಮಾಡುತ್ತಾನೆ.

ಕುಕನೂರಿನ ಪಿಎಸ್‌ಐ ಸೇವಾಸದನ ಎಂಬ ಎನ್‌ಜಿಓಗೆ ಇನ್ನಿಲ್ಲದ ಆಸಕ್ತಿಯಿಂದ ಯೋಜನೆಗಳನ್ನು ಕೊಟ್ಟಿರುವ ನರಸಿಂಹಯ್ಯ ಅವರಿಗೆ ಅಡ್ವಾನ್ಸ್ ಹಣ ಕೂಡ ಬಿಡುಗಡೆ ಮಾಡಿಸುತ್ತಿರುವುದು, ಬೇರೆಬೇರೆ ಇಲಾಖೆಗಳಿಗೆ ಫೋನ್ ಹಚ್ಚಿ "ಪಿಎಸ್‌ಐಗೆ ಯೋಜನೆ ಕೊಡಿ" ಅಂತ ಬೆದರಿಸುತ್ತಿರುವುದನ್ನು ನೋಡಿದರೆ ಅದರಲ್ಲೆಷ್ಟು ನುಂಗಿದ್ದಾನೋ ಎಂಬ ಗುಮಾನಿ ಬಾರದಿರದು.

ಯಾಕೆಂದರೆ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಕರೆತರುವ ಯೋಜನೆಯ ಬಾಬ್ತು 11 ಲಕ್ಷವನ್ನು ಇದೇ ಪಿಎಸ್‌ಐ ಮತ್ತು ನರಸಿಂಹಯ್ಯ ಮುಂದಾಮೋಚಿದ್ದಾರೆ. ಪಿಎಸ್‌ಐಗೆ ಕೊಟ್ಟಿರುವ ಬಾಲಕಾರ್ಮಿಕರ ಶಾಲೆಯಲ್ಲಿ ಬರೀ 12 ಹುಡುಗರು ಇದ್ದರೂ ಲಕ್ಷಗಟ್ಟಲೇ ಅನುದಾನ ಸುರಿಯುತ್ತಿದ್ದಾನೆ ನರಸಿಂಹಯ್ಯ.

ಅಧ್ಯಕ್ಷಗಿರಿಯ ಗದ್ದುಗೆಯಲ್ಲಿ ಕುಳಿತುಕೊಳ್ಳಲು ಕಾರಣರಾದವರೆದುರು ತಲೆ ಎತ್ತಿ ನಿಲ್ಲುವಂತಹ ಆಡಳಿತ ನೀಡುವ ಇಚ್ಛೆ, ಕಾಳಜಿ ಏನಾದರೂ ಅಧ್ಯಕ್ಷೆ ಮಾಲತಿ ನಾಯಕರಿಗೆ ಮತ್ತು ಜಿಪಂ ಸದಸ್ಯರಿಗೆ ಇದ್ದರೆ ಕೂಡಲೇ ನರಸಿಂಹಯ್ಯ ಮತ್ತು ನಾಡಿಗೇರ್‌ನನ್ನು ಜಿಲ್ಲೆಯಿಂದ ಗಡೀಪಾರು ಮಾಡಬೇಕಿದೆ.

ಇದು ಮಾಲತಿ ಮೇಡಂಗೂ ಅರ್ಥವಾಗುತ್ತೆ ಅಂತ ಜಿಲ್ಲೆ ಭಾವಿಸಿದೆ. ಏಕೆಂದರೆ ಮಾಲತಿಯವರು ತೀರಾ ದಡ್ಡರೇನಲ್ಲ!

-ವರದಿಗಾರ

ಅನುದಾನವನ್ನು 'ಆಕೆ ಮುಸ್ಲಿಂ' ಎಂಬ ಏಕೈಕ ಕಾರಣಕ್ಕಾಗಿ ನೀಡಲಾಗಿದೆ ಎಂದು ಕಾರಿಕೊಂಡಿದ್ದಾನೆ.

"ಮುಸ್ಲಿಂ ಹುಡುಗೀರನ್ನ ಮದುವೆಯಾಗಿ ಡಜನ್ ಮಕ್ಕಳನ್ನು ಹಡೀರಿ, ಈ ಮಕ್ಕಳನ್ನ ನಿಮಗೆ ಸಾಕಲಾಗದಿದ್ದರೆ ಶ್ರೀರಾಮಸೇನೆಗೆ ಕೊಡಿ. ಮುಸ್ಲಿಂ ಹುಡುಗಿಯರನ್ನು ಹಿಂದುಗಳನ್ನಾಗಿ ಪರಿವರ್ತಿಸಿ ಹಣೆಗೆ ಕುಂಕುಮ ಹಚ್ಚಿ ಮದುವೆಯಾಗಿ. ಹುಡುಗಿಯ ಪೋಷಕರು ಅಡ್ಡಬಂದರೆ ಶ್ರೀರಾಮ ಸೇನೆಗೆ ದೂರವಾಣಿ ಕರೆ ಮಾಡಿ" ಎಂದು ಹೇಳುವ ಮೂಲಕ ಎರಡು ಧರ್ಮಗಳ ನಡುವೆ ಕಿಚ್ಚು ಹಚ್ಚುವ ಉನ್ಮಾದವನ್ನು ಮುತಾಲಿಕ್ ಹುಟ್ಟಿಸಿದ್ದಾನೆ. ಬಿಜೆಪಿಯ ವಿರುದ್ಧವೂ ಮಾತನಾಡುತ್ತಾ "ಅಡ್ವಾನಿ ನಮಗೆ ನಾಯಕರಲ್ಲ, ನರೇಂದ್ರ ಮೋದಿಯೇ ನಮ್ಮ ನಾಯಕ" ಎಂದು ಹೇಳಿದ್ದಾನಲ್ಲದೆ ಕೊಲೆಗಡುಕ ಮೋದಿಯೇ ತನ್ನ ಕಾರ್ಯಕರ್ತರಿಗೆ ಆದರ್ಶವೆಂದು ಹೇಳಿದ್ದಾನೆ.

ಇದಾದನಂತರ ಪ್ರಮೋದ್ ಮುತಾಲಿಕನ ಹೇಳಿಕೆಯನ್ನು ವಿರೋಧಿಸಿ ಸೈಯದ್ ಸೈಫುಲ್ಲಾ ಮುತ್ತಿತರರ ನೇತೃತ್ವದಲ್ಲಿ 14ರಂದು ಜಿಲ್ಲಾಧಿಕಾರಿಯ ಕಚೇರಿಯ ಮುಂದೆ ದೊಡ್ಡ ಮಟ್ಟದಲ್ಲಿ ಪ್ರತಿಭಟನೆ ನಡೆದು ಮುತಾಲಿಕನ ಮೇಲೆ ಕ್ರಮ ಕೈಗೊಳ್ಳಬೇಕೆಂದು ಅವರೆಲ್ಲ ಒತ್ತಾಯಿಸಿದ್ದಾರೆ. ಅಂಜುಮನ್-ಎ-ಇಸ್ಲಾಂ ಸಂಘಟನೆಯ ಅಧ್ಯಕ್ಷರಾದ ಮುಷ್ತಾಕ್ ಅಹಮದ್ ಮುತ್ತಿತರರು ಮುತಾಲಿಕನ ಹೇಳಿಕೆಯನ್ನು ವಿರೋಧಿಸಿ ಅವನ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲು ಬದಾವಣೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುವುದಷ್ಟೇ ಅಲ್ಲದೆ, ರಾಜ್ಯದ್ಯಂತ ಎಲ್ಲಿಯೂ ಮುತಾಲಿಕನ ಭಾಷಣಕ್ಕೆ ಅವಕಾಶ ಮಾಡಿಕೊಡಬಾರದೆಂದು ಪೊಲೀಸ್ ಇಲಾಖೆಗೆ ಮನವಿ ಮಾಡಿದ್ದಾರೆ.

ಮುತಾಲಿಕನ ಸಂವಿಧಾನಬಾಹಿರ ಹೇಳಿಕೆಗಳ ಬಗ್ಗೆ ಮಾಧ್ಯಮಗಳಲ್ಲಿ ಈಗಾಗಲೇ ಸಾಕಷ್ಟು ಬಾರಿ ವರದಿಯಾಗಿದೆ. ಇತ್ತೀಚೆಗೆ ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಕೂಡಾ ಮುತಾಲಿಕನ ವಿಚ್ಛಿದ್ರಕಾರಿ ಬಹಿರಂಗ ಭಾಷಣದ ತುಣುಕುಗಳನ್ನೊಳಗೊಂಡ ಸಿ.ಡಿ.ಯನ್ನು ಬಿಡುಗಡೆ ಮಾಡಿದೆ. ಪ್ರಮೋದ್ ಮುತಾಲಿಕ್ ಮಾತನಾಡಿದ ಎಲ್ಲ ಅಂಶಗಳೂ ಅಂದು ಪೊಲೀಸರು ತೆಗೆದ ವೀಡಿಯೋ ದಲ್ಲಿ ದಾಖಲಾಗಿವೆ. ಈಗ ದಾಖಲಾಗಿರುವ ದೂರನ್ನು ಆಧಾರವಾಗಿಟ್ಟುಕೊಂಡು, ಪೊಲೀಸರು ತಾವು ಚಿತ್ರೀಕರಿಸಿರುವ ವೀಡಿಯೋ ಕ್ಲಿಪ್ಪಿಂಗ್‌ಅನ್ನು ನ್ಯಾಯಾಲಯಕ್ಕೆ ಸಮರ್ಪಿಸಿ ತೀವ್ರವಾದ ಕ್ರಮ ಕೈಗೊಳ್ಳಬೇಕು ಮತ್ತು ಮುಂದಿನ ದಿನಗಳಲ್ಲಿ ಪ್ರಮೋದ್ ಮುತಾಲಿಕನ ಅನಾಹುತಕಾರಿ ಭಾಷಣಗಳಿಗೆ ಅವಕಾಶ ನೀಡದಂತೆ ತಡೆಯೊಡ್ಡಬೇಕು.

ಇಲ್ಲದಿದ್ದರೆ ಪ್ರಮೋದ್ ಮುತಾಲಿಕ್ ನಡೆಸಲು ಹೊರಟಿರುವ ಸಂವಿಧಾನದ ಕಗ್ಗೊಲೆಗೆ ಮತ್ತು ಮತೀಯ ಕಲಹಗಳಿಗೆ ಸರ್ಕಾರವೇ ಬಹಿರಂಗ ಬೆಂಬಲ ಘೋಷಿಸಿದಂತಾಗುತ್ತದೆ. ಸರ್ಕಾರ ಮತ್ತು ಪೊಲೀಸ್ ಇಲಾಖೆ ಈ ಬಗ್ಗೆ ಎಚ್ಚರ ವಹಿಸಬೇಕು. ಇಲ್ಲದಿದ್ದರೆ ಸೌಹಾರ್ದಪ್ರಿಯ ಜನರೇ ಮುತಾಲಿಕನ ನರ ಕತ್ತರಿಸುತ್ತಾರಷ್ಟೆ.

- ಚಂದ್ರಶೇಖರ ತೋರಣಘಟ್ಟ

ಗೌರಿ ಲಂಕೇಶ್



ಗಿಡುಗಗಳಿಗೆ ಬಲಿಯಾದ ಗಿಳಿ ಬೆನಜೀರ್ 4

ಭಾರತದ ಇಂದಿರಾ ಗಾಂಧಿ ವಂಶಕ್ಕಾಗಲಿ, ಅಮೆರಿಕದ ಕೆನಡಿ ಸಂಸಾರಕ್ಕಾಗಲಿ, ಪಾಕಿಸ್ತಾನದ ಭುಟ್ಟೊ ಫ್ಯಾಮಿಲಿಗಾಗಲಿ ದಾರುಣ ಹತ್ಯೆಗಳು, ಅಪಘಾತದಲ್ಲಿ ಅಕಾಲಿಕ ಮರಣಗಳು ಹೊಸದಲ್ಲ. ಇಲ್ಲಿ ಇಂದಿರಾ ಮತ್ತು ರಾಜೀವ್ ಕೊಲೆಯಾದಂತೆ, ಅಲ್ಲಿ ಜಾನ್ ಮತ್ತು ರಾಬರ್ಟ್ ಕೆನಡಿ ಸಹೋದರರು ಗುಂಡೇಟುಗಳಿಗೆ ಉರುಳಿ ಬಿದ್ದಂತೆ, ಪಾಕಿಸ್ತಾನದಲ್ಲೂ ಜುಲ್ಫಿಕರ್ ಮತ್ತೀಗ ಬೆನಜೀರ್ ಹತ್ಯೆಯಾಗಿದ್ದಾರೆ. ಹಾಗೆಯೇ ಇಲ್ಲಿ ಸಂಜಯ್ ಗಾಂಧಿಯಂತೆಯೇ ಅಮೆರಿಕದಲ್ಲೂ ಜಾನ್ ಕೆನಡಿ ಜೂನಿಯರ್ ವಿಮಾನ ಅಪಘಾತದಲ್ಲಿ ಮಡಿದಿದ್ದ. ಆದರೆ ಭುಟ್ಟೊ ವಂಶದಲ್ಲಿ ಸಂಭವಿಸಿದ ಸಾವುಗಳು ವಿಭಿನ್ನ ಮತ್ತು ಅಷ್ಟೇ ವಿಚಿತ್ರವಾಗಿರುವುದಕ್ಕೆ ಕಾರಣ ಅವುಗಳ ಹಿಂದೆ ಮದುವೆಯಾದ ಹೆಂಡತಿ/ಒಡಹುಟ್ಟಿದ ಸಹೋದರಿಯ ಕೈವಾಡವಿತ್ತೇ ಎಂಬ ನಿಗೂಢ ಪ್ರಶ್ನೆ?!

ಈ ಪ್ರಶ್ನೆ ಯಾಕೆಂದರೆ ಬೆನಜೀರ್‌ಳ ಸಹೋದರರಿಬ್ಬರೂ ಸಂಶಯಾಸ್ಪದವಾಗಿ ಸಾವನ್ನಪಿದ್ದು....

ಜುಲ್ಫಿಕರ್‌ನ ಕೊಲೆಯಾದ ನಂತರ ಬೆನಜೀರ್ ಜೈಲುಪಾಲಾಗಿ ಅಲ್ಲಿ ಆಕೆ ಅಪಾರ ಕಷ್ಟಗಳನ್ನು ಎದುರಿಸಿದರೂ ಪ್ರಜಾಸತ್ತಾತ್ಮಕವಾಗಿಯೇ ತನ್ನ ಹೋರಾಟವನ್ನು ಮುಂದುವರೆಸುತ್ತೇನೆ ಎಂದಿದ್ದಳು. ಆದರೆ ಪಾಕಿಸ್ತಾನದಂತಹ ಊಳಿಗಮಾನ್ಯ ಸಂಸ್ಕೃತಿಯಲ್ಲಿ ಬೆಳೆದಿದ್ದ ಆಕೆಯ ಸಹೋದರರಾದ ಮುರ್ತಾಜಾ ಮತ್ತು ಶಾನವಾಜ್‌ಗೆ ಅಷ್ಟೊಂದು ತಾಳ್ಮೆ ಇರಲಿಲ್ಲ. ಜಿಯಾ ಉಲ್‌ಹಕ್ ಮತ್ತಾತನ ಭಂಟರಿಗೆ ಒಂದು ಅಂತ್ಯ ಕಾಣಿಸಲು ಅವರು ಅಲ್-ಜುಲ್ಫಿಕರ್ ಎಂಬ ಸಶಸ್ತ್ರ ಪಡೆಯನ್ನು ಹುಟ್ಟು ಹಾಕಿದರು. ಅದರ ಬಹಳಷ್ಟು ಸದಸ್ಯರು ಪಾಕಿಸ್ತಾನದ ಯುವಕರೇ ಆಗಿದ್ದರು. ಸರ್ವಾಧಿಕಾರಿ ಜಿಯಾ ವಿರುದ್ಧ ಯುದ್ಧದಲ್ಲಿ ತೊಡಗಿದ್ದ ಅಫಘಾನಿಸ್ತಾನದ ಕಮ್ಯುನಿಸ್ಟ್ ಸರ್ಕಾರ ಕಾಬುಲ್‌ನಲ್ಲಿ ಅಲ್-ಜುಲ್ಫಿಕರ್ ತಂಡಕ್ಕೆ ಆಶ್ರಯವನ್ನು ನೀಡಿದ್ದರಿಂದ ಭುಟ್ಟೊ ಸಹೋದರರು ಅಲ್ಲಿಂದಲೇ ತಮ್ಮ ಕಾರ್ಯಾಚರಣೆಯನ್ನು ನಡೆಸುತ್ತಿದ್ದರು.

ಆದರೆ ಇಂತಹ ಸಶಸ್ತ್ರ ಹೋರಾಟ ಯಶಸ್ವಿಯಾಗುವುದರ ಬಗ್ಗೆ ಬೆನಜೀರ್‌ಳಲ್ಲಿ ಅನುಮಾನಗಳಿದ್ದವು. ಆಕೆ 1983 ರಲ್ಲಿ ಪಾಕಿಸ್ತಾನದಿಂದ ಗಡಿಪಾರುಗೊಂಡು ಇಂಗ್ಲೆಂಡಿಗೆ ಹಿಂದಿರುಗಿದ ನಂತರ ಒಂದು ದಿನ ಫ್ರಾನ್ಸ್‌ನಲ್ಲಿನ ಕಾನ್ ನಗರದಲ್ಲಿ ತನ್ನ ಸಹೋದರರನ್ನು ಭೇಟಿಯಾದಳು. ಆ ಭೇಟಿಯಲ್ಲಿ ನಡೆದ ಚರ್ಚೆಯ ಬಗ್ಗೆ ಬೆನಜೀರ್ ಹೀಗೆ ಹೇಳಿಕೊಂಡಿದ್ದಳು:

"ಪಾಕಿಸ್ತಾನವನ್ನು ಒಂದು ಭಯೋತ್ಪಾದಕ ದೇಶವನ್ನಾಗಿ ಜಿಯಾ ಪರಿವರ್ತಿಸಿದ್ದಾನೆ. ಆದ್ದರಿಂದ ಹಿಂಸೆಗೆ ಹಿಂಸೆಯೇ ಉತ್ತರ" ಎಂದ ಮುರ್ತಾಜಾ.

"ಹಿಂಸೆಯಿಂದ ಹಿಂಸೆ ಹೆಚ್ಚಾಗುತ್ತದೆಯೇ ಹೊರತು ಅಂತಹ ಹೋರಾಟದಿಂದ ಜನರಿಗೆ ಯಾವುದೇ ರೀತಿಯ ಶಾಶ್ವತ ಪರಿಹಾರ ಸಿಗುವುದಿಲ್ಲ. ಬದಲಾಗಿ ಅಹಿಂಸಾತ್ಮಕ ಮತ್ತು ಪ್ರಜಾತಾಂತ್ರಿಕವಾದ ಚುನಾವಣೆ ಎಂಬ ಪ್ರಕ್ರಿಯೆಗಳಿಂದ ಜನರಿಗೆ ಉಪಯೋಗವಾಗುತ್ತದೆ" ಎಂದೆ ನಾನು.

"ಚುನಾವಣೆ? ಎಂತಹ ಚುನಾವಣೆ? ಜಿಯಾ ಆಡಳಿತದಲ್ಲಿ ನ್ಯಾಯಯುತವಾದ ಚುನಾವಣೆಗಳು ಸಾಧ್ಯ ಎಂಬುದೇ ಒಂದು ಭ್ರಮೆ. ಅವನನ್ನು ಸಶಸ್ತ್ರ ಹೋರಾಟದಿಂದಲೇ ತೊಲಗಿಸಬೇಕು" ಎಂದು ಉತ್ತರಿಸಿದ ಮುರ್ತಾಜಾ.

"ಆದರೆ ನಿನ್ನ ಗೆರಿಲ್ಲಾ ತಂಡಕ್ಕಿಂತಲೂ ಹೆಚ್ಚು ಅಸ್ತ್ರಗಳನ್ನು ಜಿಯಾನ ಸೈನ್ಯ ಹೊಂದಿದೆ. ನೀನು ಹಿಡಿದಿರುವ ಮಾರ್ಗ ಕಾರ್ಯಸಾಧುವಲ್ಲ, ಅದು ಪ್ರತಿಕೂಲ ಪರಿಣಾಮವುಳ್ಳದ್ದೂ ಕೂಡ" ಎಂದು ನಾನು ವಾದಿಸಿದೆ.

ಹೀಗೆ ನಮ್ಮ ವಾಗ್ವಾದ ದೊಡ್ಡ ಗಂಟಲಿನಲ್ಲಿ ನಡೆಯುತ್ತಿದ್ದಾಗ ತುಂಬಾ ಬೇಸರಗೊಂಡ ನನ್ನ ಇನ್ನೊಬ್ಬ ತಮ್ಮ ಶಾನವಾಜ್ "ನೀವಿಬ್ಬರೂ ಹೀಗೆ ಕಿತ್ತಾಡುವುದನ್ನು ನನ್ನಿಂದ ನೋಡಲಾಗುತ್ತಿಲ್ಲ. ನಾನೆಲ್ಲಿಗಾದರೂ ಹೋಗುತ್ತೇನೆ" ಎಂದ. ಆಗ ನಾನು ಮತ್ತು ಮುರ್ತಾಜಾ ನಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಇನ್ನು ಮುಂದೆ ರಾಜಕೀಯವನ್ನು ಚರ್ಚಿಸುವುದಿಲ್ಲ ಎಂದು ಅವನಿಗೆ ಮಾತು ಕೊಟ್ಟೆವು.

ಭುಟ್ಟೊ ಸಹೋದರರ ಸಶಸ್ತ್ರ ಹೋರಾಟ ಹಲವಾರು ಏರುಪೇರುಗಳನ್ನು ಕಾಣುತ್ತಾ ಕೆಲ ಸದಸ್ಯರನ್ನು ಬಲಿಪಶುಗಳನ್ನಾಗಿಸುತ್ತಾ ಸಾಗಿದ್ದಾಗಲೇ ಅವರಿಬ್ಬರೂ ಅಫಘಾನಿಸ್ತಾನದ ಹಿರಿಯ ಅಧಿಕಾರಿಯೊಬ್ಬನ ಇಬ್ಬರು ಪುತ್ರಿಯರನ್ನು ವರಿಸಿ ಮದುವೆಯಾದರು. ಇದೆಲ್ಲದರ ಮಧ್ಯೆ ಇವರಿಬ್ಬರನ್ನು ಪಾಕಿಸ್ತಾನದ FIA (ಭಾರತದ ಸಿಬಿಐಗೆ ಸಮ) ಸಂಸ್ಥೆ "ಮೋಸ್ಟ್ ವಾಂಟೆಡ್" ಪಟ್ಟಿಯಲ್ಲಿ ಸೇರಿಸಿತ್ತು.

1981 ರಲ್ಲಿ ಪಾಕಿಸ್ತಾನದ ಕರಾಚಿಯಿಂದ ಹೊರಟ ಅಂತರರಾಷ್ಟ್ರೀಯ ವಿಮಾನವನ್ನು ಅಫಘಾನಿಸ್ತಾನದ ಕಾಬುಲ್‌ಗೆ ಹೈಜಾಕ್ ಮಾಡುವುದರಲ್ಲಿ ಇವರಿಬ್ಬರೂ ಯಶಸ್ವಿಯಾದರು. ಈ ಪ್ರಕರಣದ ರೂವಾರಿಯಾಗಿದ್ದ ಮುರ್ತಾಜಾ ಪಾಕಿಸ್ತಾನದಲ್ಲಿ ಬಂಧನಕ್ಕೊಳಗಾಗಿದ್ದ ರಾಜಕೀಯ ನಾಯಕರನ್ನು ಬಿಡುಗಡೆಗೊಳಿಸಬೇಕೆಂಬ ಷರತ್ತನ್ನು ವಿಧಿಸಿದ. ಆ ವಿಮಾನದಲ್ಲಿ ಅಮೆರಿಕದ ಪ್ರಯಾಣಿಕರೂ ಇದ್ದಿದ್ದರಿಂದ ಮುರ್ತಾಜಾನ ಷರತ್ತಿಗೆ ಒಪ್ಪಿದ ಜಿಯಾ ರಾಜಕೀಯ ಬಂಧಿಗಳನ್ನು ಬಿಡುಗಡೆಗೊಳಿಸಿದನಲ್ಲದೆ, ಅವರನ್ನೆಲ್ಲ ಲಿಬಿಯಾದ ಟ್ರಿಪೋಲಿಗೆ ವಿಮಾನದಲ್ಲಿ ಸಾಗಿಸಿದ.

ಈ 'ಯಶಸ್ವಿ' ಹೈಜಾಕ್ ಪ್ರಕರಣದಿಂದ ಮತ್ತಷ್ಟು ಉತ್ತೇಜನಗೊಂಡ ಭುಟ್ಟೊ ಸಹೋದರರು ಮತ್ತೊಂದು ಯೋಜನೆಗೆ ಕೈಯಿಟ್ಟರು. ತಮ್ಮ ತಂದೆಗೆ ಮರಣದಂಡನೆ ವಿಧಿಸಿದ್ದ ಲಾಹೂರ್ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ ಮೌಲ್ವಿ ಮುಷ್ತಾಕ್ ಹುಸೇನ್ ಅವರ ಬೇಟೆಯಾಗಿದ್ದ. ಒಂದು ದಿನ ಮುಷ್ತಾಕ್ ಹುಸೇನ್ ತನ್ನ ಸ್ನೇಹಿತ ಚೌಧುರಿ ಜಾಹೂರ್ ಇಲಾಹಿಯೊಂದಿಗೆ ಕಾರಿನಲ್ಲಿ ಹೋಗುತ್ತಿದ್ದಾಗ ಅಲ್-ಜುಲ್ಫಿಕರ್ ಸಂಘಟನೆಯ ಸದಸ್ಯರು ಕಾರ್ ಮೇಲೆ ಗುಂಡುಗಳನ್ನು ಹಾರಿಸಿದರು. ಆ ಪ್ರಕರಣದಲ್ಲಿ ಮುಷ್ತಾಕ್ ಹುಸೇನ್ ಬಚಾವಾದನಾದರೂ ಚೌಧುರಿ ಇಲಾಹಿ ಸಾವನ್ನಪ್ಪಿದ.

ಈ ಚೌಧುರಿ ಬೇರಾರೂ ಅಲ್ಲ, ಭ್ರಷ್ಟ ಉದ್ಯಮಿಯಾಗಿದ್ದ ಈತ "ಜುಲ್ಫಿಕರ್‌ನನ್ನು ಗಲ್ಲಿಗೇರಿಸುವ ಆದೇಶಕ್ಕೆ ಸಹಿ ಹಾಕಿದ್ದ ಪವಿತ್ರ ಪೆನ್‌ಅನ್ನು ನನಗೇ ನೀಡಿ" ಎಂದು ಜಿಯಾ ಉಲ್ ಹಕ್‌ಮುಂದೆ ಬೇಡಿಕೆ ಇಟ್ಟು ಆ ಪೆನ್‌ಅನ್ನು ತನ್ನದಾಗಿಸಿಕೊಂಡಿದ್ದ. (ಇವತ್ತಿಗೂ ಈ ಚೌಧುರಿಯ ಮಗ ಸೇರಿದಂತೆ ಆತನ ಹಲವಾರು ಸಂಬಂಧಿಕರು ಭುಟ್ಟೊ ವಂಶದವರ ವಿರುದ್ಧ ಪಿತೂರಿ ನಡೆಸುತ್ತಿದ್ದಾರಾದರೂ ಅವರ್‍ಯಾರ ಬಳಿ ಆ 'ಪವಿತ್ರ ಪೆನ್' ಇದೆ ಎಂಬುದು ನಿಗೂಢವಾಗಿದೆ!)

ಈ ಎಲ್ಲಾ ಘಟನೆಗಳು ನಡೆಯುತ್ತಿದ್ದಾಗಲೇ, ವಿಮಾನ ಹೈಜಾಕ್ ಪ್ರಸಂಗ ರಷ್ಯಾ ಸರ್ಕಾರಕ್ಕೆ ಒಂದು ಸಮಸ್ಯೆಯಾಗಿ ಭುಟ್ಟೊ ಸಹೋದರರನ್ನು ಅಫಘಾನಿಸ್ತಾನದಿಂದ ಹೊರದೂಡಬೇಕೆಂಬ ಆದೇಶ ಬಂದಿತು. ಇದರ ಪರಿಣಾಮವಾಗಿ ಅವರಿಬ್ಬರೂ ತಮ್ಮ ಅಫಘಾನಿಸ್ತಾನ್ ಮಡದಿಯರೊಂದಿಗೆ ಅಲ್ಲಿಂದ ಹೊರಟು, ಕೆಲ ದಿನಗಳ ಕಾಲ ಸಿರಿಯಾ ಮತ್ತು ಲಿಬಿಯಾದಲ್ಲಿ ಉಳಿದು ಕೊನೆಗೆ ಫ್ರಾನ್ಸ್‌ನಲ್ಲಿ ವಾಸಿಸಲಾರಂಭಿಸಿದರು.

ಅವರಿಬ್ಬರೂ ಪಾಕಿಸ್ತಾನದಿಂದ ಬಹಳ ದೂರ ವಾಸಿಸುತ್ತಿದ್ದರೂ ಜಿಯಾ ತಮಗೆ ಏನಾದರೂ ಮಾಡಿಯಾನು ಎಂಬ ಭಯ ಅವರನ್ನು ಕಾಡುತ್ತಲೇ ಇತ್ತು. ಕಾಬೂಲ್‌ನಲ್ಲಿದ್ದಾಗ ಅಲ್-ಜುಲ್ಫಿಕರ್ 'ಸೈನ್ಯ'ದ ಹೊರೆ ಹೊತ್ತಿದ್ದ ಶಾನವಾಜ್ ತನ್ನ ಎಲ್ಲಾ ಅನುಭವಗಳಿಂದ ಹಣ್ಣುಗಾಯಿ ನೀರುಗಾಯಿ ಆಗಿದ್ದ. ಇದೇ ಹೊತ್ತಿಗೆ ಆತನ ಹೆಂಡತಿ ರೆಹಾನಾಳೊಂದಿಗಿನ ದಾಂಪತ್ಯ ಜೀವನವೂ ಹಳಸಿತ್ತು. ಆಕೆಗೆ ವಿಚ್ಛೇದನೆ ನೀಡುವ ಬಗ್ಗೆ ಚಿಂತಿಸುತ್ತಿದ್ದೇನೆ ಎಂದು ಶಾನವಾಜ್ ತನ್ನ ಅಕ್ಕ ಬೆನಜೀರ್‌ಳಿಗೆ ಹೇಳಿ[...] ಆಕೆ ಸಿಡಿಮಿಡಿಗೊಂಡಿದ್ದಳು. "ನಮ್ಮ ವಂಶ[...] ಇಲ್ಲಿಯವರೆಗೆ ಯಾರೂ ವಿಚ್ಛೇದನೆ ಪಡೆದಿಲ್ಲ. ಅದ[...] ರೆಹಾನಾಳನ್ನು ಸ್ವಇಚ್ಛೆಯಿಂದ ಮದುವೆಯಾಗಿದ್ದೀ[...] ಆಕೆ ನಿನ್ನ ಆಯ್ಕೆ, ಆದ್ದರಿಂದ ಕಷ್ಟವೋ, ಸುಖ[...] ನೀನು ಅವಳೊಂದಿಗೇ ಬದುಕನ್ನು ಸಾಗಿಸಬೇಕು" ಎಂದಿ[...] ಬೆನಜೀರ್.

ಈ ಸಂಭಾಷಣೆ ನಡೆದ ಕೆಲವೇ ದಿನಗಳಲ್ಲಿ ಶಾನ[...] ಕಾನ್‌ನಲ್ಲಿನ ತನ್ನ ಫ್ಲಾಟ್‌ನಲ್ಲಿ ಹೆಣವಾದ. ವಿಷ[...] ಸೇವಿಸಿ ಆತ ಸತ್ತನೆಂದು ಅವನ ಹೆಂಡತಿ ರೆಹ[...] ಹೇಳಿದರೂ ಬೆನಜೀರ್ ಪ್ರಕಾರ ಯಾರೂ ಆಕೆಯ[...] ನಂಬಲಿಲ್ಲ. ಅಷ್ಟೇ ಅಲ್ಲ, ಶಾನವಾಜ್ ತೀರಿಕೊ[...] ಹಲವೇ ತಿಂಗಳಲ್ಲಿ ರೆಹಾನಾ ಅಮೆರಿಕಕ್ಕೆ ಹಾರಿಹೋ[...] "ತಮಗೆ ತುಂಬಾ ಪ್ರಿಯವಾದ ಸರ್ವಾಧಿಕಾರಿ ಜಿಯಾ[...] ಸಂತೋಷಗೊಳಿಸಲೆಂದೇ CIA ನನ್ನ ಸಹೋದರ[...] ಕೊಂದಿರಬಹುದೇ? ನನ್ನ ತಮ್ಮಂದಿರನ್ನು ಮದುವೆಯಾ[...] ಅಫಘಾನಿಸ್ತಾನದ ಈ ಸಹೋದರಿಯರಿಬ್ಬರೂ [...] ಏಜೆಂಟ್‌ಗಳಾಗಿದ್ದರೆಯೇ?" ಎಂಬ ಗುರುತರ[...] ಪ್ರಶ್ನೆಗಳನ್ನು ಕೇಳಿದ್ದಳು. ಈ ಪ್ರಶ್ನೆಗಳಿಗೆ ಇವತ್ತಿ[...] ಉತ್ತರಗಳು ಅಲಭ್ಯ!

ಆಗಸ್ಟ್ 21, 1985 ರಂದು ತನ್ನ ತಮ್ಮ ಶಾನವಾ[...] ಕಳೇಬರಗಳೊಂದಿಗೆ ಬೆನಜೀರ್ ಪಾಕಿಸ್ತಾನಕ್ಕೆ ಬಂ[...] "ಎಂಟು ವರ್ಷಗಳ ಕಾಲ ತನ್ನ ಜನ್ಮಭೂ[...] ಹಿಂದಿರುಗಬೇಕೆಂದು ಶಾ ಹಪಹಪಿಸಿದ್ದ. ಆ ಅ[...] ಅವನಿಗಿರಲಿಲ್ಲ. ಆತನ ಪೂರ್ವಿಕರ ಭೂಮಿಗೆ, [...] ಜನ್ಮಭೂಮಿಗೆ ಅವನ ಅಂತ್ಯ ಯಾತ್ರೆಯಾದ[...] ಅರ್ಥಪೂರ್ಣವಾಗಿರಬೇಕೆಂಬ ಆಶೆ ನನ್ನದಾಗಿ[...] ಅಪ್ಪನೊಂದಿಗೆ ಆತ ಬೇಟೆ ಆಡಿದ್ದ ಸ್ಥಳಗಳು, [...] ಗದ್ದೆ-ಕೆರೆಗಳು, ಆತನ ಪರವಾಗಿ ಹೋರಾಡಿದ್ದ [...] ಎದುರು, ಪಾಕಿಸ್ತಾನದ ಈ ಧೀರಪುತ್ರ ತನ್ನ ತಂ[...] ಸಮಾಧಿಯ ಪಕ್ಕದಲ್ಲೇ ಚಿರನಿದ್ರೆಗೆ ಸಾಗು[...] ನೋಡಿಕೊಂಡೆ" ಎಂದು ಹಿರಿಯಕ್ಕ ನೆನಪಿಸಿಕೊಂಡಿ[...] ತನ್ನ ಆತ್ಮಚರಿತ್ರೆಯಲ್ಲಿ.


ಶಾನವಾಜ್ ಮಣ್ಣುಪಾಲಾದ ಹಲವೇ ದಿನ[...] ಮುರ್ತಾಜಾ ತನ್ನ ಹೆಂಡತಿ ಫೌಜಿಯಾಳಿಗೆ ವಿಚ್ಛೇ[...] ನೀಡಿ ತನ್ನ ಮೂರು ವರ್ಷದ ಪುತ್ರಿ ಫಾತಿಮಾಳೊ[...] ಡಮಾಸ್ಕಸ್‌ಗೆ ಸ್ಥಳಾಂತರಗೊಂಡ. 1986 ರಲ್ಲಿ[...] ಘಿನ್ವಾ ಎಂಬ ಲೆಬೆನಾನ್ ಮೂಲದ ಶಾಲಾ ಶಿಕ್ಷಕಿ[...] ಭೇಟಿಯಾದ. ಮುರ್ತಾಜಾ ಮತ್ತು ಫಾತಿಮಾ ಜೀವ[...] ಘಿನ್ವಾ ಒಂದು ಲಂಗರಾದಳು. ಮುರ್ತಾಜಾ [...] ಘಿನ್ವಾ 1989 ರಲ್ಲಿ ವಿವಾಹವಾಗಿ ಅವರಿಬ್ಬರೂ[...] ಮಗ ಜನಿಸಿದ. ಆತನಿಗೆ ಅಪ್ಪ-ಅಮ್ಮ ನೀಡಿದ ಹ[...] ಜುಲ್ಫಿಕರ್ ಅಲಿ ಭುಟ್ಟೊ!

ಅಷ್ಟೊತ್ತಿಗಾಗಲೇ ಬೆನಜೀರ್ ಪಾಕಿಸ್ತಾ[...] ಪ್ರಧಾನಮಂತ್ರಿ ಆಗಿದ್ದಳು. ಆದರೆ ಒಂದೆಡೆ ಪಟ[...] ಹಿತಾಸಕ್ತಿಗಳನ್ನು ಕಾಪಾಡುತ್ತಿದ್ದ ಸೈನ್ಯ, ಇನ್ನೊ[...] ಅಮೆರಿಕದ ಪರವಾಗಿದ್ದ ಅಧ್ಯಕ್ಷ ಗುಲಾಂ ಇ[...] ಖಾನ್.... ಈ ಎರಡು ಬಲಿಷ್ಠ ಶಕ್ತಿಗಳ ನ[...] ಸಿಕ್ಕಿಹಾಕಿಕೊಂಡಿದ್ದ ಬೆನಜೀರ್‌ಳಿಗೆ ಯಾವುದೇ ಜ[...] ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಲಿಲ್ಲ. ತನ್ನ ಬ[...] ಬಗ್ಗೆ ಆಕೆ ಖ್ಯಾತ ಪತ್ರಕರ್ತ ತಾರೀಕ್ ಅಲಿ ಮ[...] ತೋಡಿಕೊಂಡಾಗ ಆತ ಒಂದು ಸಲಹೆಯನ್ನು ನೀ[...] "ಜನರಿಗೆ ನಿನ್ನ ಮುಂದಿರುವ ಸಮಸ್ಯೆಗಳ ಬಗ್ಗೆ ವಿವ[...] ಯಾಕೆ ನಿನ್ನಿಂದ ಈ ಪರಿಸ್ಥಿತಿಯಲ್ಲಿ ಚುನಾವಣೆ[...] ನೀಡಿದ್ದ ಭರವಸೆಗಳಾದ ಶಿಕ್ಷಣ, ಕುಡಿಯಲು [...] ನೀರು, ಆರೋಗ್ಯ ಸೌಲಭ್ಯ ಇತ್ಯಾದಿಗ[...] ಪೂರೈಸಲಾಗುತ್ತಿಲ್ಲ ಎಂದು ಹೇಳು."


ಆದರೆ ಬೆನಜೀರ್ ಇದ್ಯಾವುದನ್ನು ಮಾಡಲಿಲ್ಲ. [...] ಬೆಂಬಲದಿಂದಲೇ ಗೆದ್ದಿದ್ದ ಬೆನಜೀರ್ ಜನರನ್ನು ನಿ[...] ತನ್ನ ಗಂಡನೊಂದಿಗೆ ವಿದೇಶಗಳಿಗೆ ಭೇಟಿ ನೀಡುವು[...] ಮಗ್ನಳಾದಳು. ತನಗೆ ಬೇಕಾದವರಿಗೆ ಲಾಭದಾ[...] ಹುದ್ದೆಗಳನ್ನು ನೀಡಿದಳು. ತನ್ನ ಗಂಡ [...] ಯೋಜನೆಗಳಲ್ಲೂ ಮೂಗು ತೂರಿಸಿ ಲಂಚ ಪಡೆ[...] 'ಮಿ. 10%' ಎಂಬ ಕುಖ್ಯಾತಿ ಗಳಿಸಿದರೂ ತನ[...] ಗೊತ್ತಿಲ್ಲವೆಂಬಂತೆ ಸುಮ್ಮನಿದ್ದಳು. ತನ್ನ ಪಕ್ಷದ ಸದ[...] ನವಾಜ್ ಷರೀಫ್‌ನ ಪಕ್ಷ ಖರೀದಿಸಲಾರಂಭಿಸಿದಾ[...] ಬೆನಜೀರ್ ನಿರ್ಲಕ್ಷ್ಯ ತೋರಿದಳು. ಪರಿಣಾಮವಾಗಿ [...] 90 ರಲ್ಲಿ ಅಧ್ಯಕ್ಷ ಗುಲಾಮ್ ಇಷ್ತಿಯಾಕ್ [...] ಆಕೆಯ ಮೇಲೆ ಭ್ರಷ್ಟಾಚಾರ ಮತ್ತು ಅದಕ್ಷ[...] ಆರೋಪಗಳನ್ನು ಹೊರಿಸಿ ಬೆನಜೀರ್ ಸರ್ಕಾ[...] ಅನೂರ್ಜಿತಗೊಳಿಸಿದ. ಆಕೆಯ ಸ್ಥಾನಕ್ಕೆ, [...] ಬೆಂಬಲದಿಂದ ರಾಜಕೀಯಕ್ಕೆ ಬಂದಿದ್ದ ನವಾಜ್ ಷ[...] ನೇಮಕಗೊಂಡ.

ಹೊಸ ಸರ್ಕಾರ ಆಕೆಯ ವಿರುದ್ಧ ಹಲ[...] ಕಾನೂನು ಕ್ರಮಗಳನ್ನು ಜಾರಿಗೊಳಿಸಿತು. ಭ್ರಷ್ಟಾ[...] ಆರೋಪದ ಮೇಲೆ ಜರ್ದಾರಿಯನ್ನು ಜೈಲಿಗೆ ದ[...]

ತಮ್ಮ ಮುರ್ತಾಜ್‌ನನ್ನೇ ಕೊಲ್ಲಿಸಿದಳೆ ಬೆನಜೀರ್?



ಶಾನವಾಜ್



ಶಾನವಾಜ್ ಕೊಲೆ ಕುರಿತ ವಿಚಾರಣೆಯಲ್ಲಿ

ಒಂದು ದಿನ ಜರ್ದಾರಿಗೆ ಪಾಠ ಕಲಿಸಲು ಮುರ್ತಾಜಾ ನಿರ್ಧರಿಸಿದ. "ನಾವಿಬ್ಬರೇ ಯಾರ ಉಪಸ್ಥಿತಿಯೂ ಇಲ್ಲದೆ ಎಲ್ಲವನ್ನೂ ಚರ್ಚಿಸಿ, ನಮ್ಮನಮ್ಮಲ್ಲೇ ಬಗೆಹರಿಸಿಕೊಳ್ಳೋಣ. ಮನೆಗೆ ಬಾ" ಎಂದು ಜರ್ದಾರಿಯನ್ನು ಆಹ್ವಾನಿಸಿದ. ಜರ್ದಾರಿ ಬಂದ. ಅವರಿಬ್ಬರೂ ಗಾರ್ಡನ್‌ನಲ್ಲಿ ಮಾತನಾಡುತ್ತಿದ್ದಾಗ ಮುರ್ತಾಜಾನ ಸಹಚರರು ಜರ್ದಾರಿ ಮೇಲೆ ಮುಗಿಬಿದ್ದು ಆತನನ್ನು ಗಟ್ಟಿಯಾಗಿ ಹಿಡಿದರು. ಮುರ್ತಾಜಾ ಒಂದು ಹರಿತವಾದ ಕ್ಷೌರಕತ್ತಿಯನ್ನು ಹಿಡಿದು ಜರ್ದಾರಿಯ ಅರ್ಧ ಮೀಸೆಯನ್ನು ಬೋಳಿಸಿದ. ಅವನ ಸಹಚರರೆಲ್ಲ ಕೇಕೆ ಹಾಕಿ ನಗುತ್ತಿದ್ದಾಗ ಜರ್ದಾರಿಗೆ "ತೊಲಗು ಇಲ್ಲಿಂದ" ಎಂದ ಮುರ್ತಾಜಾ.

ಆಪ್ಘನಿಸ್ತಾನಗೆ ಜನರ ವಿರೋಧವನ್ನು ಕಟ್ಟಿಕೊಂಡಿದ್ದ ಬೆನಜೀರ್ ಅದೇ ವರ್ಷ ನಡೆದ ಚುನಾವಣೆಯಲ್ಲಿ ಮಣ್ಣು ಮುಕ್ಕಿದಳು. ಸಂಸತ್ತಿನಲ್ಲಿ ವಿರೋಧ ಪಕ್ಷದ ನಾಯಕಿಯಾಗಿದ್ದ ಬೆನಜೀರ್ ಸರ್ಕಾರವನ್ನು ಉರುಳಿಸಲು ಹಲ ವಾರು ಪ್ರಯತ್ನಗಳನ್ನು ಮಾಡಿದ್ದಕ್ಕೆ ಆಕೆಯನ್ನು ರಾಜಧಾನಿ ಇಸ್ಲಾಮಾಬಾದ್‌ನಿಂದ ಗಡೀ ಪಾರು ಮಾಡಿ ಕರಾಚಿಗೆ ದೂಡಲಾಯಿತು.


ಫಾತಿಮಾ


ನುಸ್ರತ್


ಆದರೆ ನವಾಜ್ ಷರೀಫ್‌ನ ಸರ್ಕಾರ ಬೆನಜೀರ್‌ಳ ಸರ್ಕಾರಕ್ಕಿಂತ ಹೆಚ್ಚಿನ ಭ್ರಷ್ಟಾಚಾರದಲ್ಲಿ ತೊಡಗಿತು. ಮೂರು ವರ್ಷಗಳ ಕಾಲ ಆತನ ಉಪಟಳವನ್ನು ಸಹಿಸಿದ್ದ ಜನ ಪ್ರತಿಭಟಿಸಲಾರಂಭಿಸಿದರು. ಆಗ ಅಧ್ಯಕ್ಷ ಗುಲಾಂ ಇಷಾಕ್ ಖಾನ್ ಭ್ರಷ್ಟಾಚಾರದ ಆರೋಪದ ಮೇಲೆ ನವಾಜ್ ಷರೀಫ್‌ನ ಸರ್ಕಾರವನ್ನೂ ವಿಸರ್ಜಿಸಿ ಹೊಸ ಚುನಾವಣೆಗಳನ್ನು ಕರೆದ. ಈ ಬಾರಿ ಜನರ ಮನೆ ಬಾಗಿಲಿಗೇ ಸರ್ಕಾರವನ್ನು ತರುತ್ತೇನೆ ಎಂಬ ಘೋಷಣೆಯೊಂದಿಗೆ ಬೆನಜೀರ್ ಚುನಾವಣಾ ಅಖಾಡಕ್ಕೆ ಇಳಿದಳು. ಮೊದಲ ಬಾರಿ ಅಧಿಕಾರದಲ್ಲಿದ್ದಾಗ ತಾನು ಎಸಗಿದ್ದ ತಪ್ಪುಗಳ ಅರಿವಾಗಿ ಆಕೆ ಬದಲಾಗಿರಬಹುದು ಎಂದು ಜನ ಭಾವಿಸಿದರು. ಮತ್ತೆ ಆಕೆಯನ್ನು 1993 ರಲ್ಲಿ ಗೆಲ್ಲಿಸಿದರು.

ಬೆನಜೀರ್ ಬದಲಾಗಿದ್ದಳು, ಆದರೆ ಜನ ಭಾವಿಸಿದ್ದಂತಲ್ಲ. ಎರಡನೆ ಬಾರಿ ಅಧಿಕಾರಕ್ಕೇರುತ್ತಿದ್ದಂತೆ ತನ್ನ ಗಂಡನನ್ನು ಜೈಲಿನಿಂದ ಬಿಡಿಸಿದ ಬೆನಜೀರ್ ಆತನನ್ನು ಬಂಡವಾಳ ಹೂಡಿಕೆ ಇಲಾಖೆಯ ಮಂತ್ರಿಯನ್ನಾಗಿಸಿದಳು. ವಿರೋಧ ಪಕ್ಷದ ನಾಯಕರನ್ನು ಜೈಲಿಗಟ್ಟಿದ್ದಳು. ತನ್ನ ವಿರುದ್ಧ ಪ್ರತಿಭಟಿಸಿದ ಸಾಮಾನ್ಯ ಜನರ ಮೇಲೆ ಪೊಲೀಸರನ್ನು ಛೂ ಬಿಟ್ಟಳು. ಪಾಕಿಸ್ತಾನದ ಜನರ ಪಾಲಿಗೆ ರಾಕ್ಷಸಿಯಂತಾಗಿದ್ದಳು ಬೆನಜೀರ್.


ಮುರ್ತಾಜಾ ಸಮಾಧಿ ಮುಂದೆ ಕಳೆದ ತಿಂಗಳು

ಹಸಿದ ಹೆಬ್ಬಾವಿನಂತಾಗಿದ್ದ ಆವಳ ಗಂಡ ಸಿಕ್ಕಸಿಕ್ಕಿದ್ದನ್ನೆಲ್ಲ ನುಂಗಲಾರಂಭಿಸಿದ. ಒಂದು ಅಂದಾಜಿನ ಪ್ರಕಾರ ಮುಂದಿನ ಮೂರು ವರ್ಷಗಳಲ್ಲಿ ಅವರಿಬ್ಬರು ಸುಮಾರು ಎರಡು ಬಿಲಿಯನ್ ಡಾಲರ್‌ಗಳಷ್ಟು ಹಣವನ್ನು ದೋಚಿದ್ದರು.

ಅದೇ ಚುನಾವಣೆಗಳಲ್ಲಿ ಮುರ್ತಾಜಾ ವಿದೇಶದಲ್ಲಿದ್ದುಕೊಂಡೇ ಸಿಂಧ್ ವಿಧಾನಸಭೆಗೆ ಸ್ಪರ್ಧಿಸಿ ಗೆದ್ದಿದ್ದ. ಆದರೆ ಆತನಿಗೆ ಜರ್ದಾರಿಯ ಕಬಳಿಕೆ ಮತ್ತು ಬೆನಜೀರ್‌ಳ ನಿಷ್ಕ್ರಿಯತೆಯನ್ನು ಸಹಿಸಲಾಗಲಿಲ್ಲ. ಬೆನಜೀರ್ ತನ್ನ ಗಂಡನಿಗೆ ಕಡಿವಾಣ ಹಾಕಬೇಕೆಂದೂ, ಪಿಪಿಪಿ ಪಕ್ಷ ಜನರಿಂದ ದೂರವಾಗದಂತೆ ತಡೆಯಬೇಕೆಂದೂ ಅಕ್ಕಳನ್ನು ಒತ್ತಾಯ ಮಾಡಲಾರಂಭಿಸಿದ. ಅದೇ ಹೊತ್ತಿಗೆ ತಾಯಿ ನುಸ್ರತ್ ಕೂಡ ಮುರ್ತಾಜಾನನ್ನು ಸಿಂಧ್ ರಾಜ್ಯದ ಮುಖ್ಯಮಂತ್ರಿಯನ್ನಾಗಿಸಬೇಕು ಎಂಬ ಸಲಹೆಯನ್ನು ಬೆನಜೀರ್‌ಗೆ ನೀಡಿದಳು.


ಮುರ್ತಾಜಾ


ಘಿನ್ವಾ

ಇದೆಲ್ಲದರಿಂದ ಬೆನಜೀರ್‌ಗೆ ಕೋಪ ಬಂತು. ಇವತ್ತು ಮಗನ ಪರ ವಹಿಸುತ್ತಿರುವ ತಾಯಿ ನಾಳೆ ಆತನೇ ಜುಲ್ಫಿಕರ್‌ನ ನಿಜವಾದ ವಾರಸುದಾರ ಎಂದರೆ? ಮುರ್ತಾಜಾನೇ ಪಿಪಿಪಿ ಪಕ್ಷದ ನಾಯಕ ಎಂದು ಘೋಷಿಸಿದರೆ? ಅಂತಹ ಅಪಾಯಗಳನ್ನು ತಡೆಯಲು ಬೆನಜೀರ್ ಏನು ಮಾಡಿದಳು ಗೊತ್ತೇ? ತನ್ನ ತಾಯಿಯನ್ನೇ ಪಿಪಿಪಿ ಅಧ್ಯಕ್ಷೆ ಸ್ಥಾನದಿಂದ ತೆಗೆದು ತಾನೇ ಆಜೀವ ಅಧ್ಯಕ್ಷ ಎಂದು ಘೋಷಿಸಿಕೊಂಡಳು. ಆಗ ಅಕ್ಕನ ಬಗ್ಗೆ ಮುರ್ತಾಜಾನಲ್ಲಿ ಅಳಿದುಳಿದಿದ್ದ ಪ್ರೀತಿಯೂ ಬತ್ತಿ ಹೋಯಿತು.

ಅಲ್ಲಿಯವರೆಗೆ ಸಾರ್ವಜನಿಕವಾಗಿ ತೋರಿಕೆಗಾದರೂ ಬೆಂಬಲಿಸುತ್ತಿದ್ದ ಮುರ್ತಾಜಾ ಈಗ ಅವಕಾಶ ಸಿಕ್ಕಾಗಲೆಲ್ಲ ಜರ್ದಾರಿಯನ್ನು ಬಾಯಿಗೆ ಬಂದಂತೆ ಜರಿಯಲಾರಂಭಿಸಿದ. ಬೆನಜೀರ್‌ಳ ಭ್ರಷ್ಟ ಸರ್ಕಾರವನ್ನು ಟೀಕಿಸಲಾರಂಭಿಸಿದ.

ಇದಕ್ಕೆ ಪ್ರತ್ಯುತ್ತರವಾಗಿ ಸಿಂಧ್ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಅಬ್ದುಲ್ಲಾ ಶಾ ಎಂಬ ತನ್ನ ಭಂಟನನ್ನು ಜರ್ದಾರಿ ಮುರ್ತಾಜಾನ ವಿರುದ್ಧ ಛೂಬಿಟ್ಟ. ಆತ ಮುರ್ತಾಜಾನ ಬೆಂಬಲಿಗರನ್ನು ಇನ್ನಿಲ್ಲದಂತೆ ಕಾಡಲಾರಂಭಿಸಿದ.

ಇದೆಲ್ಲ ತೀರಾ ಹೆಚ್ಚಾದಾಗ ಒಂದು ದಿನ ಜರ್ದಾರಿಗೆ ಪಾಠ ಕಲಿಸಲು ಮುರ್ತಾಜಾ ನಿರ್ಧರಿಸಿದ. "ನಾವಿಬ್ಬರೇ ಯಾರ ಉಪಸ್ಥಿತಿಯೂ ಇಲ್ಲದೆ ಎಲ್ಲವನ್ನ ಚರ್ಚಿಸಿ, ನಮ್ಮನಮ್ಮಲ್ಲೇ ಬಗೆಹರಿಸಿಕೊಳ್ಳೋಣ. ಮನೆಗೆ ಬಾ" ಎಂದು ಜರ್ದಾರಿಯನ್ನು ಆಹ್ವಾನಿಸಿದ. ಜರ್ದಾರಿ ಬಂದ. ಅವರಿಬ್ಬರೂ ಗಾರ್ಡನ್‌ನಲ್ಲಿ ಮಾತನಾಡುತ್ತಿದ್ದಾಗ ಮುರ್ತಾಜಾನ ಸಹಚರರು ಜರ್ದಾರಿ ಮೇಲೆ ಮುಗಿಬಿದ್ದು ಆತನನ್ನು ಗಟ್ಟಿಯಾಗಿ ಹಿಡಿದರು. ಮುರ್ತಾಜಾ ಒಂದು ಹರಿತವಾದ ಕ್ಷೌರಕತ್ತಿಯನ್ನು ಹಿಡಿದು ಜರ್ದಾರಿಯ ಅರ್ಧ ಮೀಸೆಯನ್ನು ಬೋಳಿಸಿದ. ಅವನ ಸಹಚರರೆಲ್ಲ ಕೇಕೆ ಹಾಕಿ ನಗುತ್ತಿದ್ದಾಗ ಜರ್ದಾರಿಗೆ "ತೊಲಗು ಇಲ್ಲಿಂದ" ಎಂದ ಮುರ್ತಾಜಾ.

ಅವಮಾನದಿಂದ ಕೊತಕೊತ ಕುದಿಯುತ್ತಿದ್ದ ಜರ್ದಾರಿ ಮನೆಗೆ ಹಿಂದಿರುಗಿ ಬೇರೆ ದಾರಿ ಇಲ್ಲದೆ ತನ್ನ ಮೀಸೆಯನ್ನು ಸಂಪೂರ್ಣವಾಗಿ ಬೋಳಿಸಿದ. ಆದರೆ ಮುರ್ತಾಜಾ ತನ್ನ ಸಾಧನೆ ಬಗ್ಗೆ ಎಲ್ಲೆಡೆ ಹೇಳಿಕೊಂಡ. ಇದ್ದಕ್ಕಿದ್ದಂತೆ ಜರ್ದಾರಿ ಮೀಸೆ ಬೋಳಿಸಿದ್ದರ ಕಾರಣದ ಬಗ್ಗೆ ಪತ್ರಕರ್ತರು ಪ್ರಶ್ನಿಸಿದಾಗ "ಯಾಕೂ ಇಲ್ಲ, ಗುಪ್ತದಳದವರು ನನಗೆ ಜೀವ ಬೆದರಿಕೆ ಇದೆಯೆಂದೂ, ನನ್ನ ಮೀಸೆಯಿಂದಲೇ ನನ್ನನ್ನು ತಕ್ಷಣ ಗುರುತು ಹಿಡಿಯುತ್ತಾರೆಂದೂ ಎಚ್ಚರಿಸಿದರು. ಅದಕ್ಕೇ ಬೋಳಿಸಿದೆ" ಎಂದು ಉತ್ತರಿಸಿದ್ದ ಜರ್ದಾರಿ. ಆದರೆ ಆತ ಮತ್ತೆ ಅದನ್ನು ಬೆಳೆಸಿಕೊಂಡಿದ್ದನ್ನು ನೋಡಿ ಪತ್ರಕರ್ತರು ಮುಸಿಮುಸಿ ನಕ್ಕಿದ್ದರು.

ಇದಾದ ಕೆಲವೇ ದಿನಗಳಲ್ಲಿ ಮುರ್ತಾಜಾ ಮೇಲೆ ತನ್ನ ಸೇಡನ್ನು ಜರ್ದಾರಿ ತೀರಿಸಿಕೊಂಡ. ಅದು 1996 ರ ಸೆಪ್ಟೆಂಬರ್ ತಿಂಗಳ ಮುಸ್ಸಂಜೆಯ ಹೊತ್ತು. ಮುರ್ತಾಜಾ ಮತ್ತಾತನ ಬೆಂಬಲಿಗರು ಒಂದು ರಾಜಕೀಯ ಸಮಾವೇಶವನ್ನು ಮುಗಿಸಿಕೊಂಡು ಕರಾಚಿಯಲ್ಲಿದ್ದ ನಂ. 70 ಕ್ಲಿಫ್ಟನ್ ಎಂಬ ಆತನ ಮನೆಗೆ ಹಿಂದಿರುಗುತ್ತಿದ್ದರು. ಆದರೆ ಮುರ್ತಾಜಾನ ಮನೆ ಮುಂದೆಯೇ ಸುಮಾರು 70 ಬಂದೂಕುಧಾರಿ ಪೊಲೀಸರು ಅವರ ಕಾರ್‌ಅನ್ನು ಸುತ್ತುವರಿದರು. ಆಗಲೇ ಕತ್ತಲು ಆವರಿಸುತ್ತಿದ್ದರೂ ರಸ್ತೆಯ ದೀಪಗಳನ್ನು ಆರಿಸಲಾಗಿತ್ತು. ಪರಿಸ್ಥಿತಿಯ ಗಂಭೀರತೆ ಮುರ್ತಾಜಾನಿಗೆ ಅರ್ಥವಾಯಿತು. ಆತ ಕಾರಿನಿಂದಿಳಿದು ಶರಣಾಗುತ್ತಿರುವವನಂತೆ ತನ್ನ ಕೈಗಳನ್ನು ಮೇಲೆ ಎತ್ತಿದ ಮತ್ತು ತನ್ನ ಬಾಡಿಗಾರ್ಡ್‌ಗಳಿಗೆ ಬಂದೂಕುಗಳನ್ನು ಹಾರಿಸದಂತೆ ಆದೇಶ ನೀಡಿದ.

ಆದರೂ ಆತನ ಮೇಲೆ ಮತ್ತು ಆತನೊಂದಿಗಿದ್ದವರ ಮೇಲೆ ಪೊಲೀಸರು ಫೈರ್ ಮಾಡಲು ಶುರು ಮಾಡಿದರು. ಕೆಲವೇ ಕೆಲವು ನಿಮಿಷಗಳಲ್ಲಿ ಕಾರ್ಯಾಚರಣೆ ಮುಗಿದು ಮುರ್ತಾಜಾ ನೆಲಕ್ಕುರುಳಿದ. ಮನೆಯೊಳಗಿದ್ದ ಆತನ ಹೆಂಡತಿ ಘಿನ್ವಾ ಮತ್ತು 14 ವರ್ಷದ ಪುತ್ರಿ ಫಾತಿಮಾಗೆ ಹೊರಗಿನಿಂದ ಬಂದೂಕುಗಳ ಶಬ್ದ ಕೇಳಿಸಿ ಏನೋ ನಡೆಯುತ್ತಿದೆ ಎಂದು ಗೊತ್ತಾಯಿತು. ಆದರೆ ಅವರು ಹೊರಬಾರದಂತೆ ಮನೆಯನ್ನೇ ಬಂದ್ ಮಾಡಲಾಗಿತ್ತು. ಬೇರೆಯವರಿಂದ ತನ್ನ ಅಪ್ಪನ ಮೇಲೆ ಆದ ದಾಳಿ ಸುದ್ದಿಯನ್ನು ಅರಿತ ಫಾತಿಮಾ

(15ನೇ ಪುಟಕ್ಕೆ)

ಕುರುಬರನ್ನ ನಾನು ತುಂಬಾ ಪ್ರೀತಿಸ್ತಿನಿ ಗೊತ್ತಾ!

ರಥವೇರುವ ಶಕ್ತಿಯಿಲ್ಲದಿದ್ದರೂ ವೃದ್ಧಾಪ್ಯದ ಸಕಲ ಸಾಮಗ್ರಿಯೊಡನೆ ರಥಾರೂಢನಾಗಿ ಯುದ್ಧ ಭೂಮಿಯಲ್ಲಿ ಕಾಣಿಸಿಕೊಂಡ ಭೀಷ್ಮನಂತೆ ಕಂಗೊಳಿಸತೊಡಗಿರುವ ನಮ್ಮ ಮಾಜಿ ಮಂಡಲ್ ಪ್ರಧಾನ್, ಅಲ್ಲಲ್ಲ ಮಾಜಿ ಪ್ರಧಾನಿಗಳನ್ನ ಈ ಸಂದರ್ಭದಲ್ಲಿ ಮಾತನಾಡಿಸಿ ಒಂದಿಷ್ಟು ಬೇಸರ ನೀಗಿಕೊಳ್ಳಬೇಕೆನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಿದರೆ ದತ್ತನ ಬದಲು ಅವರೇ ಸಿಕ್ಕರು!

"ಹಲೋ ಸಾರ್, ನಾನು ಯಾಹು."

"ಏನು ಗುರುವೇ, ಈಚೆಗೆ ಪತ್ತೆನೆ ಇಲ್ಲಾ?"

"ನೀವೆ ಬಿಜಿಯಾಗಿದ್ರಿ, ಸಾರ್, ಈಗ ಪುನಃ ಬಿಜಿಯಾಗಿದ್ದಿರಿ."

"ನಾನು ಯಾವತ್ತೂ ಪುರುಸೊತ್ತಾಗಿರಲ್ಲ, ಪುರುಸೊತ್ತೇನಿದ್ರು ಈ ಮಣ್ಣಿಗೆ ಮಲಗಿದಾಗ್ಲೆ."

"ಯಾವ ಪುರುಷಾರ್ಥಕ್ಕೆ ಅಂತಹ ಶ್ರಮ ಸಾರ್?"

"ತುಂಬ ವೈರಿಗಳು ಸೃಷ್ಟಿಯಾಗಿರುವಾಗ ಪುರುಸೊತ್ತಾಗಿರೋಕೆ ಆಗಲ್ಲ, ಸದಾ ಕಾರ್ಯಪ್ರವೃತ್ತನಾಗಿರಬೇಕಾಗುತ್ತೆ."

"ವೈರಿಗಳು ತಮಗೆ ತಾವೇ ಸೃಷ್ಟಿಯಾದ್ರಾ ಅಥವಾ ನೀವೇ ಸೃಷ್ಟಿ ಮಾಡಿದ್ರಾ ಸಾರ್?"

"ನಾನು ಎಂದೂ ವೈರಿಗಳನ್ನ ಸೃಷ್ಟಿ ಮಾಡಿದೋನೆ ಅಲ್ಲ, ನನ್ನ ಪಾಡಿಗೆ ನನಗೆ ಸರಿಕಂಡ ರಾಜಕಾರಣ ಮಾಡ್ತ ಹೋಗ್ತೀನಿ. ನನ್ನ ರಾಜಕಾರಣದ ಶೈಲಿ ಕಂಡರಾಗದವರು ವೈರಿಗಳಾದ್ರೆ ಅದಕ್ಕೆ ನಾನು ಜವಾಬ್ದಾರನಲ್ಲ."

"ಬಚ್ಚೇಗೌಡ ಬಿಜೆಪಿಗೋದರಂತೆ ಸಾರ್?"



"ರಾಜಕಾರಣದಲ್ಲಿರೊ ಇಂತ ಬಚ್ಚಾಗಳಿಗೆಲ್ಲಾ ನಾನು ಕೇರ್ ಮಾಡೋದಿಲ್ಲ. ಅಂತ ರಾಮಕೃಷ್ಣ ಹೆಗಡೆನ ವಿರೋಧಿಸಿಕೊಂಡೇ ರಾಜಕಾರಣ ಮಾಡಿದಂತ ವ್ಯಕ್ತಿ ನಾನು! ಹತ್ತೊಂಬತ್ತುನೂರ ಎಂಬತ್ತೊಂದರಲ್ಲಿ, ರಾಮಕೃಷ್ಣ ಹೆಗಡೆ ಎದುರು ಚುನಾವಣೆ ಎದುರಿಸಿ ನನ್ನ ಪಕ್ಷಕ್ಕೆ ಕೇವಲ ಎರಡು ಸ್ಥಾನ ಸಿಕ್ಕಿತ್ತು. ಅದೆ ಈಗ ಅರವತ್ತಕ್ಕೆ ಎರಡು ಸ್ಥಾನ ಕಡಿಮೆ ಅನ್ನುವಂತಹ ಸ್ಥಿತಿಗೆ ಬಂದು ನಿಂತಿದ್ದೀವಿ. ಆದ್ದರಿಂದ ಈ ದೇವೇಗೌಡನಿಗೆ ಯಾರೂ ಅನಿವಾರ್ಯ ಅಲ್ಲ."

"ಮಕ್ಕಳೇ ಅನಿವಾರ್ಯ ಅನ್ನಕೋಬಹುದ?"

"ಆ ವಿಷಯ ಮಾತನಾಡೋಕೆ ಹೋಗಲ್ಲ ನಾನು. ಎಲ್ಲಾ ಆಸ್ತಿವಂತರೂ ತಮ್ಮ ಆಸ್ತಿಯನ್ನು ತಮ್ಮ ಮಕ್ಕಳಿಗೆ ಬಿಟ್ಟುಹೋಗ್ತಾರೆ. ಈ ಪ್ರವೃತ್ತಿ ರಾಜಕಾರಣದಲ್ಲೂ ಕಾಣ್ತಾಯಿದೆ. ಅದಕ್ಕೆ ನಾವೂ ಹೊರತಲ್ಲ ಎಂಬತಕ್ಕಂತಹ ಸತ್ಯವನ್ನು ನನ್ನ ಪಕ್ಷದ ಜನ ತಿಳಿಕೊಬೇಕಾಗಿತ್ತು."

"ಆದ್ರು ಜನತಾದಳ ನಿಮ್ಮ ಪಿತ್ರಾರ್ಜಿತ ಆಸ್ತಿಯಲ್ಲ ಸಾರ್. ಸಿಂದ್ಯಾ, ಸಿದ್ರಾಮಯ್ಯ, ಪ್ರಕಾಶ್, ವೈದ್ಯನಾಥ್ ಪಾಟೀಲ್ರು, ಕೃಷ್ಣ ಅವರೆಲ್ಲಾ ಸೇರಿ ಕಟ್ಟಿದ್ದು."

ಘಾತ್ರೀರಿ
ಯಾಹೂ

"ಏಂಸ್ಪರ್ ಇವ್ರುರೆ, ಜನತಾದಳ ಹತ್ತೊಂಬತ್ತುನೂರ ಎಂಬತ್ತೊಂಬತ್ತರಲ್ಲಿ ಸಂಪೂರ್ಣ ನೆಲಕಚ್ಚಿದಾಗ ಮೈಸೂರು ಕಡೆ ನಾಯಕರು, ಕನಕಪುರ ಕಡೆ ನಾಯಕರು, ಹಡಗಲಿ ಲೀಡ್ರುಗಳೆಲ್ಲಾ ಹೆಗಡೆ ಜೊತೆಲಿ ಇದ್ರು. ಏಕಾಂಗಿಯಾಗಿದ್ದು ಎಲ್ಲಾ ನೋವು, ಅವಮಾನಗಳನ್ನು ಸಹಿಸಿಕೊಂಡು ದಳ ಅಂತ ಉಳಿಸಿಕೊಂಡ ಬಂದ ನನಗೆ ಅದರಲ್ಲಿ ಸಿಂಹ ಪಾಲಿದೆ ಅನ್ನದನ್ನ ನೀವು ತಿಳಿಕೊಂಡ್ರೆ ಈ ತರಹ ಮಾತನಾಡ್ತ ಇರಲಿಲ್ಲ."

"ಅಲ್ಲ ಸಾರ್, ರಾಜಕಾರಣದಲ್ಲೇ ಇರಬಹುದಾದ ಒಂದು ನೀತಿ, ನಡವಳಿಕೆ ಮತ್ತು ಸೀನಿಯಾರಿಟಿ ಪ್ರಕಾರ ಪ್ರಕಾಶ್, ಸಿದ್ರಾಮಯ್ಯ ಇವರೆಲ್ಲಾ ಮುಖ್ಯಮಂತ್ರಿಗಳಾದ ಮೇಲೆ ನೀವು ಕುಮಾರಸ್ವಾಮಿನ ಮಾಡಬಹುದಿತ್ತು?"

"ಕುಮಾರಸ್ವಾಮಿನ ನಾನೆಲ್ಲಿ ಮುಖ್ಯಮಂತ್ರಿ ಮಾಡಿದೆ? ನನ್ನ ಕೈ ಮೀರಿ ಹೋದ ಪ್ರಸಂಗ ಅದು. ಆದಕ್ಕೆ ಸಂಪೂರ್ಣ ಜವಾಬ್ದಾರಿಯನ್ನು ನನ್ನ ಕೈಗೆ ತೆಗೆದುಕೊಂಡು ಪುನಃ ನಿಮ್ಮ ಸಹಕಾರದಿಂದ ಇನ್ನಾರೋ ಮುಖ್ಯಮಂತ್ರಿ ಯಾಗೋದನ್ನ ತಡದೆ ನಾನು."

"ಆದೊಂದು ವಿಷಯಕ್ಕೆ ನಿಮ್ಮನ್ನ ಅಭಿನಂದಿಸಬೇಕು ಸಾರ್. ಆದ್ರೂ ನಿಮ್ಮ ಕುಟುಂಬದ ಲೋಭತನದಿಂದ ಬಿಜೆಪಿಗಳು ಆಸ್ತಿ ಮಾಡಿಕೊಂಡ್ರು ಸಾರ್. ಅಶೋಕ, ಶೆಟ್ಟರ್, ಕಟ್ಟಾ, ಈಶ್ವರಪ್ಪ, ಎಡಿಯೂರಪ್ಪ ಇವರ ಆಸ್ತಿ ಬೆಳೆದದ್ದು ನೋಡಿದ್ರೆ ನಿಮಗೇ ಆಶ್ಚರ್ಯವಾಗುತ್ತೆ ಸಾರ್. ನೀವು ಗಳಿಸಿದಷ್ಟು ವರ್ಷ ರಾಜಕಾರಣ ಮಾಡಿದ್ರೂ ಇವರಷ್ಟು ಆಸ್ತಿ ಮಾಡ್ಕಾಗಲಿಲ್ಲ."

"ನೋಡಿ, ರಾಜಕಾರಣದಲ್ಲಿ ಆಸ್ತಿ ಮಾಡೋದು ದೊಡ್ಡಸುದ್ದಿಯಾಗಿ ಉಳಿದಿಲ್ಲ, ಆದ್ರೆ ಅದಕ್ಕೂ ಒಂದು ಮಿತಿ ಇದೆ. ಈ ಬಿಜೆಪಿಗಳು ಮಾಡಿಕೊಂಡ ಆಸ್ತಿ ವಿವರಗಳನ್ನು ನನ್ನ ಪಾರ್ಟಿ ಜಿಲ್ಲಾ ಅಧ್ಯಕ್ಷರ ಮುಖಾಂತರ ತರಿಸಿಕೊಂಡಿದ್ದೀನಿ. ಅವ್ರುಏನಾದ್ರೂ ನನ್ನ ಮಕ್ಕಳ ವಿರುದ್ಧ ಬಾಯಿಬಿಟ್ರೆ ನಾನು ಬಾಯಿಬಿಡಬೇಕಾಗುತ್ತೆ."

"ಓಹೊಹೊ, ಅದ್ರೆ ಏನೊ ಸಾರ್, ಏಡೂರಪ್ಪ ಈಚೆಗೆ ನಿಮ್ಮ ಮಕ್ಕಳ ಆಸ್ತಿ ವಿಷಯದಲ್ಲಿ ಬಾಯಿ ಬಿಡ್ತಾಯಿಲ್ಲ?"

"ಎಡೂರಪ್ಪನೆ ಅಲ್ಲ ಯಾರೂ ಬಾಯಿ ಬಿಡದಂತಹ ಪರಿಸ್ಥಿತಿ ನಿರ್ಮಾಣ ಆಗಿದೆ."

"ಮುಂದಿನ ಚುನಾವಣೆಲಿ ಕುರುಬರಿಗೆ ಒಂದು ಟಿಕೆಟ್ ಜಾಸ್ತಿ ಕೊಡ್ತಿರಂತಲ್ಲಾ ಸಾರ್, ಕಾರಣ ಏನು?"

"ನೋಡಿ, ಸುಮ್ಮನೆ ಹೇಳಬಾರ್ದು. ನಾನು ತುಂಬಾ ಪ್ರೀತಿಸುವಂತಹ ಜನಾಂಗ ಕುರುಬರು. ನಾನು ಕುರುಬರನ್ನ ಪ್ರೀತಿ ಮಾಡೋದು ನೋಡಿ ನನ್ನ ಜನಾಂಗದವರೇ ಆಡಿಕೊಳ್ತಾಯಿದ್ರು. ಆದ್ರು ನಾನು ಆದನ್ನೆಲ್ಲಾ ತಲೆಗಚ್ಚಿಕೊಳ್ಳದೆ ಮೈಸೂರು ಕಡೆಯ ಒಬ್ಬ ವ್ಯಕ್ತಿಯನ್ನು ನನ್ನ ತಮ್ಮನ ರೀತಿ ಬೆಳೆಸಿದೆ. ಆದ್ರು ಆತ ನನಗೇ ತಿರುಗಿಬಿದ್ದು ನನ್ನನ್ನೇ ಬೈಕೊಂಡು ಭಾಷಣ ಮಾಡ್ತನೆ."

"ತುಂಬಾ ಅನ್ಯಾಯ ಸಾರ್. ನೀವು ಆತನನ್ನು ತಮ್ಮ ಅಂತ ತಿಳಿಕಂಡ ಮೇಲೆ ಆತನೂ ನಿಮ್ಮನ್ನು ಅಣ್ಣ ಅಂತ ತಿಳಕೊಬೇಕಾಗಿತ್ತು. ಆ ಮುಖಾಂತರ ನಿಮ್ಮ ಮಕ್ಕಳನ್ನ ಅಣ್ಣನ ಮಕ್ಕಳು ಅಂತ ತಿಳಕೊಂಡು ಅವರ ಸೇವೆ ಮಾಡಬೇಕಾಗಿತ್ತು ಸಾರ್. ನಿಮ್ಮ ತಮ್ಮನ ಮಗ ನಿಮ್ಮ ಹೆಂಡತಿ ಮೇಲೆ ಆಸಿಡ್ ಎರಚಿ ಅನಾಹುತಮಾಡಿದನಲ್ಲಾ, ಆ ಹುಡುಗನಿಗೂ ಈ ಚಾಮುಂಡಿ ಬೆಟ್ಟದ ಕಡೆ ಲೀಡ್ರಿಗೂ ಏನೂ ವ್ಯತ್ಯಾಸ ಇಲ್ಲ ಸಾರ್."

"ಆದನ್ನೆಲ್ಲಾ ನಾನು ಬಾಯಿಬಿಟ್ಟು ಎಲ್ಲೂ ಹೇಳಕ್ಕೋಗಲ್ಲ, ನನ್ನನ್ನ ಕುರುಬರ ವಿರೋಧಿ ಅನ್ನತಕ್ಕಂತಹ ಹೊಸ ದೂರನ್ನ ಹರಡತಾಯಿದಾರೆ. ಅದಕ್ಕೆ ಆ ಜನಾಂಗಕ್ಕೆ ಒಂದು ಟಿಕೆಟ್ ಜಾಸ್ತಿ ಕೊಡ್ತಾಯಿದೀನಿ."

"ಕೇವಣಿ ಕಳಕಳೊ ಜನಕ್ಕೆ ಎಷ್ಟು ಟಿಕೆಟ್ ಕೊಟ್ರು ತಾನೆ ಏನು ಸಾರ್? ಹಾಗೆ ನೋಡಿದ್ರೆ ನೀವು ಮೊದಲಿಂದ ಒಕ್ಕಲಿಗರ ವಿರೋಧಿಗಳು. ಇವತ್ತು ಒಬ್ಬನೇ ಒಬ್ಬ ಒಕ್ಕಲಿಗ ಲೀಡ್ರಿಲ್ಲದಂಗೆ ಮುಗಿಸಿದ್ದಿರಿ. ಆದ್ರೆ ಬಚ್ಚೇಗೌಡ ಹೆದ್ರಿಕೊಂಡು ಬಿಜೆಪಿಗೋಡಿದನಂತೆ."

"ಪ್ರಜಾತಂತ್ರ ವ್ಯವಸ್ಥೆಲಿ ಯಾರನ್ನ ಯಾರೂ ಮುಗಸೊಕ್ಕಾಗಲ್ಲ, ಜನತೆ ತಿರಸ್ಕರಿಸಿದಾಗ ಮಾತ್ರ ಮುಗದೋಗ್ತರೆ."

"ಎಂ.ಪಿ.ಪ್ರಕಾಶ್ ನಿಮ್ಮಿಂದ ದೂರಹೋದರಲ್ಲ ಸಾರ್?"

"ಆದು ನನಗೆ ಮೊದಲೇ ಗೊತ್ತಿತ್ತು. ಅವರು ಹೋದದ್ದು ತಡ ಆಯ್ತು ಅಷ್ಟೇ. ಆದ್ರು ನಾನೇನು ಹೆದರಿಲ್ಲ. ಈಗಾಗ್ಲೆ ಅವರ ಕ್ಷೇತ್ರದಲ್ಲಿ ಆವರಿಗಾಗದ ಜನಗಳನ್ನ ಗುರುತಿಸಿದ್ದೀವಿ, ಸಪ್ರೋರ್ಟ್ ಮಾಡ್ತಾಯಿದ್ದಿವಿ."

"ಅಂತೂ ನಿಮ್ಮ ವಿರೋಧಿಗಳಿಗೆ ವಿರೋಧಿಗಳನ್ನ ಸೃಷ್ಟಿ ಮಾಡಿ ಬಿಡ್ತಾಯಿದ್ದಿರಿ."

"ಆದೆಲ್ಲಾ ರಾಜಕಾರಣದಲ್ಲಿ ಅನಿವಾರ್ಯ. ಹೊಸ ವಿಷಯ ಅಲ್ಲ."

"ಇನ್ನೊಂದು ಹೊಸ ವಿಷಯ ಕೇಳಿದೆ ಸಾರ್!"

"ಯಾವ ವಿಷಯ?"

"ನಿಮ್ಮ ಕುಟುಂಬದಲ್ಲಿ ಯಾರಿಗಾದ್ರೂ ಗಂಡು ಮಗುವಾಗಿದೆಯಾ?"

"ನಮ್ಮ ಕುಟುಂಬ ಆಲದ ಮರ ಇದ್ದಂಗೆ. ಆ ಮರದ ಯಾವುದೋ ಕೊಂಬೆಲಿ ಹೊಸ ಚಿಗುರೆಲೆ ಸೃಷ್ಟಿಯಾಗಬಹುದು. ಅದನ್ನೆಲ್ಲಾ ಗಮನಿಸೋದಕ್ಕೆ ನಾನು ಜನನ ಮರಣದ ನೋಂದಣಿ ಅಧಿಕಾರಿಯಲ್ಲ."

"ಘಾತ್ರೀರಿ!!!"



ತಲೆ ತಿರುಗಿದ ಭಟ್ಟ ಚಿಟ್ಟಿ

ಯಶಸ್ಸಿಗೆ ನೂರಾರು ಗಂಡಂದಿರು ಆದರೆ ಸೋಲಿಗೆ ಒಬ್ಬ ಮಿಂಡನೂ ಇಲ್ಲ ಎಂಬ ಅರ್ಥದ ಇಂಗ್ಲಿಷ್ ಗಾದೆಯೊಂದಿದೆ. 'ಮುಂಗಾರು ಮಳೆ'ಯ ಯಶಸ್ಸಿಗೆ ಈ ಮಾತು ಅನ್ವಯಿಸದಿದ್ದರೂ ಅದಕ್ಕೆ ಹಲವಾರು ಜನರ ಕೊಡುಗೆ ಇತ್ತೆಂಬುದು ಮಾತ್ರ ನಿಜ.

'ಅನಿಸುತಿದೆ ಯಾಕೋ ಇಂದು' ಎಂಬ ಹಾಡನ್ನು ಕವಿ ಜಯಂತ್ ಕಾಯ್ಕಿಣಿ ಬರೆಯದಿದ್ದರೆ, ಅದಕ್ಕೆ ಮನೋಮೂರ್ತಿ ಅದ್ಭುತವಾದ ಸಂಗೀತ ನೀಡಿರದಿದ್ದರೆ, ಇಡೀ ಚಿತ್ರಕ್ಕೆ ಕೃಷ್ಣ ಉಲ್ಲಾಸಭರಿತ ಛಾಯಾಗ್ರಹಣ ಮಾಡಿರದಿದ್ದರೆ, ಪ್ರೀತಮ್ ಗುಬ್ಬಿ ನವಿರಾದ ಕಥೆಯನ್ನು ಹೆಣೆಯದಿದ್ದರೆ, ಈ. ಕೃಷ್ಣಪ್ಪ ಧಾರಾಳವಾಗಿ ಹಣವನ್ನು ಹರಿಸದಿದ್ದರೆ ಯೋಗರಾಜ್ ಭಟ್ ಅದೆಂತಹ ಸರ್ಕಸ್ ಮಾಡಿದ್ದರೂ 'ಮಳೆ' ಗೆಲ್ಲುತ್ತಿರಲಿಲ್ಲ ಎಂಬುದು ವಾಸ್ತವ.

ಆ ಚಿತ್ರ ಗೆದ್ದಿದ್ದೇ ಒಂದು ಟೀಂ ವರ್ಕ್‌ನಿಂದಾಗಿ ಮತ್ತು ಇವರೆಲ್ಲರ ಕಲೆಗೆ ಗಣೇಶ್ ಒಂದು ರೂಪ ನೀಡಿದ್ದರಿಂದಾಗಿ. ವಿಪರ್ಯಾಸವೆಂದರೆ ಈ ಕಟುಸತ್ಯವನ್ನು ಭಟ್ ಮತ್ತು ಗಣೇಶ್ ಅರಿಯದೇ ಹೋದರು. ತನ್ನ ಹೆಸರಿದ್ದರೆ ಸಾಕು ಚಿತ್ರ ಓಡುತ್ತೆ, ತನ್ನ ಮುಖವಿದ್ದರೆ ಸಾಕು ಸಿನಿಮಾ ಸೆಂಚುರಿ ಬಾರಿಸುತ್ತೆ ಎಂಬ ಭ್ರಮೆಗೆ ಬಿದ್ದ ಭಟ್-ಗಣೇಶ್ ಇತರರಿಲ್ಲದೆ 'ಗಾಳಿಪಟ' ಹಾಕಿಸಿ ಅದು ಯಶಸ್ವಿಯಾದಾಗ ಇಡೀ ಕ್ರೆಡಿಟ್ ತಮಗೆ ಬರುತ್ತದೆಂದು ಕಲ್ಪಿಸಿಕೊಂಡರು. ಆ ನಿಟ್ಟಿನಲ್ಲಿಯೇ ಮನೋಮೂರ್ತಿ, ಕೃಷ್ಣ, ಪ್ರೀತಮ್ ಗುಬ್ಬಿ ಮತ್ತು ಈ. ಕೃಷ್ಣಪ್ಪನನ್ನು ಹೊರಗಿಟ್ಟರು. ಅವರ ಜಾಗಗಳಿಗೆ ಬೇರೆಯವರನ್ನು ಕರೆತಂದರು.

ಆದರೆ ಬಂದವರು ಎಷ್ಟೇ ಸಾಲುಗಳನ್ನು ಗೀಚಿದರೂ ಯಾರಿಗೂ ಏನೂ 'ಅನಿಸಲಿಲ್ಲ'. ಹರಿಕೃಷ್ಣ ಅದೆಷ್ಟೇ ವಾದ್ಯಗಳನ್ನು ಬಡಿದರೂ ಕೇಳುಗರಲ್ಲಿ ಒಂದು ನಾದಿಯನ್ನೂ ಮೀಟಿಸಲಾಗಲಿಲ್ಲ. ರತ್ನವೇಲು ಅದೆಷ್ಟೇ ಫ್ರೇಮ್‌ಗಳಲ್ಲಿ ಜಿಮ್ಮಿಜಿಪ್‌ಗಳನ್ನು ಬಳಸಿದರೂ ಕೃಷ್ಣ ತೋರಿಸಿದ್ದ ಸೂಕ್ಷ್ಮತೆಯನ್ನು ತೋರಿಸಲಾಗಲಿಲ್ಲ. ಪ್ರೀತಮ್ ಗುಬ್ಬಿ ಇಲ್ಲದೆ ಯೋಗರಾಜ್ ಭಟರಿಗೆ ಒಂದು ಸರಳಕತೆಯನ್ನೂ ಹೆಣೆಯಲಾಗಲಿಲ್ಲ. ಈ. ಕೃಷ್ಣಪ್ಪರಿಗಿಂತಲೂ ಸೂರ್ಯಪ್ರಕಾಶ್ ಎಂಬ ತೆಲುಗು ನಿರ್ಮಾಪಕ ಅದೆಷ್ಟೇ ಹಣ ಸುರಿದರೂ 'ಗಾಳಿಪಟ', 'ಮುಂಗಾರು ಮಳೆ'ಯಾಗಲಿಲ್ಲ.

'ಅಹಂ'ಗೆ ಬಿದ್ದ ನಿರ್ದೇಶಕನೊಬ್ಬ ಮತ್ತು ತಾನು ಮುಟ್ಟಿದ್ದೆಲ್ಲ ಚಿನ್ನವಾಗುತ್ತದೆ ಎಂಬ ಭ್ರಮೆಗೆ ಬಿದ್ದ ನಟನೊಬ್ಬ ತಾವಿದ್ದರೆ ಸಾಕು ಚಿತ್ರ ಗೆಲ್ಲುತ್ತೆ ಎಂದು ಭಾವಿಸಿದರೆ ಅವರು ಸೋಲನ್ನು ಕಾಣುತ್ತಾರೆ ಎಂಬುದಕ್ಕೆ 'ಗಾಳಿಪಟ'ಕ್ಕಿಂತ ಉತ್ತಮ ಉದಾಹರಣೆ ಮತ್ತೊಂದಿಲ್ಲ.







ನಾಡಿಮಿಡಿತ ಅಂದ್ರೆ ಇದೇನಾ?

"ಚಿತ್ರವೊಂದು ಸೂಪರ್ ಹಿಟ್ ಆಗಬೇಕಾದರೆ ಅದರಲ್ಲಿ ಏನೇನು ಅಂಶಗಳಿರಬೇಕು ಎಂಬುದು ನನಗೆ ಚೆನ್ನಾಗಿ ಗೊತ್ತಾಗಿದೆ. ಯುವ ಜನರ ನಾಡಿಮಿಡಿತವನ್ನು ಕಂಡುಕೊಂಡಿದ್ದೇನೆ. ಹಾಗಾಗಿ ಒಂದು ಪರಿಪೂರ್ಣ ಸಿನಿಮಾ ಮಾಡೋ ಬಗ್ಗೆ ನನಗೆ ಗೊತ್ತಿದೆ...."

......ಎಂದೆಲ್ಲಾ ಯೋಗರಾಜ್ ಭಟ್ಟರು ವಾಚಾಳಿಯಂತೆ, ಚಿತ್ರ ಬ್ರಹ್ಮನಂತೆ ಹಲವಾರು ಸಂದರ್ಶನಗಳಲ್ಲಿ ಮತ್ತೆಮತ್ತೆ ಹೇಳಿದ್ದರು.

ಆದರೆ ಚಿತ್ರಕ್ಕೊಂದು ಕತೆ ಎಂಬುದೂ ಇರಬೇಕು ಎಂಬ ಸಾಮಾನ್ಯ ಜ್ಞಾನ ಈ ಮೇಧಾವಿಗೆ ಗೊತ್ತಾಗದಿದ್ದದ್ದು ಹೇಗೆ ಎಂಬುದೇ ಕರ್ನಾಟಕದ ಮಟ್ಟಿಗೆ ಇವತ್ತು ಎಂಟನೇ ಅದ್ಭುತವಾಗಿದೆ!

ವಿಚಿತ್ರವೆಂದರೆ ಹಲವಾರು ಹಾಲಿವುಡ್ ಹಿಟ್‌ಗಳನ್ನು ನೀಡಿರುವ ಸ್ಟೀವನ್ ಸ್ಪಿಲ್‌ಬರ್ಗ್ ಆಗಲಿ, ಭಾರತ ಕಂಡ ಅತಿಶ್ರೇಷ್ಠ ನಿರ್ದೇಶಕರಾದ ಸತ್ಯಜಿತ್‌ರೇ ಮತ್ತು ರಿತ್‌ವಿಕ್ ಘಟಕ್ ಆಗಲಿ, ಜಪಾನಿನ ಕುರೋಸೋವಾ ಆಗಲಿ, ಸ್ಪೇನಿನ ಪೆಡ್ರೊ ಆಲ್ಮಡೋವಾರ್ ಆಗಲಿ, ಪೋಲ್ಯಾಂಡಿನ ಕೀಸ್ಲೋವ್ಸ್ಕಿ ಆಗಲಿ, ಅಷ್ಟೇ ಏಕೆ, ಜಗತ್ತಿನ ಯಾವ ನಿರ್ದೇಶಕನಾಗಲಿ, "ಹಿಟ್ ಚಿತ್ರ ನೀಡುವುದರ ಸೂತ್ರ ನನಗೆ ಗೊತ್ತಿದೆ" ಎಂದು ಹೇಳಿದ್ದ ಉದಾಹರಣೆ ಇಲ್ಲ. ಆದರೆ ಭಟ್ ಅಂತಹದ್ದೊಂದು ವಿಶೇಷ ಜ್ಞಾನ ತನಗೆ ಪ್ರಾಪ್ತಿಯಾಗದೆ ಎಂದೇ ಹೇಳಿದ್ದ ಮಹಾ ಬ್ರಹ್ಮ!

ಈಗ ಈ ಮೇಧಾವಿಯಲ್ಲೊಂದು ವಿಜ್ಞಾಪನೆ. ಹಿಟ್ ಚಿತ್ರದಲ್ಲಿ ಏನೇನು ಇರಬೇಕು ಎಂಬುದು ಬದಿಗಿರಲಿ, ಫ್ಲಾಪ್ ಸಿನಿಮಾದಲ್ಲಿ ಏನೇನು ಇರಬಾರದು ಎಂಬುದರ ಬಗ್ಗೆ ಅವರು ಸ್ವಲ್ಪ ಜ್ಞಾನವನ್ನು ಜಗತ್ತಿಗೆ ನೀಡುತ್ತಾರೆಯೇ?

ಈ ಪ್ರಶ್ನೆ ಮುಖ್ಯ ಯಾಕೆಂದರೆ ಎಲ್ಲರೂ ಗೆಲ್ಲದಿದ್ದರೂ, ಯಾರೂ ಸೋಲುವಂತಾಗಬಾರದು ಎಂಬುದು ನಮ್ಮ ಕಾಳಜಿ ಆಗಿರುವುದರಿಂದ. ಭಟ್ಟರಿಂದ ಆತ್ಮ ವಿಮರ್ಶಾತ್ಮಕ ಉತ್ತರದ ನಿರೀಕ್ಷೆಯಲ್ಲಿ....!

ಯೋಗರಾಜ್ ಭಟ್‌ರ 'ಗಾಳಿಪಟ' ಸಕತ್ತಾಗಿ ಹಾರಾಡುತ್ತೆ, ಆದರೆ ಅದಕ್ಕೆ ಕೊಕ್ ಕೊಡಲು ರತ್ನಜಾರವರು 'ಹೊಂಗನಸು' ಎಂಬ ಮಾಂಜಾ ತಯಾರಿಸಿದ್ದಾರೆ. ಈ ಇಬ್ಬರು ನಿರ್ದೇಶಕರ ಹೊಸ ಚಿತ್ರಗಳಲ್ಲಿ ಯಾವುದು ಗೆಲ್ಲುತ್ತೆ? ಯಾವುದು ಹೊಸ ದಾಖಲೆ ಸ್ಥಾಪಿಸುತ್ತೆ? ಯಾರ ಸಿನಿಮಾ ತಮ್ಮ ಹಿಂದಿನ ಕೊಡುಗೆಗಿಂತಲೂ ಉತ್ತಮವಾಗಿರುತ್ತೆ?....

..... ಇಂತಹ ಹಲವು ಪ್ರಶ್ನೆಗಳು ಕಳೆದ ಕೆಲವು ವಾರಗಳಿಂದ ಗಾಂಧಿನಗರವನ್ನು ಕನ್ನಡ ಸಿನಿಮಾ ರಸಿಕರನ್ನು ಕಾಡಿದ್ದವು. ಈಗ ಕಳೆದ 18 ರಂದು ಈ ಎರಡೂ ಸಿನಿಮಾಗಳು ಬಿಡುಗಡೆಗೊಂಡಿದ್ದು ಅವುಗಳ ನಿರ್ದೇಶಕರಿಬ್ಬರೂ ತಮ್ಮ ತಮ್ಮ ಉತ್ತರ ನೀಡಿದ್ದಾರೆ. ಆದರೆ ವಿಮರ್ಶಕರು ಮತ್ತು ಪ್ರೇಕ್ಷಕರು ಮಾತ್ರ ನಿರಾಶೆಗೊಂಡು ಯೋಗರಾಜ್ ಭಟರಿಗೆ ಸೆಕೆಂಡ್ ಕ್ಲಾಸ್ ಪಾಸ್ ಎಂದು, ರತ್ನಜಾರಿಗೆ ಫೇಲ್ ಎಂದೂ ತೀರ್ಪು ನೀಡಿದ್ದಾರೆ.

ನಿಜ, 'ಗಾಳಿಪಟ' ಕೂಡ 'ಮುಂಗಾರು ಮಳೆ'ಯಂತೆಯೇ ಅದ್ಭುತ ಹಿಟ್ ಆಗುತ್ತದೆಂದು ನಿರೀಕ್ಷಿಸುವುದು ಸರಿಯಲ್ಲ, ಯಾಕೆಂದರೆ ದಾಖಲೆ ಸ್ಥಾಪಿಸುವ ಸಿನಿಮಾಗಳು ಬರುವುದು ಅಪರೂಪಕ್ಕೊಮ್ಮೆ. ಆದರೂ 'ಮುಂಗಾರು ಮಳೆ'ಯ ಅರ್ಧದಷ್ಟು ಆಶಯಗಳನ್ನೂ ಭಟ್ಟರ 'ಗಾಳಿಪಟ' ತುಂಬಿಸಿಲ್ಲ ಎಂಬುದೇ ಬೇಸರದ ಸಂಗತಿ.

ಹಾಗೆ ನೋಡಿದರೆ 'ಮುಂಗಾರು ಮಳೆ'ಯಲ್ಲೂ ಅಂತಹ ಅದ್ಭುತವಾದ ಕತೆ ಇರಲಿಲ್ಲ, ಆದರೆ ಮನಸ್ಸಿಗೆ ತಾಕುವ ಭಾವನೆಗಳು, ಕಣ್ಣಿಗೆ ತಂಪು ನೀಡುವ ದೃಶ್ಯಗಳು, ಕಿವಿಗೆ ಚೆನ್ನಾಗಿ ಕೇಳಿಸುವ ಹಾಡು, ಡೈಲಾಗ್‌ಗಳು ಇದ್ದವು. ಇದೆಲ್ಲದರೊಂದಿಗೆ ಮೃದುವಾದ ನಿರೂಪಣೆ ಇತ್ತು.



ಅದೇ ಹೊತ್ತಿಗೆ ಬಂದಿದ್ದ ಸಾಲುಸಾಲು ಲಾಂಗು, ಮಚ್ಚು ಎಂಬ ಬಿಸಿ ಕತೆಗಳಿಂದ ಬೆವರಿಹೋಗಿದ್ದ ಪ್ರೇಕ್ಷಕ 'ಮುಂಗಾರು ಮಳೆ' ಎಂಬ ತಣ್ಣಗೆ ಬೀಸಿದ ಗಾಳಿಗೆ ಮಾರುಹೋದ. ಚಿತ್ರ ಗೆದ್ದಿತು.

ದುರಂತವೆಂದರೆ ಅದರ ಯಶಸ್ಸಿನ ಹ್ಯಾಂಗ್‌ಓವರ್‌ನಿಂದ ಯೋಗರಾಜ್ ಭಟ್ಟರಿಗೆ ಹೊರಬರಲಾಗಿಲ್ಲ. ಮಾತ್ರವಲ್ಲ ಆ ಯಶಸ್ಸು ಅ[...] ತಲೆ ತಿರುಗಿಸಿದಂತಿದೆ. 'ಸೂಪರ್ ಹಿಟ್ ಚಿತ್ರ ನೀಡುವುದು ನನಗೆ ಗೊತ್ತು. ಪ್ರೇಕ್ಷಕರ ನಾಡಿಮಿಡಿತ ನನಗೆ ಗೊತ್ತು" ಎಂದೆಲ್ಲಾ ಬಡಾ[...] ಕೊಚ್ಚಿಕೊಳ್ಳಲಾರಂಭಿಸಿದ್ದ ಭಟ್ 'ಗಾಳಿಪಟ'ದ ಮೂಲಕ ತಾನು ಆಕಾಶಕ್ಕೆ ಹಾರಲಿದ್ದೇನೆ ಎಂಬಂ[...] ವರ್ತಿಸಿದ್ದರು.

ವಾಸ್ತವವಾಗಿ ಅವರು ಅರಿತುಕೊಂಡಿದ್ದ ನಾಡಿಮಿಡಿತ ಏನು ಎಂಬುದನ್ನು 'ಗಾಳಿಪಟ' ಬಹಿರಂಗಪಡಿಸಿದೆ. ಸುಂದರವಾದ ಹಸಿರು ಬೆಟ್ಟ, ಭೋರ್ಗರೆಯುವ ಜಲಪಾತ, 'ಪರಪರ'ನೆ ಹರಿಯುವ ಸಂಭಾಷ[...] ಅದಕ್ಕೆಲ್ಲ ಗಣೇಶ್‌ನ ನಟನೆ ಇದ್ದ[...] ಸಾಕು, ಚಿತ್ರ ಗೆದ್ದೇಗೆಲ್ಲುತ್ತೆ ಎಂದು ಭಟ್ ನಂಬಿದಂತಿದೆ. ಅದಕ್ಕೆ ಅವ[...] 'ಗಾಳಿಪಟ'ದಲ್ಲಿ ಕತೆಯನ್ನೇ ಮರೆ[...] ಬರೀ ಡೈಲಾಗ್ ಅನ್ನು ಆಧರಿಸಿ ಸಿನಿಮಾ ಮಾಡಿದ್ದಾರೆ.

ಆದರೆ ಕತೆಯೇ ಇಲ್ಲದೆ ಬರಿ ಸಂಭಾಷಣೆ ಇದ್ದರೆ ಅದು ಸೂತ್ರವಿಲ್ಲದ ಗಾಳಿಪಟ ಹಾರಿಸಿದಂತಿರುತ್ತದೆ. ಈ ಚಿತ್ರ ಹಾಗೆಯೇ ಇದೆ! ಅದರಲ್ಲೂ ಹಲವಾರು ಕಡೆ ಸಂಭಾಷಣೆಯೂ ಸಭ್ಯತೆಯ ಗಡಿಯನ್ನು ದಾಟಿರುವುದು 'ಗಾಳಿಪಟ'ವನ್ನು ಗೋತಾ ಹೊಡೆಸುತ್ತೆ!

ಸಿನಿಮಾ ಮಾಧ್ಯಮದಲ್ಲಿ ಮೌನ ಕೂಡ ಬಹುಮುಖ್ಯ. 'ಸಂಭಾಷಣೆ, ಸರಳ ಸೂತ್ರವನ್ನು

ಇದ್ಯಾಕಪ್ಪಾ ಒಂದೂಕಾಲುಕೋಟಿ?

"ಕೊಟ್ಟೋನು ಕೋಡಂಗಿ, ಈಸಿಕೊಂಡೋನು ಈರಭದ್ರ' ಎಂಬ ಜನಪದ ಮಾತು ಕನ್ನಡಿಗರಿಗೆ ಚಿರಪರಿಚಿತ. ಇದರ ಪ್ರಸ್ತಾವನೆ ಇಲ್ಲಿ ಯಾಕೆಂದರೆ ಈ ಮಾ[...] 'ಗಾಳಿಪಟ'ಕ್ಕೆ ಕೊಟ್ಟವನಿಗೂ, ಈಸಿಕೊಂಡೊನಿಗೂ ಚೆನ್ನಾಗಿ ಅನ್ವಯಿಸುತ್ತದೆ ಎಂಬ ಕಾರಣಕ್ಕೆ ಮಾತ್ರ!



'ಮುಂಗಾರು ಮಳೆ' ಐವತ್ತು ದಿನಗಳ ಪ್ರದರ್ಶನ ಕಾಣುತ್ತಿದ್ದಂತೆ ಅದರ ಹಿಂದಿ, ತಮಿಳು, ತೆಲುಗು ಮ[...] ಮಲೆಯಾಳಂ ಭಾಷೆಗಳ ರೀಮೇಕ್ ಹಕ್ಕನ್ನು 45 ಲಕ್ಷ ರೂಪಾಯಿಗಳಿಗೆ ಸೂರ್ಯಪ್ರಕಾಶ್ ರಾವ್ ಎಂ[...] ತೆಲುಗು ಬಿಡ್ಡ ಖರೀದಿಸಿದ. ಮಾತ್ರವಲ್ಲ ಭಟ್-ಗಣೇಶ್ ಕಾಂಬಿನೇಷನ್‌ನಲ್ಲಿ ಮುಂದಿನ ಚಿತ್ರವೂ ಗೆಲ್ಲುತ್ತದೆಂ[...] ಲೆಕ್ಕ ಹಾಕಿದ. ಆ ಕಾರಣಕ್ಕೆ ಕತೆ ಇಲ್ಲದ, ಅರ್ಥವೂ ಇಲ್ಲದ 'ಗಾಳಿಪಟ'ಕ್ಕೆ ಕೋಟ್ಯಂತರ ರೂಪಾಯಿಗಳ[...] ಸೂರ್ಯಪ್ರಕಾಶ್ ಸುರಿದನಲ್ಲದೆ, ನಿರ್ದೇಶಕ ಭಟ್ಟರಿಗೂ ಒಂದೂ ಕಾಲು ಕೋಟಿ ಸಂಭಾವನೆ ನೀಡಿದ.

ಸ್ಯಾಂಡಲ್‌ವುಡ್‌ನಲ್ಲಿ ನಿರ್ದೇಶಕನೊಬ್ಬ ಅಷ್ಟೊಂದು ಸಂಭಾವನೆ ಪಡೆದದ್ದು ಅದೇ ಮೊದಲು. ಕಾರಣದಿಂದಾಗಿಯೇ ಅದು ದೊಡ್ಡ ಸುದ್ದಿಯಾಗಿತ್ತು.

ಆದರೆ ಈಗ ನೋಡಿದರೆ ಅಷ್ಟೊಂದು ಹಣ ಕೊಟ್ಟ ಸೂರ್ಯಪ್ರಕಾಶ್ ಕೋಡಂಗಿಯಾಗಿಯೂ, ಆದ[...] ಪಡೆದ ಭಟ್ ಈರಭದ್ರನಾಗಿಯೂ ಕಾಣಿಸುತ್ತಿದ್ದಾರೆ.

ಏನೇ ಆಗಲಿ ನಮ್ಮ ಜನಪದದಲ್ಲಿರುವ ಜೀವನ ಸತ್ಯವನ್ನು ಅಷ್ಟು ಸಲೀಸಾಗಿ ತಳ್ಳಿಹಾಕುವಂತಿ[...] ಅಲ್ಲವೇ?!

"ಸೂಪರ್ ಹಿಟ್ ಚಿತ್ರ ನೀಡುವುದು ನನಗೆ ಗೊತ್ತು. ಪ್ರೇಕ್ಷಕರ ನಾಡಿಮಿಡಿತ ನನಗೆ ಗೊತ್ತು" ಎಂದೆಲ್ಲಾ ಬಡಾಯಿ ಕೊಚ್ಚಿಕೊಳ್ಳಲಾರಂಭಿಸಿದ್ದ ಯೋಗರಾಜ ಭಟ್ 'ಗಾಳಿಪಟ'ದ ಮೂಲಕ ತಾನು ಆಕಾಶಕ್ಕೆ ಹಾರಲಿದ್ದೇನೆ ಎಂಬಂತೆ ವರ್ತಿಸಿದ್ದರು. ವಾಸ್ತವವಾಗಿ ಅವರು ಅರಿತುಕೊಂಡಿದ್ದ ನಾಡಿಮಿಡಿತ ಏನು ಎಂಬುದನ್ನು 'ಗಾಳಿಪಟ' ಬಹಿರಂಗಪಡಿಸಿದೆ.

ಗಾಳಿಪಟ ಗೋತಾ!



ಮರೆತಿರುವ ಭಟ್ ಗಣೇಶನಿಗೆ ಡೈಲಾಗ್ ಮೇಲೆ ಡೈಲಾಗ್ ಕೊಟ್ಟು ಜನರ ಕಿವಿಗೆ ಸತತವಾಗಿ ಕಾದ ಸೀಸವನ್ನು ಸುರಿಯುತ್ತಾರೆ. ಈ ಹಿಂಸೆಯಿಂದ ಕೊನೆಗೆ ಗಣೇಶ್ ಬಗ್ಗೆಯೂ ಬೇಸರ ಮೂಡುತ್ತದೆ.

ಮಾತಿನ ಜೊತೆ ಭಟ್ಟರು ಬಣ್ಣವನ್ನೂ ತುರುಕಿ ಕತೆಯ ಗೈರುಹಾಜರಿಯನ್ನು ಮರೆಸಲು ಯತ್ನಿಸುತ್ತಾರೆ. ಈ ಕ್ರಿಯೆಯಲ್ಲಿ ಛಾಯಾಗ್ರಾಹಕ ರತ್ನವೇಲು ಭಟ್ಟರಿಗೆ ಸಾಥ್ ನೀಡಿದ್ದಾರೆ. ಆದರೆ ಇದೆಲ್ಲವೂ ಪಟವನ್ನೂ ಸುಂದರವಾಗಿಸುತ್ತದೆಯೇ ಹೊರತು ಸೂತ್ರದ ಅಗತ್ಯತೆಯನ್ನು ನೀಗಿಸುವುದಿಲ್ಲ.

"ಗೋಲ್ಡನ್ ಸ್ಟಾರ್ ಗಣೇಶ್ ಇರುವಾಗ ಮತ್ತು ನನ್ನಂತಹ ಶ್ರೇಷ್ಠ ನಿರ್ದೇಶಕನಿರುವಾಗ ಕತೆಯನ್ನು ಯಾರು ಕೇಳುತ್ತಾರೆ" ಎಂಬ ಮನೋಭಾವದಿಂದ ಮೂಡಿರುವ ಈ ಚಿತ್ರವನ್ನು ನೋಡಿ ಜನ "ಗೋತಾ ಹೊಡೀತು ಮಗ" ಎಂದರ ಅಚ್ಚರಿಯಿಲ್ಲ.

ಇನ್ನು ರತ್ನಜಾರ ಬಗ್ಗೆ. ಈ ರತ್ನಜಾಗೂ ಯೋಗರಾಜ್ ಭಟ್ಟರಿಗೂ ಹಲವು ಸಾಮ್ಯತೆಗಳಿವೆ. ಒಂದೇ ಒಂದು ಹಿಟ್ ಚಿತ್ರದಿಂದ ಈತನ ತಲೆಯೂ ಗಿರಗಿರನೆ ತಿರುಗಿತ್ತು. "ನನ್ನೊಳಗಿನ ನಿರ್ದೇಶಕನಿಗಿಂತ ನನ್ನೊಳಗಿರುವ ಕತೆಗಾರನೇ ಬಲಿಷ್ಠಶಾಲಿ. ಇಷ್ಟೊಂದು ಗಟ್ಟಿ ಕಥೆ ಇದುವರೆಗೂ ಎಲ್ಲೂ ಬಂದಿಲ್ಲ" ಎಂದೆಲ್ಲಾ ಸಂದರ್ಶನಗಳಲ್ಲಿ ಹೇಳುತ್ತಿದ್ದ ರತ್ನಜಾ ತಾನೋರ್ವ ಗ್ರೇಟ್ ಡೈರೆಕ್ಟರ್ ಎಂಬಂತೆ ಪೋಸ್ ನೀಡುತ್ತಿದ್ದ.

ಅಂದಹಾಗೆ 'ಹೊಂಗನಸು' ಚಿತ್ರದಲ್ಲಿ ಇವರು ಬರೆದಿರುವ ಸಡಿಲು ಸಡಿಲಾದ ಕತೆ ಆಧರಿಸಿರುವುದು ಗಟ್ಟಿಯಾದ 'ರಾಮಾಯಣ'ವನ್ನು. ಈಗಾಗಲೇ 'ರಾಮಾಯಣ' ಮತ್ತು 'ಮಹಾಭಾರತ'ದಂತಹ ಮಹಾಗ್ರಂಥಗಳಲ್ಲಿನ ಮಾನವ ಸಂಬಂಧಗಳನ್ನಾಧರಿಸಿ ಆಧುನಿಕ ಪಾತ್ರಗಳಿರುವ ಹಲವಾರು ಚಿತ್ರಗಳು ಭಾರತದ ವಿವಿಧ ಭಾಷೆಗಳಲ್ಲಿ ಬಂದುಹೋಗಿವೆ.



ಉದಾಹರಣೆಗೆ 'ಕಲಿಯುಗ್' ಎಂಬ ಚಿತ್ರದಲ್ಲಿ ಶ್ಯಾಂ ಬೆನಗಲ್ ಪಾಂಡವರ ಕತೆಯನ್ನೇ ಸಮಕಾಲೀನ ರೂಪದಲ್ಲಿ ತೋರಿಸಿದ್ದರು.

ಅಂತಹದ್ದೇ ಒಂದು ಪ್ರಯತ್ನವನ್ನು ಮಾಡಲೆತ್ನಿಸಿರುವ ರತ್ನಜಾ ರಾಮಾಯಣದ ಸೀತೆ ಮತ್ತು ಲಕ್ಷ್ಮಣರ ನಡುವಿನ ಸ್ನೇಹ, ಗೌರವ, ಪ್ರೀತಿಯನ್ನು ಆಧರಿಸಿ 'ಹೊಂಗನಸು' ಚಿತ್ರವನ್ನು ನಿರ್ದೇಶಿಸಿದ್ದಾರೆ.

ಆದರೆ ತಾನು ಏನನ್ನು ಹೇಳುತ್ತಿದ್ದೇನೆ ಎಂಬುದೇ ರತ್ನಜಾರಿಗೂ ಸ್ಪಷ್ಟವಾಗಿ ಗೊತ್ತಿಲ್ಲದೆ ಚಿತ್ರವನ್ನು ಚ್ಯೂಯಿಂಗ್‌ಗಮ್ ಎಳೆದಂತೆ ಎಳೆದೆಳೆದು ಸಂಪೂರ್ಣವಾಗಿ ಬೋರ್ ಹೊಡೆಸುತ್ತಾರೆ. ಚಿತ್ರ ಯಾವಾಗ ಮುಗಿಯುತ್ತೋ ಎಂದು ಕಾಯುವಂತೆ ಮಾಡುತ್ತಾರೆ.

ನಟ-ನಟಿಯರಿಗೆ ತಲೆಯ ಮೇಲೆ ಹೊಡೆಯುತ್ತಾ, ತಂತ್ರಜ್ಞರನ್ನು ಬಾಯಿಗೆ ಬಂದಂತೆ ಬೈದ ಮಾತ್ರಕ್ಕೆ ತಾನು ಪುಟ್ಟಣ್ಣ ಕಣಗಾಲ್ ಎಂದು ನಂಬಿರುವ ರತ್ನಜಾ 'ಹೊಂಗನಸ'ನ್ನು ನೀಡುವ ಬದಲಾಗಿ ತಾವೇ ಹೊಂಡಕ್ಕೆ ಬಿದ್ದಿದ್ದಾರೆ.

ಯೋಗರಾಜ್ ಭಟ್ ಮತ್ತು ರತ್ನಜಾರ ಹೊಸ ಚಿತ್ರಗಳನ್ನು ನೋಡಿದರೆ ಈ ಹಿಂದೆ ಇವರಿಬ್ಬರು ನೀಡಿದ್ದ ಹಿಟ್ ಚಿತ್ರಗಳು ಆಕಸ್ಮಿಕ ಎನ್ನಿಸದೇ ಇರದು. ಆದ್ದರಿಂದ ಇವರಿಬ್ಬರೂ ತಮ್ಮ ಬತ್ತಳಿಕೆಯಲ್ಲಿ ನಿಜವಾಗಲೂ ಪ್ರತಿಭೆ, ಸೃಜನಶೀಲತೆ ಇದೆ ಎಂಬುದನ್ನು ಮುಂದಿನ ಅವಕಾಶದಲ್ಲೇ ಸಾಬೀತು ಮಾಡಬೇಕಿದೆ.

ಇಲ್ಲವಾದರೆ ಇವರೂ ಕೂಡ ಕನ್ನಡ ಚಿತ್ರರಂಗದ ಆಯಾರಾಮ್, ಗಯಾರಾಮ್‌ಗಳಾಗುತ್ತಾರೆ...

■ ಶೆಣೈ ಮತ್ತು ಅರುಣ್. ಜೆ

ಬುದ್ಧಿವಂತ ಪುನೀತ್



[illegible]

ಬಿದ್ದ ತ್ರಿಮೂರ್ತಿಗಳು





ಕೆಲ ವಾರಗಳ ಹಿಂದೆ ಪ್ರೀತಿಯ ಬಗ್ಗೆ ಹೊಸ ಫಿಲಾಸಫಿಯನ್ನು ಜನರಿಗೆ ಹೇಳಲೆತ್ನಿಸಿ ಪ್ರೇಮ್ ಎಂಬ ನಿರ್ದೇಶಕ ಇನ್ನಿಲ್ಲದಂತೆ ಮುಗ್ಗರಿಸಿದ. ಇಲ್ಲಿಯವರೆಗೆ ಮೂರು ಯಶಸ್ವಿ ಸಿನಿಮಾಗಳನ್ನು ನೀಡಿರುವ ಪ್ರೇಮ್ ಇಂತಹ ಎಡವಟ್ಟು ಮಾಡಿಕೊಳ್ಳುತ್ತಾರೆಂದು ಯಾರೂ ಭಾವಿಸಿರಲಿಲ್ಲ.

ಈ ವಾರ ಕತೆಯೇ ಇಲ್ಲದ ಕತೆಯನ್ನು ಹೇಳಲೆತ್ನಿಸಿ ಯೋಗರಾಜ್ ಭಟ್ ಎಂಬ ಮತ್ತೋರ್ವ ನಿರ್ದೇಶಕ ಗೋಜಲು ಗೋಜಲು ಮಾಡಿಕೊಂಡಿದ್ದಾರೆ. 'ಮುಂಗಾರು ಮಳೆ'ಯಂತಹ ಚಿತ್ರವನ್ನು ನೀಡಿದ್ದ ಭಟ್ ಆ ಚಿತ್ರಕ್ಕಿಂತ ನಾಲ್ಕು ಪಟ್ಟು ಹೆಚ್ಚು ಹಣವನ್ನು ವೆಚ್ಚ ಮಾಡಿದ್ದರೂ, ನಲವತ್ತು ಪಟ್ಟು ಹೆಚ್ಚು ಪ್ರಚಾರವನ್ನು ಪಡೆದಿದ್ದರೂ 'ಮಳೆ'ಯ ಕಾಲು ಭಾಗದಷ್ಟೂ ಚೆನ್ನಾಗಿರದ ಸಿನಿಮಾ ಮಾಡುತ್ತಾರೆಂದು ಜಡದ ಗಾಂಧಿನಗರಿಯೂ ಲೆಕ್ಕ ಹಾಕಿರಲಿಲ್ಲ.

ಇದೇ ವಾರ ರತ್ನಜಾ ಎಂಬ ಇನ್ನೊಬ್ಬ ನಿರ್ದೇಶಕ ಮಾನವ ಸಂಬಂಧಗಳ ಬಗ್ಗೆ ಅದೇನನ್ನೋ ಹೇಳಲು ಪ್ರಯತ್ನಿಸಿ ಕೊನೆಗೆ ಏನನ್ನೂ ಹೇಳಲಾಗದೆ 'ಹೊಂಗನಸು' ಎಂಬ ದುಃಸ್ವಪ್ನವನ್ನೇ ಜನರಿಗೆ ನೀಡಿದ್ದಾರೆ. ತಮ್ಮ ಮೊದಲ ಚಿತ್ರವಾದ 'ನೆನಪಿರಲಿ'ಯಲ್ಲಿನ ತಾಜಾತನವನ್ನು ಮೆಚ್ಚಿದ್ದ ಪ್ರೇಕ್ಷಕರ ಮೇಲೆ ಅದ್ಯಾಕೆ ರತ್ನಜಾಗೆ ಇಷ್ಟೊಂದು ಕೋಪ ಬಂತು, ಅದ್ಯಾಕೆ ಈ ನಿರ್ದೇಶಕ ಇಂತಹ ಕ್ರೂರಿಯಾದರು ಎಂದು ಜನ ತಲೆ ಕೆರೆದುಕೊಳ್ಳುತ್ತಿದ್ದಾರೆ.

ಕನ್ನಡ ಚಿತ್ರರಂಗದಲ್ಲಿ ಭಾರಿ ಭರವಸೆ ಮೂಡಿಸಿದ್ದ ಈ ಮೂವರು ವರ್ಷದ ಆರಂಭದಲ್ಲೇ ಎಡವಿದ್ದಾರೆ. ಈ ತ್ರಿಮೂರ್ತಿಗಳ ಹಾದಿಯನ್ನೇ ಈ ವರ್ಷ ಬೇರೆ ನಿರ್ದೇಶಕರೂ ಹಿಡಿಯದಿರಲಿ ಎಂದು ಕನ್ನಡ ಚಿತ್ರಪ್ರೇಮಿ ಪ್ರಾರ್ಥಿಸಬೇಕಾಗಿದೆ!


ಕಲಬುರ್ಗಿ ಜಿಲ್ಲೆಯ ಬಹುತೇಕ ತಾಲೂಕುಗಳಿಗೆ ಹೋಲಿಸಿದರೆ ಸುರಪುರ ತಾಲೂಕಿನ ರಾಜಕೀಯವೇ ಒಂಥರ ವಿಚಿತ್ರ. ಹೇಳಿಕೇಳಿ ಸುರಪುರ ಸಂಸ್ಥಾನಿಕರ ಒಡೆತನದಲ್ಲಿ ಇದ್ದ ಪ್ರದೇಶ. ಸಹಜವಾಗಿಯೇ ಇಲ್ಲಿನ ಜನಗಳಲ್ಲಿ ಹೇಗೋ ಹಾಗೆಯೇ ಇಲ್ಲಿನ ರಾಜಕೀಯ ನಾಯಕರಲ್ಲೂ ಒಂದು ರೀತಿ ಠೇಂಕಾರದ ಗತ್ತು-ಗೈರತ್ತುಗಳು. ಇವು ಇಲ್ಲಿಯ ನೆಲದ-ನೀರಿನ, ಮಣ್ಣಿನ ಗುಣವಿರಬಹುದು. ಸಂಖ್ಯೆಯ ದೃಷ್ಟಿಯಿಂದಲೂ ಗಣನೀಯ ಸಂಖ್ಯೆಯಲ್ಲಿರುವ ಬೇಡ (ನಾಯಕ) ಜನಾಂಗ ದವರದೇ ಹೆಚ್ಚಿನ ಪ್ರಾಬಲ್ಯ. ರಾಜವಂಶಜರು ಎಂದು ಹೇಳುವ ಜನಗಳೇ ರಾಜಕೀಯ ಅಖಾಡಕ್ಕೆ ಇಳಿದರೆ ಏನಾಗಬಾರದೋ ಅದೆಲ್ಲ ಇಲ್ಲಿ ಘಟಿಸಿಹೋಗಿದೆ.

ಜಿಲ್ಲಾ ಪಂಚಾಯತಿ ಸದಸ್ಯನಾಗುವ ಮೂಲಕ ರಾಜಕೀಯ ಅಖಾಡಕ್ಕೆ ಇಳಿದ ರಾಜುಗೌಡ ನಾಯಕ ಜನಾಂಗದವನೇ ಆಗಿದ್ದರೂ ಸಭ್ಯ ಮನುಷ್ಯ. ಯಾರಾದರೂ ರಾಜುಗೌಡನ ಹತ್ತಿರ ಹೋಗಿ ಮೈದಡವಿ ಮಾತಾಡ ಬಹುದು. ತಮ್ಮ ಕಷ್ಟಸುಖ ಹಂಚಿಕೊಳ್ಳಬಹುದು. ತಮ್ಮ ಬೇಕು - ಬೇಡಗಳನ್ನು ದುಃಖ- ದುಮ್ಮಾನಗಳನ್ನು ಹಂಚಿಕೊಳ್ಳಬಹುದು.

ಈ ಎಲ್ಲಾ ಪ್ಲಸ್ ಪಾಯಿಂಟ್‌ಗಳಿಂದಾಗಿಯೇ ಎರಡು ಅವಧಿಗೂ ರಾಜುಗೌಡನೇ ಸುರಪುರ ಮತಕ್ಷೇತ್ರದ ಅನಿವಾರ್ಯ ಅಭ್ಯರ್ಥಿ ಎನ್ನುವಂತಾಗಿ ಬಿಟ್ಟಿದೆ. ಈ ಕ್ಷೇತ್ರ ತುಂಬೆಲ್ಲ ವರದಿಗಾರ ತಿರುಗಾಡು


ಸುರಪುರದ ರಣಗಂಭ ಹರಿಯುವವರು ಯಾರು?

ನಿಮಗೆಲ್ಲ ಆಶ್ಚರ್ಯವಾದರೂ ಸತ್ಯಸಂಗತಿಯೊಂದನ್ನು ಹೇಳಲೇಬೇಕಾಗಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆತು 60 ವರ್ಷಗಳೇ ಕಳೆದುಹೋಗಿದ್ದರೂ ಅದರ ಸವಿ ಮಾತ್ರ ಇಲ್ಲಿನ ಸಾಮಾನ್ಯ ಜನಗಳಿಗೆ ದಕ್ಕಲೇ ಇಲ್ಲ. ಆರಂಭದಿಂದಲೂ ನಾಯಕರ ರಾಜಕೀಯದ ವಿರುದ್ಧ ನಿಂತು ಹೈರಾಣಾಗಿ ಹೋದ ಮಂಗ್ಯಾಳ ಶಿವಣ್ಣ, ರಾಜ್ಯ ರೈತ ಸಂಘದ ಬಸವಂತರಾಯಗೌಡ ವಜ್ಜಲ, ನೀಲಕಂಠರಾಯ ಪಾಟೀಲ ಯಾರೂ ಹೈಲೈಟ್ ಆಗಲೇ ಇಲ್ಲ. ಬದಲಾಗಿ ದೊರೆಗಳ ದರ್ಪದ ವಿರುದ್ಧ ಹೋರಾಟದ ಕಾವನ್ನು ಹಾಗೇ ಇಟ್ಟುಕೊಂಡು ಬಂದಿದ್ದ ವಜ್ಜಲದ ಬಸವಂತ ರಾಯಗೌಡ ಮತ್ತು ನೀಲಕಂಠರಾಯ ಪಾಟೀಲ ಹರಟಗಿ ಕೊನೆಗೂ ಕೊನೆಯುಸಿರೆಳೆಯಬೇಕಾಯಿತು.



ವೆಂಕಟಪ್ಪ ನಾಯಕ್

ಮದನಗೋಪಾಲ ನಾಯಕ ಎಂಬ ನಾಯಕ ಮನೆತನಕ್ಕೆ ಸೇರಿದ, ಕೊಂಚ ಒರಟನಲ್ಲದ ವ್ಯಕ್ತಿ ಶಾಸಕನಾಗಿದ್ದಾಗ ಮಾತ್ರ ಇಲ್ಲಿನ ಜನ ಸ್ವಲ್ಪ ಉಸಿರಾಡಿದ್ದರು. ಆದರೆ ಆತನೂ ಹೇಳಿಕೇಳಿ ರಾಜವಂಶಸ್ಥನೇ ಆಗಿದ್ದರಿಂದ ಏನೆಲ್ಲ ಮೈಗಳ್ಳ ಗುಣಗಳು ಸೇರಿಸಿಕೊಳ್ಳಬೇಕೋ ಅವೆಲ್ಲವನ್ನೂ ಮೈಗೂಡಿಸಿಕೊಂಡಿದ್ದ. ಆಲಸ್ಯತನವಂತೂ ಈತನಲ್ಲಿ ಮನೆಮಾಡಿಕೊಂಡಿತ್ತು. ಹರೆಯದ ಸಹಜ ಕುತೂಹಲಗಳು, ಆಟಗಳು ಈತನನ್ನು ಯಾಮಾರಿಸಿ ಬಿಟ್ಟಿದ್ದವು. ಇವೆಲ್ಲವುಗಳಿಂದ ಕೇವಲ ಐದು ವರ್ಷಗಳ ಅವಧಿಯಲ್ಲೇ ಮನೆ ದಾರಿ ಹಿಡಿದು ಮೂಲೆ ಸೇರಬೇಕಾದ ಪ್ರಸಂಗ ಇದಿರಾಯಿತು.




ರಾಜುಗೌಡ

ತರುವಾಯ ಬಂದ ವೆಂಕಟಪ್ಪ ನಾಯಕ ವೈಯಕ್ತಿಕವಾಗಿ ಒಳ್ಳೆಯವರೆಂದೇ ಹೇಳುತ್ತಾರೆ. ಆದರೆ ಅವರ ಹೆಸರಿನಲ್ಲಿ ಅವರ ಸಹೋದರರು ಹಾಗೂ ಸಂಬಂಧಿಗಳು ನಡೆಸಿದ ಆಟಾಟೋಪ, ದಾಂಧಲೆ ಎದೆನಡುಗಿಸುವಂಥದ್ದು. ಇವರ ಸುಮಾರು ಹತ್ತು ವರ್ಷಗಳ ಅವಧಿಯಲ್ಲಿ ಮಾನವಂತರು, ಚಿಂತಕರು, ಪ್ರಜ್ಞಾವಂತರು ಮೂಲೆ ಹಿಡಿದು ಕುಳಿತುಕೊಂಡಿದ್ದರು. ಅನೈತಿಕತೆ ತಾಂಡವವಾಡುತ್ತಿದ್ದರೂ ಅದನ್ನು ಪ್ರಶ್ನಿಸುವ ಎದೆಗಾರಿಕೆ ಮಾತ್ರ ಯಾರಿಗೂ ಇರಲಿಲ್ಲ. ಬಹುತೇಕ ಸರಕಾರಿ ಕಚೇರಿಗಳು ಹೆಸರಿಗೆ ಮಾತ್ರ ಆಗಿದ್ದವು. ಅವುಗಳ ಕಾರುಬಾರುಗಳೆಲ್ಲ ದರ್ಬಾರಿನಲ್ಲೇ ನಡೆಯುತ್ತಿತ್ತು. "ಕುದುರೆಗಿಂತ ಕುದುರೆಯ ಲದ್ದಿಯೇ ಬಿರುಸು" ಎಂಬಂತೆ ನಾಯಕರ ಹಿಂಬಾಲಕ - ಮುಂಬಾಲಕರೆಂಬ ಲದ್ದಿಗಳು ಎಗಲಾಡಿದ್ದು, ದೌರ್ಜನ್ಯ ಎಸಗಿದ್ದು ಸರ್ವೇ ಸಾಮಾನ್ಯ ಎನ್ನುವಂತಾಗಿತ್ತು.

ಇಂಥ ಸಂದರ್ಭದಲ್ಲಿ ಕಾಣಿಸಿಕೊಂಡ ಕೊಡೆಕಲ್ ಪಟ್ಟಿಯ ರಿಟೈರ್ಡ್ ಅಬಕಾರಿ ಇನ್ಸ್‌ಪೆಕ್ಟರ್ ಶಂಭಣ್ಣ ನಾಯಕನ ಮಗನೇ ರಾಜುಗೌಡ ಉರ್ಫ್ ನರಸಿಂಹ ನಾಯಕ. ಬಹುಶಃ ಈತ ಉಗ್ರ ರೂಪತಾಳದೆ ಹೋಗಿದ್ದರೆ 'ಸರಕಾಪುರದ ಪಥ' ಆಗುತ್ತಲೇ ಇರಲಿಲ್ಲ.

ತ್ತಿರುವಾಗ ಜನ "ಯಾವ ಕೆಲಸ ಮಾಡದಿದ್ದರೂ ಪರವಾಯಿಲ್ಲ, ನಾವೆಲ್ಲ ಇಂದು ಮುಕ್ತವಾಗಿ ಉಸಿರಾಡ ತೊಡಗಿದ್ದೇವಲ್ಲ? ಇದೇನು ಸಣ್ಣ ಸಾಧನೆಯೆ?!" ಎಂದು ಖುಷಿ ಪಟ್ಟುಕೊಳ್ಳುತ್ತಿದ್ದಾರೆ. ಜೊತೆಗೆ ರಾಜುಗೌಡ ಕೂಡ ತಾನು ಹೋದ ಕಡೆಯಲ್ಲೆಲ್ಲ "ನಾನು ನಿಮ್ಮ ಜೀತದ ಆಳು. ಈ ಆಳು ಸರಿಯಾಗಿ ಕೆಲಸ ಮಾಡದೇ ಹೋದರೆ, ಸೀದಾ ಮನೆಗೆ ಕಳಿಸಿ. ಹೊಸ ಜೀತದ ಆಳನ್ನು ಇಟ್ಟುಕೊಳ್ಳಿ. ಇಷ್ಟು ವರ್ಷಗಳವರೆಗೆ ನಿಮ್ಮ ಜನಪ್ರತಿನಿಧಿಗಳು ನಿಮ್ಮನ್ನು ನೋಡುತ್ತಲೇ ಮೀಸೆ ಹುರಿಗೊಳಿಸಿಕೊಳ್ಳುತ್ತಿದ್ದರು. ತಾವು ಕುಳಿತ ದರ್ಬಾರಿಗೆ ನಿಮ್ಮನ್ನೆಲ್ಲ ಕರೆಸಿಕೊಳ್ಳುತ್ತಿದ್ದರು. ಅವರ ಸುತ್ತಮುತ್ತ ವಂದಿಮಾಗಧರು ಮುಕುರಿಕೊಂಡಿದ್ದರು. ನಿಮಗೆ ನಿಮ್ಮ ಕುಂದುಕೊರತೆ ಹೇಳುವುದಕ್ಕೂ ಅವಕಾಶ ಇರಲಿಲ್ಲ. ಭಯದ ನೆರಳಿನಲ್ಲೇ ನೀವೆಲ್ಲ ಬದುಕುತ್ತಿದ್ದೀರಿ. ಆದರೆ ನಾನು ಬಂದನಂತರ ನಿಮ್ಮ ಮೀಸೆಯ ಮೇಲೆ ನಿಮ್ಮ ಕೈ ಹಾಕಿಕೊಂಡಿದ್ದೀರಿ. ನಿರ್ಭಯದ ವಾತಾವರಣ ಸುರಪುರದಲ್ಲಿ ಉಂಟಾಗಿದೆ" ಎಂದು ಹೇಳುತ್ತಾರೆ.


ಇದೇ ವೇಳೆಗೆ ಕೆಲವು ಕೆಲಸಗಳನ್ನು ಕೈಗೆತ್ತಿಕೊಳ್ಳುವ ಮೂಲಕ ರಾಜುಗೌಡ ವಿಶಿಷ್ಟವಾದ ಹೆಜ್ಜೆ ಇಡುತ್ತಿದ್ದಾನೆ. ಆದರೆ ಈತನಿಗೆ ಸಂಪೂರ್ಣವಾಗಿ ಕೆಲಸದಲ್ಲಿ ತೊಡಗಿಕೊಂಡು ಕೆಲಸ ಮಾಡಲು ಅನುವಾಗುವ ಪಕ್ಷಗಳು ಮಾತ್ರ ದೊರೆಯದೆ ಗಸ್ತು ತಿರುಗಾಡುವಂತಾಗಿದೆ. ನೆಚ್ಚಿದ ಎಮ್ಮೆ ಕೋಣ ಈಯಿತು ಎಂಬಂತೆ 'ಸುಮಾರ ಸ್ವಾಮಿ ಆಂಡ್ ಫ್ಯಾಮಿಲಿ'ಯನ್ನು ನಂಬಿಕೊಂಡು ಸುಸ್ತಾಗಿರುವ ರಾಜುಗೌಡ ಈಗ ಎಂ.ಪಿ.ಪ್ರಕಾಶರ ತೆಕ್ಕೆಗೆ ಹೋಗಿದ್ದಾನೆ. ಪ್ರಕಾಶರು ಕಾಂಗ್ರೆಸ್ ಇಲ್ಲವೇ ಬಿಜೆಪಿ ಪಕ್ಷಕ್ಕೆ ಹೋದರೂ ಅವರನ್ನು ಹಿಂಬಾಲಿಸಿ ಹೋಗುವ ಇರಾದೆ ರಾಜುಗೌಡಗೆ ಇದೆ. ಬಿಜೆಪಿಗೆ ಹೋದರೆ ಚೆಡ್ಡಿ ಹಾಗೂ ಸಂಘ ಪರಿವಾರಿಗಳ ಭಯ ಇದ್ದೇ ಇದೆ ಯಾದರೂ ಅದು ಅನಿವಾರ್ಯವಾಗಲೂಬಹುದು ಎಂಬ ಅಸಹಾಯಕತೆ ಇದೆ.



ಮದನ ಗೋಪಾಲ

ಮಾಡಬೇಕಾದ ಕೆಲಸಗಳು ಬೆಟ್ಟದಷ್ಟು ಕ್ಷೇತ್ರದ ಉದ್ದಕ್ಕೂ ಮಾತಾಡಿಸದೆ ಹಾಗೆ ಬಿದ್ದುಕೊಂಡಿವೆ. ಇವನ್ನು ಗಮನಿಸಿ, ತ್ವರಿತವಾಗಿ ತನ್ನನ್ನು ತೊಡಗಿಸಿಕೊಂಡು ರಾಜುಗೌಡ ಹೋಗಬೇಕಾಗಿದೆ. "ಏರಿದವನು ಚಿಕ್ಕನಾಗಿರಬೇಕು" ಎಂಬ ಕುವೆಂಪು ಕವಿತೆಯ ಸಾಲನ್ನು ನೆನಪಿಟ್ಟುಕೊಳ್ಳಬಲ್ಲನಾದರೂ ಇದೊಂದು ಬಾರಿಯೂ ರಾಜುಗೌಡ 'ಸುರಪುರದ ರಣಗಂಭ'ವನ್ನು ಹರಿಯಬಹುದು ಎನಿಸುತ್ತದೆ .

-ವರದಿಗಾರ




ಕಲ್ಯಾಣ ಕರ್ನಾಟಕದ ಹಿರಿಯ ತಲೆಮಾರಿನ ನಾಯಕರಲ್ಲಿ ಒಬ್ಬರಾದ ವೈಜನಾಥ ಪಾಟೀಲ ಚಿಂಚೋಳಿ ತಮ್ಮ ತರಹೇವಾರಿ ರಾಜಕೀಯದಿಂದ ಯಾವಾಗಲೂ ಸುದ್ದಿಯಲ್ಲಿರುತ್ತಾರೆ. ಹೆಗಡೆಯನ್ನು ಅಪ್ಪಿಕೊಂಡು ಒಮ್ಮೆ ಸುದ್ದಿಮಾಡಿದರೆ, ಹೆಗಡೆಯನ್ನು ಬಿಟ್ಟಾಕಿ ಇನ್ನೊಮ್ಮೆ ಸುದ್ದಿ ಮಾಡುತ್ತಾರೆ. ದೇವೇಗೌಡರನ್ನು ಹಿಂದೊಮ್ಮೆ ಹೊಗಳಿ ಹೊಗಳಿ ಅಟ್ಟಕ್ಕೇರಿಸಿದ್ದರೆ ಮಗನೊಂದು ಬಾರಿ ಅಟ್ಟದಿಂದ ನೇರ ಕೆಳಕ್ಕೆ ಬಿಸಾಡುತ್ತಾರೆ. ಅಷ್ಟೇ ಅಲ್ಲ, ಅವರ ಜನ್ಮವನ್ನೂ ಯಾವುದೇ ಮುಲಾಜಿಲ್ಲದೆ ಜಾಲಾಡಿಸುತ್ತಾರೆ. ಹೀಗೆ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದ ನಾಯಕರನ್ನು ಟೀಕಿಸಿಯೋ ಅಥವಾ ಹೊಗಳುತ್ತಲೋ ಅಥವಾ ತಮ್ಮ

ಚಿಂಚೋಳಿ

ತಮ್ಮ ಪಟ್ಟನ್ನೂ ಹಾಗೆಯೇ ಇಟ್ಟುಕೊಂಡು ನಡೆದಿದ್ದಾರೆ.

ಪ್ರತ್ಯೇಕ ರಾಜ್ಯದ ಭೂಪಟ, ಧ್ವಜ ಎಲ್ಲವನ್ನೂ ಪತ್ರಿಕೆಗಳಿಗೆ ಬಿಡುಗಡೆ ಮಾಡಿ ಸುದ್ದಿ ಮಾಡುತ್ತಾರೆ. ಸೆಪ್ಟೆಂಬರ್ ತಿಂಗಳಲ್ಲಂತೂ ಸಾಮಾನ್ಯ ಜನರ್‍ಯಾರಿಗೂ ಬೇಕಾಗದಿದ್ದರೂ ಧ್ವಜ ಹಾರಿಸಿಯೇ ತೀರುತ್ತಾರೆ. ಇದಕ್ಕಾಗಿ ರಸ್ತೆ ತಡೆ, ಬಹಿರಂಗ ಸಭೆ, ಧರಣಿ ಮುಂತಾದವುಗಳಿಂದ ಜನರಲ್ಲಿ ಪ್ರತ್ಯೇಕ ರಾಜ್ಯದ ಕಲ್ಪನೆ ಹುಟ್ಟು ಹಾಕಲು ಹೆಣಗುತ್ತಾರೆ. 31 ತಾಲೂಕುಗಳಲ್ಲಿ ಸಭೆ, ಯಾತ್ರೆ ನಡೆಸಿ ಜನರಲ್ಲಿ ಜಾಗೃತಿ ಉಂಟುಮಾಡಲು ಪ್ರಯತ್ನಿಸುತ್ತಾರೆ. ಸುಮಾರು ಒಂದು ದಶಕದ ಉದ್ದಕ್ಕೂ ಇದನ್ನು ಜೀವಂತವಾಗಿಟ್ಟುಕೊಂಡು ಬಂದಿದ್ದಾರೆ ಪಾಟೀಲರು. ಹಣಮಂತರಾಯ ದೇಸಾಯಿ



ವೈಜನಾಥ ಪಾಟೀಲರಿಗಾದ ಜ್ಞಾನೋದಯ

ಮರೆಗುಳಿತನದಿಂದಲೋ ತಮ್ಮ ಮತಕ್ಷೇತ್ರವನ್ನು ಯಾವಾಗಲೂ ಕಡೆಗಣಿಸುತ್ತಾರೆ.

ಈ ಮಧ್ಯೆ ಹೈದ್ರಾಬಾದ್ ಕರ್ನಾಟಕದ ಅಭಿವೃದ್ಧಿ ಆಗಿಲ್ಲ ಎಂದೆಲ್ಲ ಹೇಳುತ್ತ ಕರ್ನಾಟಕ ರಾಜ್ಯದಿಂದಲೇ ಹೈದ್ರಾಬಾದ್ ಕರ್ನಾಟಕ ಪ್ರದೇಶವನ್ನು ಹೈಜಾಕ್ ಮಾಡಿಸುವ ಮಾತಾಡಿದರು. ಈ ಮಾತು ಸುತಾರಾಂ ಇಲ್ಲಿಯ ಜನಗಳಿಗ್ಯಾರಿಗೂ ಇಷ್ಟವಾಗಲ್ಲ. ಆದರೇನಂತೆ ಪಾಟೀಲರು ಮಾತ್ರ ಜೆಟ್ಟಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎನ್ನುವಂತೆ

ವಿಶ್ವನಾಥರೆಡ್ಡಿ ಮುದ್ನಾಳ, ವಿದ್ಯಾಧರ ಗುರೂಜಿ ಮುಂತಾದ ಬೆರಳೆಣಿಕೆಯ ಜನ ಬಿಟ್ಟರೆ ಇವರ ದನಿಗೆ ಧ್ವನಿ ನೀಡುವವರ್‍ಯಾರು ಇಲ್ಲ ಎಂಬುದು ಬೇರೆ ವಿಷಯ.

ತಮಾಷೆ ಎಂಥದೆಂದರೆ ಇಷ್ಟು ದಿನ ಯಾರು ಹೇಳಿದರೂ ಕೇಳಿದರೂ ತಮ್ಮ ಮೊಂಡು ಹಠ ಬಿಡದಿದ್ದ ವೈಜನಾಥ ಪಾಟೀಲರಿಗೆ ಈಗ ಒಮ್ಮಿಂದೊಮ್ಮೆ ಜ್ಞಾನೋದಯವಾಗಿಯೋ- ಅಥವಾ ಒತ್ತಡಕ್ಕೆ ಒಳಗಾಗಿಯೋ ಹೊಸ ರಾಗ ಶುರುಹಚ್ಚಿಕೊಂಡು ಓಡಾಡುತ್ತಿದ್ದಾರೆ. ತಾವು ಹೋದಲ್ಲಿ ಬಂದಲ್ಲಿ ಯಾರು ಕೇಳದಿದ್ದರೂ, ಪ್ರತ್ಯೇಕ ರಾಜ್ಯದ ಪ್ರಸ್ತಾಪ ಮಾಡದಿದ್ದರೂ ಪಾಟೀಲರೆ ಪ್ರತ್ಯೇಕ ರಾಜ್ಯದ ಹೋರಾಟ ಇನ್ನು ಮುಂದೆ ಇಲ್ಲ, ಕೇವಲ ಸಂವಿಧಾನದ 371ನೇ ವಿಧಿ ತಿದ್ದುಪಡಿಗೆ

ನರಗುಂದ-ನವಲಗುಂದ ರೈತಬಂಡಾಯ ಕಾಂಗ್ರೆಸ್ ಸರ್ಕಾರವನ್ನು ಕಿತ್ತು ಜನತಾ ಸರ್ಕಾರವನ್ನು ತರುವ ಮೂಲಕ ರಾಜ್ಯದ ರಾಜಕೀಯ ಚಿತ್ರಣವನ್ನೇ ಬದಲಿಸಿತ್ತು. ಈಗ ಈ ಬಂಡಾಯದ ನೆಲ ಮತ್ತೊಂದು ರೈತಬಂಡಾಯಕ್ಕಾಗಿ ಸಜ್ಜಾಗುತ್ತಿದೆಯೇನೋ ಎಂದು ಭಾಸವಾಗುತ್ತಿದೆ. ಈ ಭಾಗದ ರೈತರ ಬದುಕನ್ನೇ ಬದಲಾಯಿಸಬಲ್ಲ ಕಳಸಾ-ಬಂಡೂರಿ ನಾಲಾ ಯೋಜನೆ ಜಾರಿಯಾಗದೇ ನೆನೆಗುದಿಗೆ ಬಿದ್ದಿದೆ. ಈ ಕುರಿತು ಕೇಂದ್ರ ಸರ್ಕಾರವಾಗಲೀ, ರಾಜ್ಯದ ಕೋ-ಜಾ ಸರ್ಕಾರವಾಗಲೀ, ಕ್ಷೇತ್ರದ ಶಾಸಕರುಗಳಾಗಲೀ ಯಾರೂ ತಲೆಕೆಡಿಸಿಕೊಂಡಂತಿಲ್ಲ.

ಈ ಯೋಜನೆ ಜಾರಿಗೆ ಒತ್ತಾಯಿಸಿ ಜೆಡಿಯುನ ಬಸವರಾಜ ಬೊಮ್ಮಾಯಿ ಒಂದು ಹೋರಾಟವನ್ನು ಕೈಗೆತ್ತಿಕೊಂಡರಾದರೂ ನಂತರದ ದಿನಗಳಲ್ಲಿ ಬಿಜೆಪಿ ತಾನೂ ರೈತರ ಮಿತ್ರ ಎನ್ನಿಸಿಕೊಳ್ಳುವುದಕ್ಕಾಗಿ ಈ ಯೋಜನೆಯ ಬಗ್ಗೆ ಮಾತನಾಡಲಾರಂಭಿಸಿತು. ತಮ್ಮದೇ ಎನ್‌ಡಿಎ ಸರ್ಕಾರ ಕೇಂದ್ರದಲ್ಲಿದ್ದಾಗ ಏನೂ ಕಿಸಿಯದವರು ಈಗ ಯುಪಿಎ ಸರ್ಕಾರವೇ ಇದರ ಜಾರಿಗೆ ಮೀನಾಮೇಷ ಎಣಿಸುತ್ತಿದೆ ಎಂದು ಹುಯಿಲೆಬ್ಬಿಸುತ್ತಿದ್ದಾರೆ. ಅದೇನೇ ಇದ್ದರೂ ಈ ಯೋಜನೆಯ ವಿಚಾರವೇ ನವಲಗುಂದದಲ್ಲಿ ಈ ಬಾರಿ ಎಲ್ಲ ರಾಜಕೀಯ ಪಕ್ಷಗಳ ಅಜೆಂಡ ಆಗುವುದಂತೂ ಸತ್ಯ.

ನವಲಗುಂದ

ನವಲಗುಂದ ಕ್ಷೇತ್ರದಲ್ಲಿ ಒಟ್ಟು 63 ಹಳ್ಳಿಗಳು ಇದ್ದು ಸುಮಾರು ಒಂದೂವರೆ ಲಕ್ಷದಷ್ಟು ಮತದಾರರಿದ್ದಾರೆ. ಅವರಲ್ಲಿ ಸುಮಾರು 55 ಸಾವಿರದಷ್ಟಿರುವ ಲಿಂಗಾಯತರೇ ಪ್ರತೀ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಾರೆ. ಲಿಂಗಾಯತರಲ್ಲಿಯೂ ಪಂಚಮಸಾಲಿ ಒಳಪಂಗಡವೊಂದೇ ಸುಮಾರು 35 ಸಾವಿರದಷ್ಟು ಮತದಾರರನ್ನು ಹೊಂದಿದೆ. ಲಿಂಗಾಯತರನ್ನು ಬಿಟ್ಟರೆ ನಂತರದ ಸ್ಥಾನದಲ್ಲಿರುವವರು 26 ಸಾವಿರ ಮತಗಳನ್ನು ಹೊಂದಿರುವ ಕುರುಬರು. ಉಳಿದಂತೆ 14 ಸಾವಿರ ಮುಸ್ಲಿಮ್, 12 ಸಾವಿರ ರೆಡ್ಡಿ, 14 ಸಾವಿರ ದಲಿತ ಮತಗಳಿವೆ.

ಲಿಂಗಾಯತರೇ ಇಲ್ಲಿ ನಿರ್ಣಾಯಕರಾಗಿರುವುದರಿಂದ ಮೂರು ಬಾರಿ ಬಿಟ್ಟರೆ ಇಲ್ಲಿ ಈತನಕ ಆಯ್ಕೆಯಾಗಿ ಬಂದವರೆಲ್ಲಾ ಲಿಂಗಾಯತರೆ. ಈ ಕ್ಷೇತ್ರದ ಇನ್ನೊಂದು ವಿಶೇಷ ಎಂದರೆ ಒಬ್ಬನೇ ವ್ಯಕ್ತಿಯನ್ನು ಪದೇ ಪದೇ ಆಯ್ಕೆ ಮಾಡಿ ಕಳಿಸುವ ಪರಂಪರೆಯನ್ನು ಇಲ್ಲಿನ ಜನ ಬೆಳೆಸಿಕೊಂಡಿಲ್ಲದಿರುವುದು. ಒಬ್ಬನನ್ನು ಆಯ್ಕೆ ಮಾಡಿ ಕಳಿಸಿ ಅವನಿಂದ ಏನಾದರೂ ಕ್ಷೇತ್ರಕ್ಕೆ ಒಳ್ಳೆಯದಾದರೆ ಮಾತ್ರ ಇನ್ನೊಂದು ಬಾರಿ ಆತನನ್ನೇ ಆಯ್ಕೆ ಮಾಡಿ ಕಳಿಸಬಹುದು ಎಂಬುದು ಇಲ್ಲಿನ ಜನರ ಲೆಕ್ಕಾಚಾರ. ಆದರೆ, ಆಯ್ಕೆಯಾಗಿ ಬಂದವರು ಕ್ಷೇತ್ರವನ್ನು ಹುರಿದು ಮುಕ್ಕಿದರೇ ಹೊರತು ಕ್ಷೇತ್ರದ ಜನರಿಗಾಗಿ ಏನನ್ನೂ ಮಾಡದ್ದರಿಂದ ಒಂದು ಬಾರಿ ಆರಿಸಿ ನಂತರ ಮನೆಗೆ ಕಳಿಸಿದ್ದಾರೆ. ಸದ್ಯದ ಮಾಜಿ ಶಾಸಕ ಶಿರಿಯಣ್ಣನವರ್‌ಗೂ ಕೂಡ ಅದೇ ಗತಿ ಕಾದಿದೆ

ಈ ಕ್ಷೇತ್ರದಲ್ಲಿರುವ ಐದು ಎಪಿಎಂಸಿ ಸದಸ್ಯರಲ್ಲಿ ಮೂವರು ಜೆಡಿ(ಯು)ಗೆ ಸೇರಿದವರಾದರೆ, ಇಬ್ಬರು ಬಿಜೆಪಿಯವರಾಗಿದ್ದಾರೆ. ಜಿ.ಪಂ ನಲ್ಲಿರುವ ನಾಲ್ವರು ಸದಸ್ಯರೂ ಜೆಡಿ(ಯು)ನವರೇ. ತಾಲ್ಲೂಕ ಪಂಚಾಯತಿಯಲ್ಲಿ ಇಬ್ಬರು ಬಿಜೆಪಿಯವರನ್ನು ಬಿಟ್ಟರೆ ಉಳಿದವರೆಲ್ಲರೂ ಜೆಡಿ(ಯು)ನವರೆ. ಹೀಗಿದ್ದರೂ ಚುನಾವಣಾ ಪೂರ್ವ ಹೊಂದಾಣಿಕೆಯಲ್ಲಿ ತಮಗೆ ಬರಬೇಕಿದ್ದ ಕ್ಷೇತ್ರವನ್ನು ಬಿಜೆಪಿಗೆ ಬಿಟ್ಟುಕೊಟ್ಟು ಮೂರ ನಾಮ ಎಳೆಸಿಕೊಂಡಿದ್ದಾರೆ ಜೆಡಿ(ಯು)ನ ಮಂಗಗಳು ಈ ಕಾರಣಕ್ಕಾಗಿಯೇ ಈ ಹಿಂದೆ ಎರಡು ಬಾರಿ ಸೋತು ಸುಣ್ಣವಾಗಿದ್ದ ಶಿರಿಯಣ್ಣನವರ್ ಈ ಬಾರಿ ಮೂವತ್ತು ಸಾವಿರ ಮತಗಳನ್ನು ಪಡೆದು ಗೆದ್ದುಬಂದ

ಡಾಕ್ಟರ್ ಆಗಿದ್ದವನು ರಾಜಕಾರಣಿಯಾದ!

ಮೂಲತಃ ಅಣ್ಣಿಗೇರಿಯಲ್ಲಿ ಸರ್ಕಾರಿ ದವಾಖಾನೆಯ ಡಾಕ್ಟರ್ ಆಗಿದ್ದ ಶಿರಿಯಣ್ಣನವರ್ ಅಲ್ಲಿನ ಕಮಾಯಿ ಸಾಕಾಗಲಿಲ್ಲವೆಂಬಂತೆ ಹದಿನೈದು ವರ್ಷಗಳ ಹಿಂದೆ ರಾಜೀನಾಮೆ ಕೊಟ್ಟು, ರಾಜಕೀಯಕ್ಕಿಳಿದ. ಅಸಲಿ ಬೇರೆಲ್ಲೋ ಡಾಕ್ಟರ್ ಆಗಿ ಕೆಲಸ ಮಾಡುತ್ತಿದ್ದ ಈತನ

ಹೋರಾಟ ನಡೆಯಲಿದೆ ಎಂದು ಹೇಳತೊಡಗಿದ್ದಾರೆ.

ಬಹುಶಃ ಜೆವಿಎಸ್ ಪಾಳಯದಿಂದ ಈಗಾಗಲೇ ಜಿಗಿದಿರುವ, ಕಾಂಗ್ರೆಸ್ ಅಮ್ಮನ ಮಡಿಲು ಸೇರುವ ತಯಾರಿಯಲ್ಲಿರುವ ಪಾಟೀಲರಿಗೆ ಕಾಂಗ್ರೆಸ್‌ಗಳು ಪ್ರತ್ಯೇಕ ರಾಜ್ಯದ ಹೋರಾಟ ಚಳವಳಿಯಿಂದ ಹಿಂದೆ ಸರಿದರೆ ಮಾತ್ರ ನಮ್ಮಲ್ಲಿ ಪ್ರವೇಶ ಎಂದು ಹೇಳಿರಬಹುದೆನಿಸುತ್ತದೆ. ಇಲ್ಲದೆಹೋದರೆ ಇಷ್ಟು ದಿನ ಯಾರಾದರೂ ಈ ಬಗ್ಗೆ ಹೇಳಿದರೆ ಸಿಡುಕುತ್ತಿದ್ದ ಪಾಟೀಲ ಈಗ ತಾವೇ ಬದಲಾಗಿದ್ದಾರೆ. ಬಹುಶಃ ಬರುವ ದಿನಗಳಲ್ಲಿ ಕಾಂಗ್ರೆಸ್ ಸೇರುತ್ತಿದ್ದಂತೆಯೇ 371 ಕಲಂ ಜಾರಿಗೆ ಒತ್ತಾಯಿಸುವುದನ್ನೂ ಪಾಟೀಲರು ಕೈಬಿಟ್ಟರೆ ಯಾರೂ ಅಚ್ಚರಿ ಪಡಬೇಕಾಗಿಲ್ಲವೆನಿಸುತ್ತದೆ.

ನಿಜಕ್ಕೂ ಕಲ್ಯಾಣ ಕರ್ನಾಟಕದ ಭಾಗಗಳಾದ ಕೊಪ್ಪಳ, ರಾಯಚೂರು, ಗುಲಬರ್ಗಾ ಮತ್ತು ಬೀದರ್ ಜಿಲ್ಲೆಗಳ ಅಭಿವೃದ್ಧಿಯನ್ನು ಗಮನಿಸಿದರೆ ಯಾರಿಗಾದರೂ ಸಿಟ್ಟು ಬರುವುದು ಸಹಜ. ರಾಜ್ಯದ ಬೇರೆಲ್ಲ ಜಿಲ್ಲೆಗಳಂತೆ ಇವು ಮೈ-ಕೈ ತುಂಬಿಕೊಂಡಿಲ್ಲ. ಇವತ್ತಿಗೂ ಜನರಿಗೆ ತೀರಾ ಅಗತ್ಯವಾದ ಕುಡಿಯುವ ನೀರು, ಸರಿಯಾದ ರಸ್ತೆ, ಸುಗಮವಾಗಿ ನಡೆಯುವ ಸಾರಿಗೆ ವ್ಯವಸ್ಥೆಗಳಿಲ್ಲದೆ ಒಂಥರಾ ಅನಾರ್ಕಿಯ ವಾತಾವರಣ ತುಂಬಿ ತುಳುಕುತ್ತಿದೆ. ಶಿಕ್ಷಣದ ಗುಣಮಟ್ಟವಂತೂ ಹೇಳಲಾಗಿಲ್ಲ. ಆಗೀಗ ಬರುವ ಸರಕಾರದ ಅನುದಾನದ ಹಣ ಕಾದ ಹೆಂಚಿನ ಮೇಲೆ ಸಿಂಪಡಿಸಿದ ಹನಿಗಳಂತೆ ತಕ್ಷಣವೇ ಕರಗಿ ಹೋಗುತ್ತದೆ. ಸಮಸ್ಯೆ ಮಾತ್ರ ಹಾಗೇ ಉಳಿದುಕೊಂಡಿರುತ್ತದೆ. ನಿಜಾಮನ ಆಳ್ವಿಕೆಗೆ ಒಳಪಟ್ಟ ಈ ಭಾಗ ಸರಕಾರದ ಅವಕೃಪೆಗೆ ತುತ್ತಾಗಿರುವುದರಲ್ಲಿ ಎರಡು ಮಾತಿಲ್ಲ. ಆದರೆ ಈ ಭಾಗದ ಜನನಾಯಕರೆಲ್ಲ ತಮ್ಮ ಗುಡಾಣ ತುಂಬಿಕೊಳ್ಳುವುದಕ್ಕೆ ಎಷ್ಟು ಪ್ರಾಮುಖ್ಯ ಕೊಡುತ್ತಾರೋ ತಮ್ಮ ಭಾಗದ ಅಭಿವೃದ್ಧಿಗೆ ಅಷ್ಟು ಗಮನ ಹರಿಸುವುದಿಲ್ಲ.

ಆಶ್ಚರ್ಯವೆಂದರೆ ಕೇಂದ್ರ ಸರಕಾರ ದೇಶದಲ್ಲಿ ಇನ್ನಷ್ಟು ರಾಜ್ಯಗಳ ರಚನೆಗೆ ಸಂಬಂಧಿಸಿದಂತೆ ಅಧ್ಯಯನ ಮಾಡಲು ದ್ವಿತೀಯ ರಾಜ್ಯ ಪುನರ್ ವಿಂಗಡಣಾ ಸಮಿತಿಯನ್ನು ರಚಿಸಲು ಮುಂದಾಗಿರುವ ಸುದ್ದಿ ಪ್ರಕಟವಾಗಿದೆ. ಈಗ ವೈಜನಾಥ ಪಾಟೀಲ ಮುಂತಾದವರು ಏನು ಮಾಡುತ್ತಾರೋ ಕಾದು ನೋಡಬೇಕು?!

–ವಿಶ್ವಾರಾಧ್ಯ ಸತ್ಯಂಪೇಟೆ

ಬಾಲರಾಜನೆಂಬ ಬಾಲವಿಲ್ಲದ ಕೋತಿ

ಕೊಳ್ಳೇಗಾಲದ ಜನ ಅದೇನು ಪಾಪ ಮಾಡಿದ್ದಾರೋ ಗೊತ್ತಿಲ್ಲ, ಅವರಿಗೆ ಬಾಲವಿಲ್ಲದ ಕೋತಿಯೊಂದು ಶಾಸಕನಾಗಿ ಸಿಕ್ಕಿಬಿಟ್ಟಿದೆ. ಕಳೆದ ಚುನಾವಣೆಯಲ್ಲಿ ಈ ಮೀಸಲು ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಎಸ್. ಬಾಲರಾಜ್ ಅದೇನು ಮೋಡಿ ಮಾಡಿದನೋ ಜನ ಇವನನ್ನು ಗೆಲ್ಲಿಸಿ ಕಳಿಸಿದ್ದರು. ಪ್ರಾಯಶಃ ಈಗ ಅವರಿಗೆ ಅರ್ಥವಾಗಿರಬೇಕು, ತಾವು ಮಾಡಿದ ತಪ್ಪು ಎಂತಹ ಭೀಕರವಾದದ್ದು ಎಂದು.

ಇಡೀ ಕ್ಷೇತ್ರದ ಜನ ಹತ್ತಾರು ಸಮಸ್ಯೆಗಳಿಂದ ತತ್ತರಿಸುತ್ತಿದ್ದರೂ ಹೋಗಿ ನೋಡಬೇಕೆನ್ನುವ ಕನಿಷ್ಠ ಮಾನವೀಯತೆಯೂ ಇಲ್ಲದ ಮನುಷ್ಯನೀತ. ಚಿಕ್ಕ ವಯಸ್ಸಿನಲ್ಲಿಯೇ ಎಮ್ಮೆಲ್ಲೆಗಾದಿಗೇರಿದ ಈತ ಅಧಿಕಾರ ಸಿಕ್ಕಿದ್ದೇ ಮುಕ್ಕುವುದಕ್ಕೆ ಎಂದುಕೊಂಡು ಕೊಳ್ಳೇಗಾಲವನ್ನು ಯಾರೂ ಹೊಡೆಯದಷ್ಟು ಕೊಳ್ಳೆ ಹೊಡೆದು ಅಪಾರ ಕುಖ್ಯಾತಿ ಪಡೆದಿದ್ದಾನೆ. ತಿಂದ ಹಡಬೆ ದುಡ್ಡು ಕರಗಿಸುವುದಕ್ಕೋ ಸ್ವರವೇ ಸಿನೆಮಾ ಫೀಲ್ಡಿಗಿಳಿದು ಚಿತ್ರ ನಿರ್ಮಾಪಕ, ಚಿತ್ರನಟ ಎಂಬ ಹೊಸ ಅವತಾರಗಳನ್ನೆತ್ತಿ ಚಿತ್ರನಟಿಯರ ಸೊಂಟ ಬಳಸಿ ಕುಣಿಯಲಾರಂಭಿಸಿದ. ಇದನ್ನೆಲ್ಲಾ ನೋಡಿ ಇವನನ್ನು ಆರಿಸಿ ಕಳಿಸಿದ ಜನ ಅಸಹ್ಯ ಪಡುತ್ತಿರುವುದಂತೂ ಕಠೋರ ಸತ್ಯ.

ಕೊಳ್ಳೇಗಾಲ ಕ್ಷೇತ್ರ ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಈತ ಒಂದಿಷ್ಟೂ ಕಾಳಜಿ ವಹಿಸಿದ್ದಿಲ್ಲ. ಕೊಳ್ಳೇಗಾಲದಲ್ಲಿರುವ ಆಸ್ಪತ್ರೆಯ ಸ್ಥಿತಿಯನ್ನೇ ನೋಡಿ. 500 ಬೆಡ್‌ಗಳ ಆಸ್ಪತ್ರೆ ಎಂಬ ಹೆಗ್ಗಳಿಕೆಯಿದ್ದರೂ ಅಲ್ಲಿರುವುದು ಮಾತ್ರ ಮೂರೇ ಡಾಕ್ಟರ್! ಬಡ ಮಹಿಳೆಯರೇ ಹೆಚ್ಚಾಗಿ ಇಲ್ಲಿಗೆ ಬರುತ್ತಾರಾದರೂ ಒಬ್ಬ ಮಹಿಳಾ ವೈದ್ಯರಿಲ್ಲ. ಈ ಹಿಂದೆ ಶಾಸಕರಾಗಿದ್ದ ಜಿ.ಎನ್. ನಂಜುಂಡಸ್ವಾಮಿಯವರ ಅವಧಿಯಲ್ಲಿ ಸೇವೆ ಸಲ್ಲಿಸುತ್ತಿದ್ದ ಡಾಕ್ಟರ್‌ಗಳನ್ನೆಲ್ಲಾ ಒಬ್ಬೊಬ್ಬರನ್ನಾಗಿ ವರ್ಗಾವಣೆ ಮಾಡಿ ಕಳಿಸಿದ ಈ ಬಾಲರಾಜ ಆ ಭಾಗಗಳಿಗೆ ಬೇರೆಯವರನ್ನು ತರುವ ಗೋಜಿಗೆ ಹೋಗಲೇ ಇಲ್ಲ.


ಇನ್ನು ಕುಡಿಯುವ ನೀರಿನದ್ದಂತೂ ಹೇಳತೀರದ ಸಮಸ್ಯೆ. ಎರಡನೇ ಹಂತದ ಕಾವೇರಿ ಕುಡಿಯುವ ನೀರಿನ ಯೋಜನೆಯನ್ನು ಜಾರಿಮಾಡಿಸುತ್ತೇನೆ ಎಂದು ಸರ್ಕಾರದಿಂದ ಕೋಟ್ಯಂತರ ರೂಪಾಯಿಗಳನ್ನು ಬಿಡುಗಡೆ ಮಾಡಿಸಿಕೊಂಡು, ನಂತರ ಕಾಮಗಾರಿಯನ್ನು ಅರ್ಧಕ್ಕೇ ನಿಲ್ಲಿಸಿ ಹಣ ಗುಳುಂ ಮಾಡಿಕೊಂಡಿದ್ದಾನೆ. ನೀರಿನ ಸಮಸ್ಯೆಯಿಂದ ಬಳಲುವ ಮಹಿಳೆಯರಂತೂ ಈ ಬಾರಿ ಬಾಲರಾಜ್ ಬಂದರೆ ಪೊರಕೆ ಸೇವೆ ಮಾಡಲು ಸಿದ್ಧರಾಗಿರುವುದನ್ನು ಕಂಡೇ ಆತ ಈಗ ಕ್ಷೇತ್ರದ ಕಡೆ ತಲೆಹಾಕುವುದನ್ನೂ ಬಿಟ್ಟಿದ್ದಾನೆ.

ಕೊಳ್ಳೇಗಾಲ

ಶಾಸಕನಾಗಿ ಮೆರೆದ ಬಾಲರಾಜ್‌ನ ಸ್ವಂತ ಊರನ್ನೇ ನೋಡಿದರೂ ಸಾಕು ಕೊಳ್ಳೇಗಾಲದ ಅಭಿವೃದ್ಧಿ ಎಷ್ಟರಮಟ್ಟಿಗೆ ಆಗಿದೆ ಎಂಬುದು ಅರ್ಥವಾಗಿ ಹೋಗುತ್ತದೆ. ಇಡೀ ಹಳ್ಳಿ ಗುಡಿಸಲು ಮನೆಗಳಿಂದಲೇ ರಾರಾಜಿಸುತ್ತಿದೆ; ತನ್ನ ಹಳ್ಳಿಯ ಜನರಿಗೆ ಕನಿಷ್ಠ ಆಶ್ರಯ ಮನೆಗಳನ್ನು ಕೊಡಿಸಲಾಗದ ಬಾಲರಾಜ್ ಇನ್ನು ಕ್ಷೇತ್ರದ ಅಭಿವೃದ್ಧಿಗೇನು ಮಾಡಿಯಾನು?

ಕ್ಷೇತ್ರದ ಸರ್ಕಾರಿ ಅಧಿಕಾರಿಗಳಿಂದ ಹಣ ಎತ್ತುವುದಕ್ಕಾಗಿಯೇ ಒಂದು ಪುಂಡ ಹುಡುಗರ ಗ್ಯಾಂಗ್‌ನ್ನು ಈತ ಕಟ್ಟಿಕೊಂಡಿದ್ದಾನೆ. ಈ ಪಡೆಗಳನ್ನೆಲ್ಲಾ ಒಂದೆಡೆ ಗುಡ್ಡೆ ಹಾಕಿ ಬಾಲರಾಜ್ ಅಭಿಮಾನಿಗಳ ಸಂಘ ಅಂತ ಬೋರ್ಡು ಬೇರೆ ತಗಲು ಹಾಕಿದ್ದಾನೆ. ಕೊಳ್ಳೆ ಹೊಡೆದ ಹಣದಲ್ಲಿ ತಾನು ಮತ್ತು ತನ್ನ ಅಭಿಮಾನಿಗಳು ಚೆನ್ನಾಗಿ ಮೇಯುತ್ತಿದ್ದಾರೆ. ಬಾಲರಾಜ್ [illegible] ಆದೆಷ್ಟರ ಮಟ್ಟಿಗೆ ಮೇಯುತ್ತಿದ್ದಾರೆಂಬುದು ಅವರ [illegible] ಕಾರುಗಳನ್ನು, ವೈಭವೋಪೇತ [illegible] ಜೀವನವನ್ನು ನೋಡಿದರೇನೇ ಅರ್ಥವಾಗುತ್ತದೆ.


ಇತ್ತ ಕೊಳ್ಳೇಗಾಲದಲ್ಲಿ ಜನರ ವಿಶ್ವಾಸವನ್ನು ಕಳೆದು



ಕೊಂಡಿರುವ ಬಾಲರಾಜನಿಗೆ ಅತ್ತ ಬೆಂಗಳೂರಿನಲ್ಲೂ ನೆಲೆಯಿಲ್ಲ. ಎಂ.ಪಿ. ಪ್ರಕಾಶರ ಹಿಂದೆ ಓಡಾಡುತ್ತಾ ತನ್ನ ರಾಜಕೀಯ ಕೆರಿಯರ್ ಬೆಳೆಸಿಕೊಳ್ಳಲು ಪ್ರಯತ್ನಿಸಿದನಾದರೂ ಅದೂ ಈಗ ಮರೀಚಿಕೆಯೆ. ಖುದ್ದು ಎಂ.ಪಿ. ಪ್ರಕಾಶ್ ಅವರೇ ಈಗ ನೆಲೆಯಿಲ್ಲದೆ ಅತಂತ್ರ ಸ್ಥಿತಿಯಲ್ಲಿರುವಾಗ ಇನ್ನು ಈ ಬಾಲರಾಜನ ಗತಿ ಏನಾಗಿರಬೇಡ?


ಬಾಲರಾಜನಿಗೆ ತಾನು ಯಾವ ಪಕ್ಷಕ್ಕೆ ಹೋದರೂ ತನಗೆ ಟಿಕೆಟ್ ಕೊಡುತ್ತಾರೆಂಬ ಹುಂಬು ವಿಶ್ವಾಸವಿದೆ; ಯಾರೂ ಟಿಕೆಟ್ ಕೊಡದಿದ್ದರೆ ಕನಿಷ್ಠ ಹತ್ತು ಕೋಟಿಗಳನ್ನು ಚೆಲ್ಲಿಯಾದರೂ ಮತ್ತೆ ಶಾಸಕನಾಗುತ್ತೇನೆ ಎಂಬ ಹಠಮಾರಿತನವಿದೆ. ಆದರೆ, ಅದನ್ನೆಲ್ಲ ಸುಳ್ಳು ಮಾಡಬೇಕೆಂಬ ಛಲ ಕೊಳ್ಳೇಗಾಲ ಜನಕ್ಕಿದೆ.

– ಕೊಳ್ಳೇಗಾಲ ಮಾಳಿಗೆ



ತನ್ನ ಕುಲಬಾಂಧವ ಹತ್ತಿರದಲ್ಲೇ ಇರಲಿ ಅನ್ನೋ ಕಾರಣಕ್ಕೆ ಅಂದಿನ ಎಮ್ಮೆಲ್ಲೆ ಆಗಿದ್ದ ಎಂ.ಕೆ. ಕುಲಕರ್ಣಿಯೇ ಖುದ್ದಾಗಿ ಅಣ್ಣಿಗೇರಿಗೆ ವರ್ಗಾಯಿಸಿ ಕೊಟ್ಟಿದ್ದ. ಆದರೆ ನಂತರದ ದಿನಗಳಲ್ಲಿ ಕೆಲಸಕ್ಕೆ ರಾಜೀನಾಮೆ ಕೊಟ್ಟು, ಅನಂತಕುಮಾರ್, ಜಗದೀಶ್ ಶೆಟ್ಟರ್‌ಗಳಿಗೆ ದುಂಬಾಲು ಬಿದ್ದು ಬಿಜೆಪಿಯಿಂದ ಟಿಕೆಟ್ ಪಡೆದು ಕುಲಕರ್ಣಿಯ ವಿರುದ್ಧವೇ ಸ್ಪರ್ಧಿಸಿ ಸೋತ.

ನಂತರದ ಚುನಾವಣೆಯಲ್ಲಿ ಆಗ ವಿಐಪಿ ಆಗಿದ್ದ ವಿಜಯ್ ಸಂಕೇಶ್ವರ ಎಂಬ ಶರಣನನ್ನು ಹಿಡಿದು ಟಿಕೆಟ್ ಪಡೆದು ಮತ್ತೆ ಸೋತ. ಆದರೇನಂತೆ, ಆಗ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವಿದ್ದುದರಿಂದ ಅಂದಿನ ಕೇಂದ್ರ ಮಂತ್ರಿ ಅನಂತಕುಮಾರ್‌ನ ಹಿಂದೆ ಓಡಾಡಿಕೊಂಡು ತನ್ನ ಮಗ, ಮಗಳ ಹೆಸರಿನಲ್ಲಿ ಮೂರು ಪೆಟ್ರೋಲ್ ಬಂಕ್‌ಗಳಿಗೆ ಪರವಾನಗಿ ಪಡೆದುಕೊಂಡ.



ಕೆ.ಎನ್. ಗಡ್ಡಿ — ಶಂಕರ ಪಾಟೀಲ್ ಮುನೇಕೊಪ್ಪ — ಶಿರಿಯಣ್ಣ

ಈತನ ಅವಕಾಶವಾದಿತನ ಎಷ್ಟಿದೆ ಎಂದರೆ, ಕೊನೆಗೆ ಅನಂತಕುಮಾರ್‌ಗೇ ಬತ್ತಿ ಇರಿಸಿ ಯಡ್ಡಿಯ ಹಿಂದೆಬಿದ್ದು ಮೂರನೇ ಬಾರಿಗೆ ಟಿಕೆಟ್ ಪಡೆದುಬಿಟ್ಟ. ಜೊತೆಗೆ, ಅಂದಾನಯ್ಯ ಹಿರೇಮಠ, ಶಂಕರಣ್ಣ ಅವರಾದಿ, ಸಿ.ಬಿ. ಪಾಟೀಲ, ಅಡಿವೆಪ್ಪ ಹೂಗಾರ, ಹಣ್ಮಂತ ಗುಡಿಕಾರ, [illegible] ವೀರಶೈವ ಮಹಾಸಭಾದ ಬಸವನಗೌಡ ಪಾಟೀಲ, ಚಂದ್ರಶೇಖರ ಹಿರೇಣ್ಣವರ, ಡಾ. ಎಂ.ಎಸ್. ಪಾಟೀಲ, ಅಂದಪ್ಪ ಕುರ್ತಕೋಟಿ, ಬಸವರಾಜ ಸಗರದ ಹಾಗೂ ಜೆಡಿ(ಯು)ನ ಶಂಕರ ಪಾಟೀಲ ಮುನೇನಕೊಪ್ಪ – ಹೀಗೇ ದೊಡ್ಡದೊಂದು ಹಿಂಡು ಇವನಿಗೆ ಸಾಥ್ ನೀಡಿದ್ದರಿಂದ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಕೆ.ಎನ್. ಗಡ್ಡಿ ಮೂಲೆಗುಂಪಾಗಿ ಶಿರಿಯಣ್ಣನವರ್ ಗೆದ್ದೂಬಿಟ್ಟ.

ಶಾಸಕನ ಗಾದಿಗೆ ಏರಿದ್ದೇ ತಡ, ತನಗೆ ಬೆಂಬಲವಾಗಿ ನಿಂತವರನ್ನೆಲ್ಲಾ ಒದ್ದು ದೂರ ಇಟ್ಟು ತನ್ನ ಅಳಿಯ ಕಿರಣ ಪಾಟೀಲ ಹಾಗೂ ಮಗ ಸತೀಶ್ ಶಿರಿಯಣ್ಣನವರನ್ನು ಕಟ್ಟಿಕೊಂಡು ನವಲಗುಂದವನ್ನು ಒಂದು ಕಡೆಯಿಂದ ಮುಕ್ಕಲಾರಂಭಿಸಿದ. ನೋಡುನೋಡುತ್ತಿದ್ದಂತೆ ಧಾರವಾಡದಲ್ಲಿ ಎರಡು ಮನೆ, ಬೆಂಗಳೂರಿನಲ್ಲಿ ಒಂದೂವರೆ ಕೋಟಿ ರೂಪಾಯಿ ಮೌಲ್ಯದ ಒಂದು ಬಂಗಲೆ ಎಬ್ಬಿಸಿದ; ಮಗ ಸತೀಶ್ ಶಿರಿಯಣ್ಣನವರನ್ನು ಕೆ.ಎಂ.ಎಫ್‌ನ ರಾಜ್ಯ ನಿರ್ದೇಶಕನನ್ನಾಗಿ ಮಾಡಿದ; ಸಾಕಾಗಲಿಲ್ಲವೆಂಬಂತೆ ಅವನನ್ನೇ ಶಿಕ್ಷಣ ಮಂಡಳಿಯಲ್ಲಿ ಮೆಂಬರ್ ಮಾಡಿ ಕೂಡ್ರಿಸಿದ.

ಇನ್ನೊಂದೆಡೆ, ಸರ್ಕಾರಿ ಅಧಿಕಾರಿಗಳ ವರ್ಗಾವಣೆಯನ್ನೇ ದುಡ್ಡು ಕಮಾಯಿಸುವ ದೊಡ್ಡ ದಂಧೆಯನ್ನಾಗಿ ಮಾಡಿಕೊಂಡ. ಉದಾಹರಣೆಯಾಗಿ ಹೇಳಬೇಕೆಂದರೆ, ಇವನ ಅವಧಿಯಲ್ಲಿ ನಾಲ್ಕು ಜನ ಸರ್ಕಲ್ ಇನ್ಸ್‌ಪೆಕ್ಟರ್‌ಗಳು ಬಂದುಹೋದರು. ಇನ್ನು ಮಾಮೂಲಿಯಾಗಿ ಎಲ್ಲಾ ಎಮ್ಮೆಲ್ಲೆಗಳೂ ಮಾಡುವಂತೆ ತನ್ನ ಕ್ಷೇತ್ರಕ್ಕೆ ಬರುವ ಎಲ್ಲಾ ಕಾಮಗಾರಿಗಳ ಕಂಟ್ರಾಕ್ಟ್‌ಗಳನ್ನು ಕಂಠತುಂಬ ಕಮೀಶನ್ ತಿಂದು ಕಂಡಕಂಡವರಿಗೆಲ್ಲಾ ಬೇಕಾಬಿಟ್ಟಿಯಾಗಿ ಹಂಚಿದ. ಅದರಲ್ಲೂ, ತನ್ನ ಶಿಷ್ಯ ನರಗುಂದ ಎಂಬುವವನು ಅತೀ ಹೆಚ್ಚು ಕಮೀಶನ್ ಕೊಡುತ್ತಿದ್ದುದರಿಂದ ಹೆಚ್ಚಿನ ಕಾಂಟ್ರಾಕ್ಟ್‌ಗಳೆಲ್ಲವೂ ಅವನ ಪಾಲಾದವು. ಹೀಗಾಗಿಯೇ ಕ್ಷೇತ್ರದಲ್ಲಿ ನಡೆದ ಎಲ್ಲಾ ಸರ್ಕಾರಿ ಕಾಮಗಾರಿಗಳು ಅಧೋಗತಿಗಿಳಿದು ಹಾಳಾಗಿ ಹೋಗಿವೆ.

ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ನವಲಗುಂದವನ್ನು ಶಿರಿಯಣ್ಣನವರ್ ಕೊಳ್ಳೆ ಹೊಡೆದಷ್ಟು ಈ ಹಿಂದಿನ ಯಾವ ಶಾಸಕರೂ ಹೊಡೆದಿಲ್ಲ ಎಂದರೆ ಪ್ರಾಯಶಃ ಅತಿಶಯೋಕ್ತಿಯಾಗಲಾರದು. ಇದನ್ನೆಲ್ಲಾ ಕಣ್ಣಾರೆ ನೋಡಿರುವ ಜನ ಈ ಬಾರಿಯ ಚುನಾವಣೆಯಲ್ಲಿ ಇವನಿಗೆ ಮನೆದಾರಿ ತೋರಿಸುವುದು ಗ್ಯಾರಂಟಿ.



ಬಸವರಾಜ ಬೊಮ್ಮಾಯಿ

ಮೊನ್ನೆ ಯಡ್ಡಿ ಹುಬ್ಬಳ್ಳಿ ಜನಜಾಗೃತಿ ಸಭೆಗೆ ಬರುತ್ತಿದ್ದಾಗ ಜನ ನವಲಗುಂದ ಬಿಟ್ಟು ಹೊರಹೋಗದಂತೆ ಘೇರಾವ್ ಮಾಡಿ 'ಈ ಬಾರಿ ಶಿರಿಯಣ್ಣನವರಿಗೆ ಟಿಕೆಟ್ ಕೊಡಬೇಡಿ, ಶಂಕರ ಪಾಟೀಲ್ ಮುನೇಕೊಪ್ಪನಿಗೆ ಕೊಡಿ, ಶಿರಿಯಣ್ಣನವರಿಗೆ ಕೊಟ್ಟರೆ ಸೋಲಿಸಿಯೇ ತೀರುತ್ತೇವೆ' ಎಂದು ಗಲಾಟೆ ಮಾಡಿದ್ದಾರೆ. ಅವರಿಗೆಲ್ಲಾ ಸಮಜಾಯಿಷಿ ನೀಡಿ ಅಲ್ಲಿಂದ ಹೊರಡುವಷ್ಟರಲ್ಲಿ ಯಡ್ಡಿಗೆ ಸಾಕುಸಾಕಾಗಿ ಹೋಗಿದೆ. ಇನ್ನು ಕೆಲವರಂತೂ ಯಡ್ಡಿಯನ್ನು ಹುಬ್ಬಳ್ಳಿ ತನಕ ಬೆನ್ನುಹತ್ತಿಕೊಂಡು ಬಂದು ತಲೆ ತಿಂದಿದ್ದಾರೆ.

ಶಿರಿಯಣ್ಣನವರ್ ಯಡ್ಡಿಯ ಶಿಷ್ಯ ಆದರೆ ಕ್ಷೇತ್ರದ ಜನಗಳಿಗೆ ಅವನು ಬೇಡ. ಒಟ್ಟಿನಲ್ಲಿ ಯಡ್ಡಿ ಧರ್ಮಸಂಕಟಕ್ಕೀಡಾಗಿದ್ದಂತೂ ಸತ್ಯ. ಕೊನೆಗೆ 'ಶಂಕರ ಪಾಟೀಲ ನಮ್ಮ ಪಕ್ಷದವರಲ್ಲ, ನಿಮಗೆ ಶಿರಿಯಣ್ಣನವರ ಬೇಡ ಅಂದರೆ ನಾನೇ ಬಂದು ಸ್ಪರ್ಧಿಸುತ್ತೇನೆ' ಎಂದು ಹೇಳಿ ಅಲ್ಲಿಂದ ಕಾಲ್ಕಿತ್ತಿದ್ದಾನೆ ಯಡ್ಡಿ.

ಈಗಿನ ರಾಜ್ಯ ಬಿಜೆಪಿ ಘಟಕದ ರೈತ ಮೋರ್ಚಾದ ಅಧ್ಯಕ್ಷ ಈಶ್ವರಚಂದ್ರ ಹೊಸಮನಿ 1985ರಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಸೋತಿದ್ದರು. ನಂತರದ ದಿನಗಳಲ್ಲಿ ಬಾಬಾಗೌಡ ಪಾಟೀಲ್ ಜೊತೆ ಸೇರಿ ರೈತ ಚಳವಳಿಯಲ್ಲಿ ಓಡಾಡಿಕೊಂಡಿದ್ದರು. ಈಗ ಮತ್ತೆ ನವಲಗುಂದ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸುವ ತಯಾರಿಯಲ್ಲಿದ್ದಾರೆ. ಬಿಜೆಪಿಯ ಟಿಕೆಟ್ಟು ಶಿರಿಯಣ್ಣನವರಿಗೆ ಹೋಗುತ್ತೋ, ಈಶ್ವರಚಂದ್ರರಿಗೆ ಹೋಗುತ್ತೋ ನೋಡಬೇಕು.

[illegible] ಬೊಮ್ಮಾಯಿ [illegible]

ಬಿಜೆಪಿಯಲ್ಲಿ ಟಿಕೆಟ್‌ಗಾಗಿ ಕಚ್ಚಾಟ ಹೆಚ್ಚಾಗುತ್ತಿರುವ ಸಂದರ್ಭದಲ್ಲಿಯೇ ಮತ್ತೊಂದು ರಾಜಕೀಯ ಬೆಳವಣಿಗೆಯೂ ಶುರುವಾಗಿದೆ. ಕಳಸಾ-ಬಂಡೂರಿ ಯೋಜನೆಯ ಜಾರಿಗಾಗಿ ನಡೆಯುತ್ತಿರುವ ಹೋರಾಟದಲ್ಲಿ ಗುರುತಿಸಿಕೊಂಡಿರುವ ಜೆಡಿ(ಯು)ನ ಬಸವರಾಜ್ ಬೊಮ್ಮಾಯಿ ಬಿಜೆಪಿಯತ್ತ ಬರುತ್ತಿರುವ ಸೂಚನೆಗಳು ಸ್ಪಷ್ಟವಾಗಿ ಕಾಣುತ್ತಿವೆ. ಅವರೊಂದಿಗೆ ಗುರುತಿಸಿಕೊಂಡಿರುವ ರೈತ ಮುಂದಾಳು ಶಿಷ್ಯ ಶಂಕರ ಪಾಟೀಲ, ಮುನೇಕೊಪ್ಪ ಕೂಡ ಬರಲಿದ್ದಾರೆ. ಈಗಾಗಲೇ ಈ ಭಾಗದ ಬಿಜೆಪಿ ಮುಖಂಡರು, ರೈತ ನಾಯಕರು, ವೀರಶೈವ ಮುಖಂಡರು ಶಂಕರ ಪಾಟೀಲಗೆ ಬಿಜೆಪಿ ಸೇರುವಂತೆ ದುಂಬಾಲು ಬಿದ್ದಿದ್ದಾರೆ.

ಈ ಬೆಳವಣಿಗೆಗಳು ವಾಸ್ತವದಲ್ಲಿ ಯಡ್ಡಿಯನ್ನು ಬೆಚ್ಚಿಬೀಳಿಸಿವೆ. ಏಕೆಂದರೆ, ಬೊಮ್ಮಾಯಿ, ಶಂಕರ ಪಾಟೀಲರೇನಾದರೂ ಬಿಜೆಪಿಗೆ ಬಂದರೆ ಈಗಾಗಲೇ ವರ್ಚಸ್ಸನ್ನು ಕಳೆದುಕೊಂಡಿರುವ ಶಿರಿಯಣ್ಣನವರಿಗೆ ಟಿಕೆಟ್ ನಿರಾಕರಿಸಿ ಶಂಕರ ಪಾಟಲರಿಗೆ ಕೊಡಬೇಕಾಗುತ್ತದೆ. ಆಗ ತನ್ನ ಶಿಷ್ಯ ಶಿರಿಯಣ್ಣನವರ ಕತೆ ಏನು ಎಂಬುದು ಯಡ್ಡಿಯ ಚಿಂತೆ. ಇನ್ನೂ ಒಂದು ವಿಚಾರ ಏನೆಂದರೆ, ಟಿಕೆಟ್ ಸಿಗದಿದ್ದರೆ ಸ್ವತಂತ್ರವಾಗಿ ಸ್ಪರ್ಧಿಸುವ ತಯಾರಿಯನ್ನೂ ಶಂಕರ ಪಾಟೀಲ ನಡೆಸಿದ್ದಾರೆ.

ಅದೇನೇ ಇದ್ದರೂ ಶಿರಿಯಣ್ಣನವರ್ ಮುಂದಿನ ಬಾರಿ ಶಾಸಕನಾಗುವುದು ಕನಸಿನ ಮಾತು. ಏಕೆಂದರೆ ಆತ ಕ್ಷೇತ್ರದ ಜನಕ್ಕೂ ಬೇಡವಾಗಿದ್ದಾನೆ, ಪಕ್ಷದೊಳಗಿರುವ ಕಾರ್ಯಕರ್ತರಿಗೂ [illegible]. ಆತ ಬೇಕಿರುವುದು ಕೇವಲ ಯಡ್ಡಿಗೆ ಮಾತ್ರ.

– [illegible]

ಎಲ್ಲಣ್ಣನ ನರಸಿಂಹಾವತಾರ!



ಒಂದು ದಿನ 'ಬ್ರಹ್ಮ ಒಬ್ಬ ದೊಡ್ಡ ಕಂತ್ರಿ' ಅನ್ನೋ ಒಂದು ಕಥೆ ಹೇಳಿದ. ಬ್ರಹ್ಮ ಒಂದು ನಾಟಕ ಬರೆದು ದೇವರುಗಳಿಗೆ ಕೊಟ್ಟ. ಅದು ಸುರಾಸುರರ ಪುರಾಣ. ನಾಟಕ ಶುರುವಾಯಿತು. ಅದನ್ನು ನೋಡ್ತಾ ಇದ್ದವರಲ್ಲಿ ದೇವತೆಗಳೂ ಮತ್ತು ರಾಕ್ಷಸರೂ ಇದ್ದರು. ಸುರರು ಅಂದರೆ ದೇವರುಗಳು. ಅಸುರರು ಅಂದರೆ ರಾಕ್ಷಸರು. ಅಂತ ಅರ್ಥ ಹೇಳಿ ಮತ್ತೆ ಕಥೆ ಹೇಳ್ತಿದ್ದ ನಾಗಣ್ಣ. ಅವನು ಹಾಗೆ ಹೇಳೋದರಲ್ಲಿ ಈ ಪದಗಳಿಗೆಲ್ಲಾ ಅರ್ಥ ಪಂಡಿತರಿಗೆ ಮಾತ್ರ ಅಲ್ಲ, ನನಗೂ ಗೊತ್ತು ಅನ್ನೋ ಗತ್ತು ಕಾಣಿಸ್ತಿತ್ತು.

ನಾಟಕ ಅರ್ಧ ಮುಗಿದಿತ್ತು. ಅಷ್ಟರಲ್ಲಿ ಪ್ರೇಕ್ಷಕರ ನಡುವೆ ಎಲ್ಲೋ ಗೊಂದಲ ಶುರುವಾಯಿತು. ಅಲ್ಲಿದ್ದ ರಾಕ್ಷಸರಿಗೆ ಸಹಿಸಲಾಗ್ತಿರಲಿಲ್ಲ. ನಾಟಕದಲ್ಲಿ ತಮಗೆಲ್ಲಾ ದೊಡ್ಡ ಮೋಸ ನಡೀತಿದೆ. ಬ್ರಹ್ಮ ಲೇಖಕನಾಗಿ ಏನೋ ಕುತಂತ್ರ ನಡೆಸಿದ್ದಾನೆ. ನಿರ್ದೇಶಕನಾಗಿ ದೇವತೆಗಳ ಪಕ್ಷ ವಹಿಸಿದ್ದಾನೆ. ದೇವರುಗಳೆಲ್ಲಾ ಗೆದ್ದು ರಾಕ್ಷಸರು ಸೋಲುತ್ತಿದ್ದಾರೆ. ರಾಕ್ಷಸರ ಸಹನೆ ಕಟ್ಟೆ ಒಡೆಯಿತು. ಅವರು ತಿರುಗಿ ಬಿದ್ದರು. ಸಿಕ್ಕಸಿಕ್ಕ ದೇವತೆಗಳನ್ನೆಲ್ಲಾ ಚೆನ್ನಾಗಿ ಚಚ್ಚಿದರು. ಅವರು ದೌಡೋ ದೌಡು. 'ಎಲ್ಲಣ್ಣಾ! ಈ ಬ್ರಹ್ಮ ಇದಾನಲ್ಲಾ ಇವನೊಬ್ಬ ದೊಡ್ಡ ಕಂತ್ರಿ. ರಾಕ್ಷಸರೆಲ್ಲಾ ಹೀಗೆ ಹೊಡೀತಿದ್ರೆ ಅವನೂ ಓಡೋದಕ್ಕೆ ಶುರುಮಾಡಿದ. ಉಟ್ಟಿದ್ದ ಪಂಚೆ ಉದುರಿಹೋಗ್ತಿತ್ತು. ಓಡಿ, ಓಡಿ, ಭೂಮಿ ಮೇಲೆ ಬಿದ್ದ. ಗಂಗೆಯ ದಡದಲ್ಲಿ ಚೆಂಬು ತಗೊಂಡು ಹೊರಟ. ಗಂಗೆ ಸುಮ್ಮನಿರ್ತಾಳಾ!.... ಯಾರವಳು? ಯಾರತಾಯಿ? ನಮ್ಮ ತಾಯಿ! ತಮಟೆಯವರ ತಾಯಿ! ಅವಳು ಹೇಳಿದಳು. ಬ್ರಹ್ಮಾ! ನನ್ನ ಒಡ್ಲಲ್ಲಿ ಈ ಗಲೀಜು ಕೆಲಸ ಮಾಡಬೇಡ. ಇಷ್ಟೇ ಅಲ್ಲ ನಿಮ್ಮ ಋಷಿಗಳೆಲ್ಲಾ ನನ್ನ ಹಾಳು ಮಾಡ್ತಿದ್ದಾರೆ. ಅವರನ್ನ ಇಲ್ಲಿಂದ ಕರಕೊಂಡು ನಡಿ' ಅಂದಳು. ಬ್ರಹ್ಮನಿಗೆ ಏನೂ ಅರ್ಥವಾಗಲಿಲ್ಲ, ಕಣ್ಣು ಕಣ್ಣು ಬಿಟ್ಟ. ಗಂಗೆ ತನ್ನ ಸಾವಿರದೊಂದು ಗಂಡು ಮಕ್ಕಳನ್ನ, ಸಾವಿರದೊಂದು ಹೆಣ್ಣು ಮಕ್ಕಳನ್ನ ಕರೆದಳು. ಗಂಡು ಮಕ್ಕಳೆಲ್ಲಾ ಜೇನು ಹಿಂಡ್ತಾ ಇದ್ದರೆ, ಹೆಣ್ಣು ಮಕ್ಕಳು ಗೆಡ್ಡೆಗೆಣಸು ಆಯ್ತಾ ಇದ್ದರು. ತಾಯಿಯ ದನಿ ಕೇಳಿಸಿದ ತಕ್ಷಣ ಎಲ್ಲರೂ ಎಲ್ಲಿದ್ದ ಕೆಲಸ ಅಲ್ಲೇ ಬಿಟ್ಟು ಅವಳ ಮುಂದೆ ಪ್ರತ್ಯಕ್ಷವಾದರು. ತಾಯೀ! ನಿನಗೆ ಸಾವಿರ ಸಾವಿರ ನಮಸ್ಕಾರ ಅಂದರು. ನಮ್ಮನ್ನು ಕರೆದ ಕಾರಣವೇನು ಅಂತ ಕೇಳಿದರು.

ಆಗ ತನ್ನ ಮಕ್ಕಳನ್ನೆಲ್ಲಾ ನೋಡಿದಳು ಗಂಗೆ. ಅವಳ ಕಣ್ಣು ತುಂಬಾ ನೀರು. ಮಕ್ಕಳು ಅಲ್ಲಾಡಿಹೋದರು. ತಾಯಿಯ ದುಃಖ ತಮ್ಮದೇ ದುಃಖ ಅಂದರು. ಅಮ್ಮಾ, ಬಾರಮ್ಮಾ! ಓ ಗಂಗಮ್ಮ. ನೀ ಶುದ್ಧ ಅಪರಂಜಿ, ನೀ ಚಿನ್ನದ ಗೊಂಬೆ. ನಿನ್ನ ಮಡಿಲಿನ ಮಕ್ಕಳು ನಾವೆಲ್ಲಾ. ಅದು ಏನು ಹೇಳಮ್ಮಾ! ಎಲ್ಲರೂ ತಾಯಿಯನ್ನ ಬೇಡಿದರು. ತಾಯಿ ಕರಗಿಹೋದಳು. ಝರಿಯಾಗಿ ಹರಿದಳು. ಮಕ್ಕಳ ಮೈಗಳನ್ನ ತಡವಿದಳು. ಅವರ ಗಂಟಲಿನ ದಾಹ ತೀರಿಸಿದಳು. ಈ ಎಲ್ಲಾ ಕೆಟ್ಟ ಪಂಡಿತರನ್ನ ನನ್ನ ಹತ್ತಿದಿಂದ ದೂರ ಅಟ್ಟಿ ಅಂದಳು. ಗಂಗೆಯ ಮಕ್ಕಳು ಬ್ರಹ್ಮನನ್ನ, ಅವನ ಋಷಿಗಳನ್ನ ಮೂರು ಲೋಕಗಳಲ್ಲಿ ಸುತ್ತಾಡಿಸಿದರು. ದೂರ ಓಡಿಸಿ ಮತ್ತೆ ಬಂದು ತಾಯಿಯ ಮುಂದೆ ನಿಂತರು. ಮಕ್ಕಳನ್ನ ನೋಡಿದ ಗಂಗೆ ಈಗ ಪ್ರವಾಹವಾದಳು. ಅದರಲ್ಲಿಂದ ಒಂದು ಸೀಳು ಸಮುದ್ರದಲ್ಲಿ ಸೇರಿತು. ಮತ್ತೊಂದು ಸೀಳು ಹೊಲಗಳಿಗೆಲ್ಲಾ ನೀರುಣಿಸಿತು. ಗಂಗೆ ಶಾಂತಿಸಿದಳು. ಆದರೆ ಆಗ ಓಡಿ ಹೋದ ಪಂಡಿತರೆಲ್ಲಾ ಒಂದಾದರು. ಅವರ ನಾಟಕಕ್ಕೆ ಪರದೆ ಕಟ್ಟಿದರು. ಸುತ್ತಲೂ ಡೇರೆ ಹೊಡೆದರು. ಗುಡಿಯ ಬಾಗಿಲು ಮುಚ್ಚಿ ಸುರಾಸುರ ಪುರಾಣ ನಾಟಕ ಮತ್ತೆ ಆಡಿದರು. ಈಗಲಾದರೂ ತಿಳೀತಾ? ಅವರು ಜನರ ನಡುವೆ ನಾಟಕ ಆಡೋ ಎದೆಗಾರಿಕೆ ಇಲ್ಲದ ಜನ. ಆದ್ರೆ ನಾವು! ನಾವು ಹಾಗಲ್ಲ, ನಮ್ಮ ಕುಣಿತ ಏನಿದ್ರೂ ಜನರ ನಡುವೇನೇ! ಜನರ ಮುಂದೇನೇ! ಬಂಗಾರಕ್ಕ ಕುಣೀಲೀ, ಕೋಡಂಗಿ ಹಾಸ್ಯ ಮಾಡಲಿ, ನರಸಿಂಹ ಸ್ವಾಮಿ ಬೇಟೆಗೆ ಹೋಗಲಿ, ಎಲ್ಲಾ ಜನರ ಎದುರಿನಲ್ಲೇ ಆಗಬೇಕು.

ಚಂದ್ರಪ್ಪ ತನಗೆ ಹೇಳಿದ ಪುರಾಣದ ಕಥೆಗಳನ್ನೆಲ್ಲಾ ನಾಗಣ್ಣ ಎಲ್ಲಣ್ಣನಿಗೆ ಹೇಳ್ತಿದ್ದ. ಚಂದ್ರಪ್ಪನ ಥರಾನೇ ಅರ್ಥ ಆಯಿತಾ ಅಂತ ಕೇಳ್ತಿದ್ದ. ಮಾತು ಇಷ್ಟೇ, ಆದರೆ ಬಗೀತಾ ಹೋದ್ರೆ ಅದೆಷ್ಟೋ ಆಳ ಅಂತಿದ್ದ. ಬಗೀಬೇಕು, ಮಣ್ಣು ತೆಗೀಬೇಕು ಅಂತಿದ್ದ. ಎಲ್ಲಣ್ಣ ಒಂದು ಮಾತನ್ನೂ ಬಿಡದೆ ಮೈಯೆಲ್ಲಾ ಕಣ್ಣಾಗಿ ನೋಡ್ತಿದ್ದ ಮೈಯೆಲ್ಲಾ ಕಿವಿಯಾಗಿ ಕೇಳ್ತಿದ್ದ. ಮನಸ್ಸಿಟ್ಟು ಕೇಳ್ತಿದ್ದ ಗುಂಡಿ ತೆಗೆಯೋದಾಗಲಿ, ಮತ್ತೆ ಮುಚ್ಚೋದಾಗಲಿ ಅಷ್ಟೇನೂ ಕಷ್ಟದ ಕೆಲಸ ಅಂತ ಅನ್ನಿಸಲಿಲ್ಲ ಅವನಿಗೆ.

ಒಂದು ರಾತ್ರಿ ತಿಂಗಳ ಬೆಳಕು ಭೂಮಿ ಮೇಲೆಲ್ಲಾ ಸುರಿದಿತ್ತು. ಎನ್ನೆಲದಿನ್ನೆ ಮರಳಿನ ದಿಬ್ಬದ ಮೇಲೆ ಆಟದ ಗುಂಪು ಕೂತಿತ್ತು. ನಾಗಣ್ಣ ಎಲ್ಲರಿಗೂ ಚೆಂಚು ಲಕ್ಷ್ಮಿ ನಾಟಕ ಹೇಳಿಕೊಡ್ತಿದ್ದ. ಯಾರಿಗೂ ಪುಸ್ತಕ ಬೇಕಿರಲಿಲ್ಲ, ಇದ್ದಿದ್ರೂ ಉಪಯೋಗವೂ ಇರ್ತಿರಲಿಲ್ಲ. ನಾಗಣ್ಣ ಯಾವ ಮಾತು ಹೇಳಿದರೆ ಅದೇ ನಾಟಕದ ಮಾತು. ಅದನ್ನೇ ಅವರು ಕಲೀಬೇಕು. ಗಟ್ಟಿ ಮಾಡಬೇಕು. ಬೆಳಗೆಲ್ಲಾ ದುಡಿತ. ರಾತ್ರಿ ಹೊತ್ತು ನಾಟಕದ ಪಾಠ. ಎರಡು ತಿಂಗಳಲ್ಲಿ ಎಲ್ಲರಿಗೂ ನಾಟಕ ಚೆನ್ನಾಗಿ ಗೊತ್ತಾಯಿತು. ಮಾತುಗಳು ಬಾಯಿಗೆ ಬರ್ತಿದ್ದವು. ಎಲ್ಲರೂ ಎಲ್ಲಾ ಪಾತ್ರಾನೂ ಮಾಡೋದಕ್ಕೆ ಸಿದ್ಧವಾಗಿರ ಬೇಕು. ಮಾತು ಕಲಿತ ನಂತರ ಕುಣಿತ. ಅದಕ್ಕೊಂದು ತಿಂಗಳು. ಒಟ್ಟಿಗೆ ಮೂರು ತಿಂಗಳಿನಲ್ಲಿ ಒಂದು ನಾಟಕ ತಯಾರಾಗಿತ್ತು.

ಮೊದಲು ಎಲ್ಲಣ್ಣನಿಗೆ ಚೆಂಚುಲಕ್ಷ್ಮಿ ಆಗು ,ಅಂತ ಹೇಳಿದ್ದ ನಾಗಣ್ಣ. ಆದರೆ, ನರಸಿಂಹ ದೇವರ ಪಾತ್ರಕ್ಕೆ ಯಾರೂ ಸರಿಯಾದವರು ಸಿಗಲಿಲ್ಲ. ಎಲ್ಲಣ್ಣ ಆ ಪಾತ್ರ ಮಾಡಿದ. ಮಾಡಿದ್ದಷ್ಟೇ ಅಲ್ಲ ಮುಂದೆ ಆ ಸುತ್ತಮುತ್ತಲ ಹಳ್ಳಿಗಳಲ್ಲಿ ನರಸಿಂಹ ಸ್ವಾಮಿ ಅಂದರೆ ಎಲ್ಲಣ್ಣನೇ ಆಗಬೇಕು ಅನ್ನೋ ಅಷ್ಟು ಹೆಸರುವಾಸಿಯಾದ.

ಎನ್ನೆಲದಿನ್ನೆ ಕೇರಿ ಜನ ಚೆಂಚುಲಕ್ಷ್ಮಿ ಆಟ ಆಡ್ತಿದಾರೆ ಅನ್ನೋ ವಿಷಯ ಎಲ್ಲಾ ಕಡೆ ಗೊತ್ತಾಯಿತು. ಊರಿನಲ್ಲಿ ಅದೊಂದು ವಿಚಿತ್ರವಾದ ಸಂಗತಿಯಾಯಿತು. ದೊಡ್ಡವರ ಮನೆಗೆ ಕೆಲಸಕ್ಕೆ ಹೋದವರ ಹತ್ತಿರ ಲೇವಡಿ ಮಾತಾಯಿತು. ಚಾವಡಿಯಲ್ಲಿ ದೊಡ್ಡ ಚರ್ಚೆಗೆ ಗ್ರಾಸವಾಯಿತು.


ಒಡೆದು ಓದುವ ಬಗೆ... ಹೇಗೆ?

ಕನ್ನಡದ ಓದುಗರಿಗೆ ಆಶೀಶ್ ನಂದಿಯವರ ವಿಚಾರಸರಣಿ ಪರಿಚಿತವಾದದ್ದು. ಇವರ ದೇಸೀಯ ಪರಂಪರೆಗಳ ಅಧ್ಯಯನ, ಆಧುನಿಕ-ಆಧುನಿಕೋತ್ತರ ಆಲೋಚನಾಕ್ರಮಗಳ ವಿಮರ್ಶೆಗಳು ದಿವಂಗತ ಡಿ.ಆರ್. ನಾಗರಾಜ್‌ರಿಂದ ಹಿಡಿದು ಇತ್ತೀಚಿನ ಚಿಂತಕ, ಲೇಖಕರವರೆಗೆ ಸಾಕಷ್ಟು ಮೂಲಗಳಿಂದ ಪರಿಚಯಿಸಲ್ಪಟ್ಟಿವೆ. ಅಕ್ಷರ ಪ್ರಕಾಶನ ಹೊರತಂದಿರುವ ಆಶೀಶ್ ನಂದಿ ಮತ್ತು ವಿನಯ್ ಲಾಲ್ ಸಂಪಾದಿಸಿರುವ "ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು" ಕನ್ನಡಕ್ಕೆ ಇವರ ವಿಚಾರಧಾರೆಗಳ ಮತ್ತೊಂದು ಸೇರ್ಪಡೆ.

ಈ ಪುಸ್ತಕದ ಮೂಲ ಉದ್ದೇಶ ಅಕ್ಷರ ಪ್ರಕಾಶನದ ಕೆ.ವಿ. ಅಕ್ಷರ ಹೇಳುವಂತೆ "ಸಿದ್ಧ ಯೋಚನಾಕ್ರಮಗಳ ವಿಮರ್ಶೆ". 'ಅಣ್ವಸ್ತ್ರಪರವಾದ', 'ಅಭಿವೃದ್ಧಿ', 'ಬಡತನ', 'ಪ್ರಜಾಪ್ರಭುತ್ವ'ದಿಂದ ಹಿಡಿದು 'ಕೋಕ ಕೋಲ', 'ಸಕ್ಕರೆ', 'ಯಾಹೂ', 'ಬಾಲೀವುಡ್' ವರೆಗೆ ಹತ್ತುಹಲವು ವೈವಿಧ್ಯಮಯ ವಿಷಯಗಳನ್ನು ಎರಡು-ಮೂರು ಪುಟದಷ್ಟು ಸಣ್ಣ ಲೇಖನಗಳ ಮೂಲಕ ಪರಿಚಯಿಸುತ್ತಾ ಇವೆಲ್ಲವುಗಳ ಬಗ್ಗೆ ನಮಗಿರುವ ಸಾಮಾನ್ಯಜ್ಞಾನ (ಕಾಮನ್‌ಸೆನ್ಸ್) ಹಿಂದೆ ಒಂದು "ನಿರ್ದಿಷ್ಟ ಸಿದ್ಧಾಂತ" ಹೇಗೆ ಕೆಲಸ ಮಾಡುತ್ತಿರುತ್ತದೆ ಎಂಬುದನ್ನು ವಿವಿಧ ಲೇಖಕರು ಇಲ್ಲಿ ಅನಾವರಣಗೊಳಿಸುತ್ತಾರೆ.

"ಈ ಕೋಶವು ನಮ್ಮ ಕಾಲ ದೇಶಗಳ ಕೆಲವು ಮುಖ್ಯ ಪದ-ಪದಾರ್ಥ-ಪರಿಕಲ್ಪನೆ-ಪ್ರಕ್ರಿಯೆಗಳ ಕಥೆಯನ್ನು ಹೇಳುತ್ತಲೇ ಜತೆಜತೆಗೆ ಅವುಗಳ ಹಿಂದಿನ ಸೂಕ್ಷ್ಮ ಸಾಂಸ್ಕೃತಿಕ ರಾಜಕಾರಣಗಳನ್ನು ಅನಾವರಣಗೊಳಿಸುತ್ತದೆ." ಈ ರೀತಿಯ ಪ್ರಯತ್ನದ ತುರ್ತಿನ ಬಗ್ಗೆ ಅಕ್ಷರ ಹೀಗೆ ಹೇಳುತ್ತಾರೆ: "ಇವತ್ತಿನ ಸನ್ನಿವೇಶದಲ್ಲಿ ಈ ಆಧುನಿಕ ಅಭಿವೃದ್ಧಿ ಮೀಮಾಂಸೆಯನ್ನು ವಿಮರ್ಶೆಗೆ ಒಳಪಡಿಸುವುದು ಕೇವಲ ಶೈಕ್ಷಣಿಕ ಅಧ್ಯಯನದ ವಿಚಾರವಲ್ಲ; ಇದೊಂದು ರಾಜಕೀಯ ಕಾರ್ಯಶೀಲತೆಯ ಮಾರ್ಗವೂ ಹೌದು."

ಈ ಸಂಕಲನದಲ್ಲಿ ಗುಸ್ತವೊ ಎಸ್ತೆವಾ, ಡಗ್ಲಾಸ್ ಲೆಮ್ಮಿಂಗ್, ಜಿಯಾವುದ್ದೀನ್ ಸರ್ದಾರ್- ಹೀಗೆ ಅನೇಕ ಲೇಖಕರು ನಾವು ದಿನನಿತ್ಯ ಬಳಸುವ ವಸ್ತುಗಳನ್ನು, ಮಾಧ್ಯಮಗಳ ಮೂಲಕ ಮತ್ತೆ ಮತ್ತೆ ಕೇಳುವ ವಿಚಾರಗಳನ್ನೇ ಎತ್ತಿಕೊಂಡು ಅವುಗಳನ್ನು ಜಡಗಟ್ಟಿದ ಯೋಚನಾಕ್ರಮದಿಂದಾಚೆಗೆ ಒಯ್ದು ವಿಮರ್ಶಿಸುತ್ತಾರೆ. ಜ್ಞಾನ ಮತ್ತು ಸಂಸ್ಕೃತಿಗಳನ್ನು ನಮ್ಮ ನಗರೀಕೃತ, ಮಧ್ಯಮವರ್ಗೀಯ ಚೌಕಟ್ಟುಗಳಿಂದಾಚೆಗಿಟ್ಟು ಓದುವ ಕ್ರಮಗಳನ್ನು ತೋರಿಸಿಕೊಡುತ್ತಾರೆ.



ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು

ವಿನಯ್ ಲಾಲ್ ಮತ್ತು ಆಶೀಶ್ ನಂದಿ ಸಂಪಾದಿಸಿರುವ ಪರಿಭಾಷಾಕೋಶ,

ಅಕ್ಷರ ಪ್ರಕಾಶನ, ರೂ. 160

ಈ ಬಗೆಯ ಸಾಮಾನ್ಯ ಗ್ರಹಿಕೆಗಳನ್ನು ಭಂಜಿಸಿ ಓದುವ ಕ್ರಮ ಅಗತ್ಯವಾದದ್ದು ಎನ್ನುವುದು ಒಪ್ಪಲೇಬೇಕಾದ ಮಾತು. ಆದರೆ ಈ ಭಂಜನೆಗಾಗಿ ನಾವು ಯಾವ ಪರಿಕರಗಳನ್ನು ಬಳಸುತ್ತೇವೆ ಅಥವಾ ಭಂಜನೆಯ ನಂತರ ನಾವು ಆ ಖಾಲಿ ಜಾಗದಲ್ಲಿ ಯಾವ ಮೂರ್ತಿಯನ್ನು ಅಥವಾ ಅಮೂರ್ತವನ್ನು ಸ್ಥಾಪಿಸುತ್ತೇವೆ ಎಂಬಲ್ಲಿ ಯಾವತ್ತೂ ಒಮ್ಮತ ಇರುವುದಿಲ್ಲ. ಅಭಿವೃದ್ಧಿ ಮೀಮಾಂಸೆಯನ್ನು ವಿಮರ್ಶೆಗೆ ಒಳಪಡಿಸಿದ ನಂತರದಲ್ಲಿ ನಾವು ನಮ್ಮ "ರಾಜಕೀಯ ಕಾರ್ಯಶೀಲತೆ"ಯ ಹಾದಿಯಾಗಿ ಯಾವುದನ್ನು ಆಯ್ದುಕೊಳ್ಳುತ್ತೇವೆ ಎನ್ನುವುದು ಆದ್ದರಿಂದ ತುಂಬ ಮುಖ್ಯವಾಗುತ್ತದೆ.

ಉದಾಹರಣೆಯಾಗಿ ಫಿಲಿಪ್ ಮ್ಯಾಕ್‌ಮೈಕೆಲ್‌ರ 'ಆಹಾರ' ಲೇಖನವನ್ನು ನೋಡಬಹುದು. ಇವರು ಹೇಳುವ ಭಾರಿ ಬಂಡವಾಳದ ಮಾಂಸಾಹಾರದ ಚೈನುಗಳ ರಾಜಕೀಯ-ಆರ್ಥಿಕವಾಗಿ ನಡೆಸುವ ಏಕಸ್ವಾಮ್ಯ-ದಬ್ಬಾಳಿಕೆಯ ರಾಜಕೀಯದ ಬಗ್ಗೆ ಎರಡು ಮಾತಿಲ್ಲ. ಆದರೆ ಈ ಸಾಲುಗಳನ್ನು ಗಮನಿಸಿ: "ಈ ಹೊತ್ತು ತಾವು ತಮ್ಮ ಶ್ರೀಮಂತಿಕೆಯನ್ನು ತೋರಿಸಿಕೊಳ್ಳಬೇಕಾದರೆ ಪ್ರಾಣಿಮಾಂಸದ ಪ್ರೊಟೀನ್ ಪೋಷಕಾಂಶಗಳನ್ನು ತಿನ್ನುವ ಪದ್ಧತಿಯನ್ನು ಆ ಮೂಲಕ ಪಾಶ್ಚಾತ್ಯ ಊಟೋಪಚಾರದ ಪದ್ಧತಿಯನ್ನು ಅನುಸರಿಸುವುದು ಅಗತ್ಯ ಎಂದು ಪ್ರಪಂಚದ ಎಲ್ಲ ಕಡೆಯಲ್ಲಿಯೂ ಜನರು ಭಾವಿಸುವಂತೆ ಕಾಣುತ್ತಿದೆ. ಅಂದರೆ ಗಂಜಿ-ಅಂಬಲಿ-ಮುದ್ದೆ-ಗೆಡ್ಡೆ ಗೆಣಸುಗಳೇ ನಮ್ಮ ಊಟವಾದ ಸ್ತರದಿಂದ ಕಾಳು-ಅನ್ನಗಳು ಊಟವಾಗುವ ಸ್ತರಕ್ಕೆ ಮತ್ತು ಆ ಸ್ತರದಿಂದ ತರಕಾರಿಗಳೇ ಇಲ್ಲದ ಪ್ರಾಣಿಮಾಂಸದ ಪ್ರೊಟೀನು ಊಟವಾಗುವ ಸ್ತರಕ್ಕೆ ಆಹಾರಸೇವನೆಯ ನಿಚ್ಚಣಿಕೆಯಲ್ಲಿನ ಮೆಟ್ಟಿಲುಗಳನ್ನು ತಾವು ಏರುತ್ತಾ ಹೋಗುವುದು ತಮ್ಮ ಆಧುನಿಕತೆಯ ದೊಡ್ಡ ಗುರುತಾಗಿದೆ ಎಂದು ಜನ ಭಾವಿಸುವಂತಾಗಿದೆ." ನಮ್ಮ ದೇಶದಂತಹ ಜಾತಿಯ ಆಧಾರದ ಮೇಲೆ ಆಹಾರ ಪದ್ಧತಿ ನಿಗದಿಯಾಗುವ, ಆ ಪದ್ಧತಿಗಳಲ್ಲಿ ಸಾತ್ವಿಕ-ತಾಮಸಿಕ ಎಂಬ ಶ್ರೇಣೀಕರಣ, ಮಾಂಸಾಹಾರ 'ಅಸಹ್ಯ', 'ರಾಕ್ಷಸೀಯ' ಎಂದೇ ಪರಿಗಣಿಸಲ್ಪಡುವ ಸಮಾಜದಲ್ಲಿ ಈ ವಾದ ಧ್ವನಿಸುವ ಅರ್ಥಗಳೇ ಬೇರೆ ಎಂದು ಒತ್ತಿ ಹೇಳಬೇಕಾಗಿಲ್ಲ. ನಮ್ಮ ರಾಜ್ಯದಲ್ಲಿ ಇತ್ತೀಚೆಗಷ್ಟೆ ಮಕ್ಕಳಿಗೆ ಮಧ್ಯಾಹ್ನದ ಊಟದಲ್ಲಿ ಮೊಟ್ಟೆ ನೀಡುವುದರ ವಿರುದ್ಧ ಇದ್ದಬದ್ದ ಸ್ವಾಮೀಜಿಗಳೆಲ್ಲ ಒಟ್ಟಾಗಿ ಬೀದಿಗಿಳಿದು ಸರ್ಕಾರದ ನಿರ್ಧಾರವನ್ನೇ ತಡೆಹಿಡಿದಿದ್ದನ್ನು ನೆನೆಯಬಹುದು. ಅದಲ್ಲದೆ ಈಗ ಆರ್ಗಾನಿಕ್ ಊಟ ಒದಗಿಸುವ ಅಂತರರಾಷ್ಟ್ರೀಯ ಚೈನುಗಳೂ ಹುಟ್ಟಿಕೊಂಡಿವೆ, ಸಸ್ಯಾಹಾರ ಮತ್ತು ಅದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿ ಪ್ರಾಣಿಜನ್ಯ ಎಲ್ಲ ಆಹಾರಗಳನ್ನು ವರ್ಜಿಸುವ 'ವೀಗನಿಸಂ' ಫ್ಯಾಷನ್ನಾಗಿದೆ. ಆಹಾರ ಸಂಸ್ಕೃತಿಯ ಈ ಎಲ್ಲ ಮುಖಗಳನ್ನು ಗುರುತಿಸುವುದು ಮತ್ತು ಇವುಗಳ ಹಿಂದಿನ ರಾಜಕೀಯವನ್ನು ವಿಮರ್ಶಿಸುವುದೂ ನಮ್ಮ ಸಂದರ್ಭದಲ್ಲಿ ಅಗತ್ಯವಲ್ಲವೆ?


ಮತ್ತೊಂದು ಉದಾಹರಣೆಯಾಗಿ ಗುಸ್ತವೋ ಎಸ್ತೆವ ಮತ್ತು ಮಧು ಎಸ್. ಪ್ರಸಾದ್‌ರ 'ಶಿಕ್ಷಣ' ಲೇಖನವನ್ನು ನೋಡಬಹುದು. ಇವರು ವಾದಿಸುವಂತೆ ನಮ್ಮ ಶಿಕ್ಷಣ ವ್ಯವಸ್ಥೆ ಬಂಡವಾಳಶಾಹಿ ವ್ಯವಸ್ಥೆಯ ಜೊತೆಜೊತೆಗೆ ಅದಕ್ಕೆ ಪೂರಕವಾಗಿ ಬೆಳೆದು ಬಂದದ್ದು ನಿಜವೇ.

ಊರ ಮೊದಲನೇ ಪ್ರವೇಶ ಎನ್ನೆಲದಿನ್ನೆಯ ಹೊಲಗೇರಿಯಲ್ಲಿ ನಡೀತು. ಎಲ್ಲಣ್ಣ ನರಸಿಂಹಸ್ವಾಮಿ ವೇಷ ಹಾಕಿದ್ದ. ಸುಭದ್ರ ಭೂದೇವಿ, ಚಿನ್ನಮ್ಮಗಳ ನಟುವ ಕುಳಿತು ಎಲ್ಲಣ್ಣನ ಹಾಡುಕೇಳಿ, ಕುಣಿತ ನೋಡಿ ಎಲ್ಲನ್ನು ತಾನೇ ಮರೆತುಬಿಟ್ಟಳು. ಬ್ಯಾಟಿಯ ದಾರಿ ಹಿಡಿದು ಹೋಗಿ ಬರುವಂಥವನಾಗುತ್ತೇನೆ ಎಂದು ನರಸಿಂಹಸ್ವಾಮಿಯಾದ ಎಲ್ಲಣ್ಣ ಹೇಳುತ್ತಿದ್ದರೆ, ಎಂದಾದ್ರೂ ಹೀಗೆ ನನ್ನ ಜೊತೆ ಎಲ್ಲಿಗಾದ್ರೂ ಹೋಗೋ ಮೊದಲು ಹೇಳಿದಾ ಇವನು ಅಂದುಕೊಂಡಳು. 'ಮರವ ಹತ್ತುಬಲ್ಲೆ ... ಚೆಂಚ! ಗುಡ್ಡ ಹತ್ತಬಲ್ಲೆ' - ನರಸಿಂಹಸ್ವಾಮಿ ಚೆಂಚುಲಕ್ಷ್ಮಿಯ ಹತ್ತಿರ ತನ್ನ ಬಗ್ಗೆ ತಾನು ಹೇಳಿಕೊಳ್ಳುತ್ತಿದ್ದರೆ ಎಲ್ಲಾ ಬರೀ ಒಣಜಂಭ! ಎಲ್ಲಿ, ಒಂದು ಹುಣಸೆ ಮರ ಹತ್ತಿ ಹುಣಸೆಗುರು ಕೀಳಲೀ ನೋಡೋಣ ಈ ಎಲ್ಲಣ್ಣ! ಅಂದುಕೊಂಡಳು ಸುಭದ್ರ.

ರಾಯಲಸೀಮೆಯ ಹಳ್ಳಿಗಳಲ್ಲಿ ಈ ಜಾತಿಯ ಜನ ಚೆಂಚುಲಕ್ಷ್ಮಿ ನಾಟಕ ಆಡೋ ವಿಷಯ ಎಲ್ಲರಿಗೂ ಗೊತ್ತಿದ್ದೇ. ಸ್ವಲ್ಪ ಮೇಲಕ್ಕೆ, ಉತ್ತರಕ್ಕೆ ಹೋದರೆ ಅಲ್ಲೂ ಇದೇ ಜನ ಈ ನಾಟಕ ಆಡೋದೂ ಉಂಟು. ತೆಲಂಗಾಣದಲ್ಲಿ ಮಾದಿಗರ ಸಿಂದು ಬಾಗವತ, ಕರಾವಳಿ ರಾಯಲಸೀಮೆ ಗಳಲ್ಲಿ ಹೊಲೆಯರ ಬೀದಿ ಬಾಗವತ ಇವೆಲ್ಲಾ ಕೇಳಿರೋ ಅಂಥವೇ. ಎನ್ನೆಲದಿನ್ನೆಯಲ್ಲಿ ಮಾತ್ರ ಅವೆಲ್ಲಾ ಹೊಸದು. ಹೀಗಾಗಿ ಹತ್ತಿರದ ಕೋಳ್ಳದಿನ್ನೆ, ಪಕ್ಕಲದಿನ್ನೆ, ಚಿಂತಲಗುಂಟದಿಂದ ಮಾತ್ರ ಅಲ್ಲದೆ, ದೂರದ ಊರುಗಳಿಂದಲೂ ನಾಟಕ ನೋಡೋಕೆ ಜನ ಬಂದಿದ್ದರು. ಮಾದಿಗರ ಹಟ್ಟಿ, ಹೊಲೆಗೇರಿಗಳಲ್ಲಿ ಎಲ್ಲಿ ನೋಡಿದರೂ ನೆಂಟರೇ. ಎಲ್ಲಾ ಮನೆಗಳಿಂದಲೂ ನೆಂಟರಿಗಾಗಿ ಮಾಡಿದ ಕೋಳಿಸಾರಿನ ಘಮಘಮ.

...ಕಲ್ಯಾಣರಾವ್‌ರವರ

ಅಸ್ಪೃಶ್ಯ ವಸಂತ 8



ಅನುವಾದ: ಪ್ರೊ. ನಗರಗೆರೆ ರಮೇಶ್

ಬೆಳದಿಂಗಳ ರಾತ್ರಿಯ ಬೆಳಕೆಲ್ಲಾ ಆ ಹಳ್ಳಿಯ ಮೇಲೇ ಸುರೀತಿತ್ತು. ಹೆಂಗಸರು ಬುಟ್ಟಗಳಿಂದ ಒಳ್ಳೆ ಸೀರೆಗಳನ್ನು ಆಚೆಗೆ ತೆಗೆದಿದ್ದರು. ತಲೆ ಸಿಕ್ಕು ಬಿಡಿಸಿಕೊಂಡು ಎಣ್ಣೆ ಹಚ್ಚಿ ಒತ್ತಾಗಿ ಬಾಚಿಕೊಂಡಿದ್ದರು. ಜಡೆಗಳಿಗೆ ಹೂಗಳ ಅಲಂಕಾರ. ಭೂದೇವಿಗೆ ಎಲ್ಲೂ ನಿಲ್ಲಲಾಗುತ್ತಿಲ್ಲ. ಅಳಿಯನ ಮೈಮೇಲಿನ ಭುಜ ಕೀರ್ತಿಗಳು, ತಲೆಯ ಮೇಲಿನ ಕಿರೀಟ, ದೊಡ್ಡ ದೊಡ್ಡ ಓಲೆಗಳು, ಹಾರಗಳು, ಕತ್ತಿ–ಇವೆಲ್ಲಾ ನೋಡ್ತಾ ಇದ್ದರೆ ತನ್ನ ಸೊಂಟದ ಮೇಲೆ ಹತ್ತಿಕೂತು 'ಅತ್ತೇ! ನನಗೇನೂ ಕಾಣ್ತಿಲ್ಲ' ಅಂತ ಅಳ್ತಾ ಇದ್ದ ಪುಟ್ಟ ಎಲ್ಲಣ್ಣನೇ ನೆನಪಿನಲ್ಲಿ ತುಂಬಿಕೊಂಡು ಎಲ್ಲಿಲ್ಲದ ನಗು ಬಂದಿತು. ಆಟ ಮುಗಿದ ಮೇಲೆ ದೃಷ್ಟಿ ತೆಗೀಬೇಕು ಅಂದುಕೊಳ್ಳುತ್ತಿರುವಾಗಲೇ ನಾಗನ್ನ ತೆಂಗಿನ ಕಾಯಿಯ ಮೇಲೆ ಕರ್ಪೂರ ಹಚ್ಚಿ ಎಲ್ಲಣ್ಣನ ಸುತ್ತಲೂ ನಾಲ್ಕು ಬಾರಿ ಸುತ್ತಿ ತೆಂಗಿನ ಕಾಯಿಯನ್ನ ಜೋರಾಗಿ ನೆಲದ ಮೇಲೆ ಒಗೆದ. ಎಲ್ಲಾ ಕಡೆ ಹರಡಿದ ಅದರ ಚೂರುಗಳನ್ನ ಆರಿಸೋದಕ್ಕೆ ಹುಡುಗರು ನಾಮುಂದು ತಾಮುಂದು ಅಂತ ಮುಗಿಬಿದ್ದರು. ನಾಗನ್ನ ಎಷ್ಟು ಒಳ್ಳೆಯವನು! ಅಂದುಕೊಂಡಳು ಭೂದೇವಿ.

'ಇವನಿಗೆ ಹುಣಸೆಮರ ಹತ್ತಲಿಕ್ಕೂ ಬರುವುದಿಲ್ಲ' ಎಂದು ಭೂದೇವಿಗೂ ಹೇಳಿದಳು. ಭೂದೇವಿ ಸುಭದ್ರಳನ್ನ ಇನ್ನೂ ಹತ್ತಿರಕ್ಕೆ ಎಳಕೊಂಡಳು. ಅವಳ ಮೈಯಲ್ಲಿ ಮೈಯಾಗಿ ಕೂತಳು ಸುಭದ್ರ. ಅವತ್ತಿನ ಆಟ ನಡೆಸಿದ್ದು ಎಲ್ಲಣ್ಣ, ಅವನ ಜೊತೆಗಾರರಲ್ಲ, ಎಲ್ಲಾ ಮಾಡಿದ್ದು ನಾಗನ್ನ. ಎಲ್ಲೆಲ್ಲಿ ಬೇಕಾಗಿತ್ತೋ, ಅಲ್ಲಲ್ಲೆಲ್ಲಾ ಅವನೇ ವೇಷ ಕಟ್ಟಿ ನಾಟಕವನ್ನು ನಡೆಸಿದ. ರಾತ್ರಿ ಎಲ್ಲರೂ ಊಟ ಮುಗಿಸಿದ ಮೇಲೆ ಶುರುವಾದ ನಾಟಕ ಬೆಳ್ಳಂಬೆಳಗಿನವರೆಗೂ ನಡೀತು.

ಆಟ ಆಡಿದ್ದಾಗಲಿ, ಅದು ಹೇಗಾಯಿತು ಅನ್ನೋದಾಗಲಿ ಮುಖ್ಯವಲ್ಲ. ಸುತ್ತಮುತ್ತಲ ಹತ್ತಾರು ಹಳ್ಳಿಗಳಿಂದ ನಾಟಕ ನೋಡಲು ಜನ ಬಂದದ್ದೇ ಮುಖ್ಯ. ಎಲ್ಲಾ ಊರುಗಳ ಹೊಲೆಗೇರಿಗಳಿಂದ ಜನ ಬಂದಿದ್ದರು.

(ಮುಂದುವರೆಯುವುದು)

ಆದರೆ "ಶಿಕ್ಷಣವೆಂಬುದು ಇವತ್ತು ಅಧಿಕಾರಶಾಹಿಯ ...ತ್ತಾಯದಿಂದ ಹೇರಲ್ಪಡುತ್ತಿದೆ; ಸಾರ್ವತ್ರಿಕವೂ ನ್ಯಾಯಯುತವೂ ಆಗಿದೆಯೆಂದು ನಂಬಲಾದ ಸಾಮಾಜಿಕ ವ್ಯಸನವೂ ಆಗಿ ಪರಿಣಮಿಸಿದೆ" ಎಂಬ ಮಾತನ್ನಾಗಲಿ "ಜನರೇ ಈಗ ಶಿಕ್ಷಣ ಸಾಕು ಎನ್ನುತ್ತಿದ್ದಾರೆ. ಜತೆಗೆ ತಮ್ಮ ಹಳೆಯ ಕಲಿಕೆಯ ಮಾರ್ಗಗಳನ್ನೆಲ್ಲ ಅವರು ಒಂದೊಂದಾಗಿ ನೆನಪಿಸಿಕೊಳ್ಳುತ್ತಿದ್ದಾರೆ" ಎಂಬ ವಾದವನ್ನಾಗಲಿ ಸಂಪೂರ್ಣ ಒಪ್ಪಲಾದೀತೆ? ನಮ್ಮ ಶ್ರೇಣೀಕೃತ ಸಮಾಜದ ಸಂದರ್ಭದಲ್ಲಿ ಹಳೆಯ ಕಲಿಕೆಯ ಮಾರ್ಗಗಳನ್ನು ನೆನಪಿಸಿಕೊಳ್ಳುವುದೆಂದರೆ ಮೋಚಿಯ ಮಗ ಚಪ್ಪಲಿ ಹೊಲಿಯುವುದನ್ನೇ ಕಲಿಯುವುದು ಅಂತಲೇ ಆದೀತು. ಅಂಬೇಡ್ಕರ್ ಚಿಂತನೆ ಮತ್ತು ನಂತರದ ದಲಿತ ಚಳವಳಿಯ ವಾದಗಳನ್ನು ಈ ಚಿಂತನಾ ಕ್ರಮದೊಂದಿಗೆ ಮುಖಾಮುಖಿಯಾಗಿಸಿ ನೋಡಿದಾಗ ಹುಟ್ಟಬಹುದಾದ ಕ್ಲಿಷ್ಟ ಪ್ರಶ್ನೆಗಳನ್ನು ಈ ಲೇಖನ ...ತ್ತುವುದಿಲ್ಲ.

ಈ ಸಂಕಲನದಲ್ಲಿರುವ ಬಹಳಷ್ಟು ಲೇಖನಗಳಲ್ಲಿ ಆಧುನಿಕ ಮತ್ತು ಆಧುನಿಕೋತ್ತರ ವಿಧಾನಗಳನ್ನು ತಿರಸ್ಕರಿಸುವುದು, ದೇಸೀಯತೆಯನ್ನು ಇದಕ್ಕೆ ಪರ್ಯಾಯವಾಗಿ ಬಿಂಬಿಸುವುದು ಸ್ಥಾಯಿಭಾವವಾಗಿ ಎದ್ದು ಕಾಣುತ್ತದೆ. ಫ್ರೆಡೆರಿಕ್ ಅಪ್‌ಫೆಲ್ ಮಾರ್ಗ್ಲಿನ್ 'ಜ್ಞಾನವ್ಯವಸ್ಥೆಗಳು' ಲೇಖನದಲ್ಲಿಯಂತೂ ಆಧುನಿಕ ವ್ಯವಸ್ಥೆಯ ಬಗೆಗೆ ಪರ್ಯಾಯವಾಗಿ ತೋರುವ ಮಾರ್ಗ ಪಾರಮಾರ್ಥಿಕ ಮಾರ್ಗವಾಗಿ ತೋರುತ್ತದೆ. ಈ ಲೇಖಕಿಯ ಪ್ರಕಾರ ಆಧುನಿಕ ಮತ್ತು ಆಧುನಿಕೋತ್ತರ ವ್ಯವಸ್ಥೆಗೆ ಪರ್ಯಾಯ ಕಂಡುಕೊಳ್ಳುವುದೆಂದರೆ 'ರೂಢಿಗತವಾದ ಯೋಚನಾಕ್ರಮವನ್ನು ಬಿಟ್ಟುಕೊಡುವುದು ಮತ್ತು ಇರುವಿಕೆಯಲ್ಲೂ, ಹಾಗು ಈ ಸೃಷ್ಟಿಯ ಜೀವರಾಶಿಯ ಕಾರಣ್ಯದಲ್ಲೂ ... ಆಗುವುದು.... ಮೌನ, ಧ್ಯಾನ, ಅನುಭೂತಿ, ... ಮನಸ್ಸು, ಮತ್ತು ಸೃಷ್ಟಿ ಕುರಿತು ... ಮಾತ್ರ ನಾವು ... ಅಡಗಿರುವ ... ಗುರುತಿಸಬಲ್ಲೆವು...."

ಆಧುನಿಕತೆ, ಅಭಿವೃದ್ಧಿಯ ಪರಿಭಾಷೆಯ

ಅವಿಮರ್ಶಾತ್ಮಕ ಆರಾಧಕರಾಗುವುದರಲ್ಲಿನ ಅಪಾಯಗಳ ಬಗ್ಗೆ ಈ ಸಂಕಲನದ ಲೇಖನಗಳು ಸಮರ್ಥವಾಗಿ ಎಚ್ಚರಿಸುತ್ತವೆ ಎನ್ನುವುದಲ್ಲಿ ಅನುಮಾನವಿಲ್ಲ. ಆದರೆ ಇದೇ ಪ್ರಶ್ನೆಗಳನ್ನು ನಮ್ಮ ಪ್ರಸ್ತುತ ಸಂದರ್ಭದಲ್ಲಿ ಇಟ್ಟು ಓದಿದಾಗ ಬೇರೆಯ ಅರ್ಥಗಳು ಧ್ವನಿಸುವ ಸಾಧ್ಯತೆಗಳ ಬಗ್ಗೆಯೂ ಎಚ್ಚರ ಇರಬೇಕಾಗುತ್ತದೆ. ಮ್ಯಾಕ್‌ವೈಖೆಲ್‌ರ ಸಂದರ್ಭದಲ್ಲಿ ಕ್ರಾಂತಿಕಾರಿ ಅನ್ನಿಸಬಹುದಾದ ವಿಚಾರಗಳು ನಮ್ಮ ಸಂದರ್ಭದಲ್ಲಿ ಇಟ್ಟಾಗ, ಕನ್ನಡಕ್ಕೆ ಅನುವಾದಗೊಂಡು ಬಂದಾಗ, ಮೊಟ್ಟೆ ವಿರೋಧಿ ಸ್ವಾಮೀಜಿಗಳ ಮಾತಿನಂತೆ ತೋರುವ ಬಗ್ಗೆ ಎಚ್ಚರ ಇರಲೇಬೇಕಾಗುತ್ತದೆ. ಅರ್ಥಾತ್, ಆಧುನಿಕ ಮತ್ತು ಆಧುನಿಕೋತ್ತರ ಪ್ರಪಂಚದ ಸಾಮಾನ್ಯಜ್ಞಾನ (ಕಾಮನ್‌ಸೆನ್ಸ್) ಹಿಂದೆ ಇರುವ ಸಿದ್ಧಾಂತಗಳನ್ನು ವಿಮರ್ಶಿಸುವ ಈ ಲೇಖನಗಳ ಹಿಂದಿರುವ ಸಿದ್ಧಾಂತ, ಇವುಗಳು ಸಂದರ್ಭಾನುಸಾರ ಬೇರೆ ಬೇರೆ ಅರ್ಥಗಳನ್ನು ಹೊಮ್ಮಿಸುವ ಬಗೆಗಳನ್ನು ವಿಮರ್ಶಿಸುತ್ತಲೇ ಓದುವುದು ಅಗತ್ಯ.

ಇದೇ ಸಂದರ್ಭದಲ್ಲಿ ಇನ್ನೊಂದು ಮಾತನ್ನೂ ಮನಸ್ಸಿನಲ್ಲಿಟ್ಟುಕೊಳ್ಳುವುದು ಸೂಕ್ತ. ಅಶೀಸ್ ನಂದಿ ಆಧುನಿಕತೆ ಮತ್ತು ಸಂಪ್ರದಾಯಗಳನ್ನು ಪರಾಮರ್ಶಿಸುವ ಬಗ್ಗೆ ವಿವಿಧ ಚಿಂತನಕಾರರು ತಕರಾರುಗಳನ್ನೆತ್ತಿದ್ದಾರೆ. ಒಬ್ಬ ವಿಮರ್ಶಕಿಯಂತೂ ನಂದಿ ಮತ್ತು ಅವರ ಸಿದ್ಧಾಂತವನ್ನು ಅನುಸರಿಸುವ ಮಾಹತೋತ್ತರ ಚಿಂತಕರನ್ನು "ಗೊತ್ತಿದ್ದೋ ಗೊತ್ತಿಲ್ಲದೆಯೋ ಹಿಂದೂ ಬಲ ಪಂಥೀಯರ ಟ್ರೋಜನ್ ಕುದುರೆಗಳು ಇವರು" ಎಂದೂ ಹೇಳಿದ್ದಾರೆ. ನಂದಿಯ ವಿಚಾರಧಾರೆಗಳು ಕನ್ನಡ ಓದುಗರಿಗೆ ಸಿಕ್ಕಷ್ಟು ಸುಲಭವಾಗಿ ಅದನ್ನು ಒಪ್ಪದವರ ವಿಚಾರಧಾರೆಗಳು ಸಿಗುವುದಿಲ್ಲ, ಯಾವುದನ್ನು ನಾವು ಅನುವಾದಕ್ಕೆ ಆಯ್ಕೆ ಮಾಡಿಕೊಳ್ಳುತ್ತೇವೆ, ಯಾವುದನ್ನು ಆಯ್ಕೆ ಮಾಡಿಕೊಳ್ಳುವುದಿಲ್ಲ ಎನ್ನುವುದರ ಹಿಂದೆಯೂ ಒಂದು ಸಿದ್ಧಾಂತ ಕೆಲಸ ಮಾಡುತ್ತಲೇ ಇರುತ್ತದೆ ಅಲ್ಲವೆ?

■ ಶ್ರೀ

(9ನೇ ಪುಟದಿಂದ)

ಪ್ರಧಾನಮಂತ್ರಿ–ಅಂದರೆ ತನ್ನ ಅತ್ತೆ ಬೆನಜೀರ್–ಮನೆಗೆ ಫೋನ್ ಮಾಡಿದಳು. ಫೋನ್ ಎತ್ತಿದ ಜರ್ದಾರಿಯೊಂದಿಗೆ ನಡೆದ ಆಕೆಯ ಸಂಭಾಷಣೆ ಹೀಗಿತ್ತು;

ಫಾತಿಮಾ: ನಾನು ನನ್ನ ಅತ್ತೆಯೊಂದಿಗೆ ಮಾತನಾಡಬೇಕು, ಪ್ಲೀಸ್.

ಜರ್ದಾರಿ: ಸಾಧ್ಯವಿಲ್ಲ.


ಫಾತಿಮಾ: ಯಾಕೆ? (ಅದೇ ಹೊತ್ತಿಗೆ ಹಿಂದಿನಿಂದ ಯಾರೋ ನಾಟಕೀಯವಾಗಿ ಜೋರಾಗಿ ಅಳುತ್ತಿರುವುದು ಕೇಳಿಸಿತು).

ಜರ್ದಾರಿ: ಆಕೆ ಭಾವೋದ್ರೇಕಗೊಂಡು ಅಳುತ್ತಿದ್ದಾಳೆ. ಕೇಳಿಸುತ್ತಿಲ್ಲವಾ ನಿನಗೆ?

ಫಾತಿಮಾ: ಯಾಕೆ ಅಳುತ್ತಿದ್ದಾಳೆ?

ಜರ್ದಾರಿ: ನಿನಗೆ ಗೊತ್ತಿಲ್ವಾ? ನಿನ್ನ ಅಪ್ಪನನ್ನು ಶೂಟ್ ಮಾಡಲಾಗಿದೆ.

ಮುರ್ತಾಜಾನನ್ನ ಎಲ್ಲಿಗೆ ತೆಗೆದುಕೊಂಡು ಹೋಗಿದ್ದಾರೆ ಎಂದು ಪತ್ತೆಹಚ್ಚಿ ಕೊನೆಗೂ ಮನೆಯಿಂದ ಹೊರಬಿದ್ದ ಫಾತಿಮಾ ಮತ್ತು ಘಿನ್ವಾಳಿಗೆ ಇದೀಗ ತಾನೆ ತಮ್ಮ ಮನೆ ಮುಂದೆ ಒಂದು ಶೂಟ್ ಔಟ್ ನಡೆದಿತ್ತು ಎಂಬುದಕ್ಕೆ ಯಾವುದೇ ಸುಳಿವು ಇರದದ್ದು ಅಚ್ಚರಿ ಮೂಡಿಸಿತು. ಯಾಕೆಂದರೆ ಅಷ್ಟೊತ್ತಿಗಾಗಲೇ ಇಡೀ ರಸ್ತೆಯನ್ನು ತೊಳೆದು ಸ್ವಚ್ಛಗೊಳಿಸಲಾಗಿತ್ತು. ಅಲ್ಲಿ ರಕ್ತದ ಕಲೆಯಾಗಲಿ, ಸುಟ್ಟ ಬುಲೆಟ್‌ಗಳಾಗಲಿ, ಗಾಜಿನ ಚೂರುಗಳಾಗಲಿ ಯಾವುದೂ ಇರಲಿಲ್ಲ. ಅವರಿಬ್ಬರೂ ಮುರ್ತಾಜಾ ಇದ್ದ ಆಸ್ಪತ್ರೆಯನ್ನು ತಲುಪಿದಾಗ ಎಲ್ಲವೂ ಮುಗಿದಿತ್ತು. ಮುರ್ತಾಜಾ ಹೆಣವಾಗಿದ್ದ.



ಮುರ್ತಾಜಾನ ಕೊಲೆಯಿಂದ ಜನ ಎಷ್ಟು ಆಕ್ರೋಶಗೊಂಡರೆಂದರೆ ಆತನ ಅಂತ್ಯ ಸಂಸ್ಕಾರಕ್ಕೆ ಬೆನಜೀರ್ ಬಂದಾಗ ಆಕೆಯ ಕಾರಿನತ್ತ ಜನ ಕಲ್ಲುಗಳನ್ನು ತೂರಿದರು. ಆಕೆ ವಿಧಿ ಇಲ್ಲದೆ ವಾಪಸ್ಸಾಗಬೇಕಾಯಿತು. ಸತ್ತ ತಮ್ಮನಿಗಾಗಿ ಬೆನಜೀರ್ ಸಾರ್ವಜನಿಕವಾಗಿ ಕಣ್ಣೀರಿಟ್ಟಳು. ಆದರೆ ಒಳಗೊಳಗೆ ಆಕೆ ಮಾಡಿದ್ದೆಲ್ಲ ವಿಚಿತ್ರವಾಗಿತ್ತು.

ಮುರ್ತಾಜಾನ ಕೊಲೆ ಪ್ರಕರಣಕ್ಕೆ ಪ್ರತ್ಯಕ್ಷ ಸಾಕ್ಷಿಗಳಾಗಿದ್ದ ಜನರನ್ನೇ ಆಕೆಯ ಸರ್ಕಾರ ಬಂಧಿಸಿತು. ದಾಳಿಯಲ್ಲಿ ಅದು ಹೇಗೋ ಬಚಾವಾಗಿದ್ದ ಒಂದಿಬ್ಬರನ್ನೂ ಜೈಲಿಗೆ ದೂಡಲಾಯಿತು. ಪ್ರಕರಣದ ಸತ್ಯಾಸತ್ಯತೆ ಬಗ್ಗೆ ಓರ್ವ ಪೊಲೀಸ್ ಅಧಿಕಾರಿ ಬಾಯಿಬಿಟ್ಟಾನೆಂದು ಆತನನ್ನೂ ಕೊಲ್ಲಿಸಲಾಯಿತು. ಹಾಗೆಯೇ ಸಾಕ್ಷಿಯೊಬ್ಬನು ಜೈಲಿನಲ್ಲಿ ನಿಗೂಢವಾಗಿ ಸತ್ತ. ಇದಿಷ್ಟಲ್ಲದೆ, ದಾಳಿಯಲ್ಲಿ ಭಾಗಿಯಾಗಿದ್ದ ಎಲ್ಲಾ ಪೊಲೀಸರಿಗೆ ಬೆನಜೀರ್ ಸರ್ಕಾರ ಬಡ್ತಿಗಳನ್ನು ನೀಡಿ ಅಭಿನಂದಿಸಿತು!

ಇದನ್ನೆಲ್ಲ ಕಂಡು ಫಾತಿಮಾ "ಕೊಂದವರನ್ನು ಬಂಧಿಸುವ ಬದಲು ಹೀಗೇಕೆ ಸಾಕ್ಷಿಗಳನ್ನೇ ಬಂಧಿಸುತ್ತಿದ್ದಾರೆ?" ಎಂದು ಬೆನಜೀರ್‌ಳನ್ನು ಕೇಳಿದಳು. "ನೋಡು, ನೀನಿನ್ನೂ ಚಿಕ್ಕವಳು. ನಿನಗಿದೆಲ್ಲ ಅರ್ಥವಾಗಲ್ಲ" ಎಂದಷ್ಟೇ ಅತ್ತೆ ಬೆನಜೀರ್ ಉತ್ತರಿಸಿದಳು. ಆದರೆ ಮುರ್ತಾಜಾನ ಪತ್ನಿ ಘಿನ್ವಾ ತನ್ನ ಮಗಳಷ್ಟು ಮುಗ್ಧಳಾಗಿರಲಿಲ್ಲ. ಬೆನಜೀರ್ ಮತ್ತು ಜರ್ದಾರಿ ತನ್ನ ಗಂಡನ ಕೊಲೆಗೆ ಕಾರಣರು ಎಂದು ಆರೋಪಿಸಿದ ಆಕೆ ಪಿಪಿಪಿ (ಮುರ್ತಾಜಾ) ಎಂಬ ಹೊಸ ಪಕ್ಷವನ್ನೇ ಸ್ಥಾಪಿಸಿದಳು.

ಇದು ಬೆನಜೀರ್‌ಳನ್ನು ಮತ್ತಷ್ಟು ಕೆರಳಿಸಿತು. ಘಿನ್ವಾ ಮೇಲೆ ಸೇಡು ತೀರಿಸಿಕೊಳ್ಳಲು ಫಾತಿಮಾಳಿಗೆ ಜನ್ಮ ನೀಡಿದ್ದ, ಹಿಂದೆ ಜಿಯಾನಿಂದ ಹಣ ಪಡೆದಿದ್ದ ಹಂತಕಿ ಎಂದು ತಾನೇ ಖಂಡಿಸಿದ್ದ ಫೌಜಿಯಾಳನ್ನು ಪಾಕಿಸ್ತಾನಕ್ಕೆ ಕರೆಸಿ ಫಾತಿಮಾಳನ್ನು ಅಮೆರಿಕಕ್ಕೆ ಕರೆದುಕೊಂಡು ಹೋಗುವಂತೆ ಪ್ರಚೋದಿಸಿದಳು. ಆದರೆ ಫಾತಿಮಾ ತನ್ನ ಮಲತಾಯಿ ಘಿನ್ವಾ ಪರ ನಿಂತಿದ್ದರಿಂದ ಫೌಜಿಯಾ ಮತ್ತು ಬೆನಜೀರ್‌ಳ ಕುತಂತ್ರ ವಿಫಲವಾಯಿತು.

ಇದೆಲ್ಲದರಿಂದ ತನ್ನ ಮಕ್ಕಳು ಪಾಕಿಸ್ತಾನದಲ್ಲಿದ್ದರೆ ಬೆನಜೀರ್‌ಳಿಂದ ಅಪಾಯ ಕಾದಿದೆ ಎಂದರಿತ ಘಿನ್ವಾ ಅವರಿಬ್ಬರನ್ನು ಡಮಾಸ್ಕಸ್‌ನಲ್ಲಿನ ತನ್ನ ಸ್ನೇಹಿತರ ಮನೆಗೆ ಕಳುಹಿಸಿದಳು.

ಮುರ್ತಾಜಾ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆನಜೀರ್ ನಡೆದುಕೊಂಡಿದ್ದ ರೀತಿಯ ವಿರುದ್ಧ ಮಾನವ ಹಕ್ಕುಗಳ ಹೋರಾಟಗಾರರು ಪ್ರಶ್ನಿಸಲಾರಂಭಿಸಿದಾಗ ಮುರ್ತಾಜಾನ ಕೊಲೆ ಪ್ರಕರಣ ತನಿಖೆ ನಡೆಸಲು

ಬೆನಜೀರ್ ಒಂದು ನ್ಯಾಯಮಂಡಳಿಯನ್ನು ನೇಮಿಸಿದಳು. ಆ ನ್ಯಾಯಮಂಡಳಿ ವಿಚಾರಣೆಯನ್ನು ನಡೆಸುತ್ತಿದ್ದಾಗಲೇ ಆಕೆಯ ಸರ್ಕಾರ ಮತ್ತೊಮ್ಮೆ ಭ್ರಷ್ಟಾಚಾರದ ಆರೋಪ ಹೊತ್ತು ಅಧಿಕಾರದಿಂದ ಉರುಳಿತು.

ಆದರೆ ಈ ಬಾರಿ ಆಕೆಯನ್ನು ಪ್ರಧಾನಿಸ್ಥಾನದಿಂದ ಕಿತ್ತೊಗೆದಿದ್ದು ಅಮೆರಿಕ ನಿಯಂತ್ರಣದಲ್ಲಿದ್ದ ಅಧ್ಯಕ್ಷನಲ್ಲ, ಬದಲಾಗಿ ಬೆನಜೀರ್‌ಳೇ ಅಧ್ಯಕ್ಷ ಸ್ಥಾನಕ್ಕೆ ನೇಮಿಸಿದ್ದ ಪಿಪಿಪಿ ಪಕ್ಷದ ಹಿರಿಯ ನಾಯಕ ಫರೂಕ್ ಲೆಘಾರಿ. ಬೆನಜೀರ್ ಮತ್ತು ಜರ್ದಾರಿಯ ದುಷ್ಕೃತ್ಯಗಳನ್ನು ಕಂಡು ಬೇಸತ್ತಿದ್ದ ಲೆಘಾರಿಗೆ ಕೋಪ ತರಿಸಿದ್ದ ಸಂಗತಿ ಯಾವುದೆಂದರೆ ಆತನ ಮಗಳು ತನ್ನ ಬಾಯ್‌ಫ್ರೆಂಡ್ ಅನ್ನು ಭೇಟಿಯಾಗುತ್ತಿದ್ದ ಸಂದರ್ಭದ ಫೋಟೋ ತೆಗೆದು ಅಧ್ಯಕ್ಷನನ್ನೇ ಬ್ಲ್ಯಾಕ್‌ಮೇಲ್ ಮಾಡಲು ಬೆನಜೀರ್ ಪ್ರಯತ್ನಿಸಿದ್ದು.

ಬೆನಜೀರ್ ಸರ್ಕಾರ ಹೀಗೆ ಉರುಳುತ್ತಿದ್ದಂತೆ ಮುರ್ತಾಜಾ ಕೊಲೆ ಪ್ರಕರಣವೂ ಸೇರಿದಂತೆ ಹಲವಾರು ಭ್ರಷ್ಟಾಚಾರದ ಆರೋಪದ ಮೇಲೆ ಜರ್ದಾರಿಯನ್ನು ಮತ್ತೆ ಜೈಲಿಗೆ ದೂಡಲಾಯಿತು. ಹೀಗೆ ತನ್ನ ರಾಜಕೀಯ ಗುರುವೇ ಜೈಲುಪಾಲಾದದ್ದನ್ನು ಕಂಡು ಸಿಂಧ್ ರಾಜ್ಯದ ಮುಖ್ಯಮಂತ್ರಿ ಮತ್ತು ಮುರ್ತಾಜಾನ ಪೀಡಕ ಅಬ್ದುಲ್ಲಾ ಶಾ ತನ್ನ ಸ್ಥಾನದಿಂದ ಇಳಿಯುವುದಿರಲಿ ಪಾಕಿಸ್ತಾನವನ್ನೇ ತ್ಯಜಿಸಿ ಅಮೆರಿಕಕ್ಕೆ ಓಡಿಹೋದ.

ತಮ್ಮನನ್ನೇ ಕೊಲ್ಲಿಸಿದಳೇ ಬೆನಜೀರ್?

ಮತ್ತೆ 1997 ಚುನಾವಣೆಗಳು ಬಂದವು. ಆಗ ಭುಟ್ಟೊ ವಂಶದ ಸಾಮ್ರಾಜ್ಯದಂತಿರುವ ಲಾರ್ಖಾನದಿಂದ ಸ್ಪರ್ಧಿಸುವುದಾಗಿ ಮುರ್ತಾಜಾನ ವಿಧವೆ ಘಿನ್ವಾ ಹೇಳಿದಳು. ಅಷ್ಟೊತ್ತಿಗಾಗಲೇ ನುಸ್ರತ್‌ಳ ಆರೋಗ್ಯ ಕೆಟ್ಟಿತ್ತು ಮತ್ತು ಆಲ್‌ಝೈಮರ್ಸ್ ಕಾಯಿಲೆಯಿಂದಾಗಿ ಆಕೆಗೆ ಅರುಳೊ ಮರುಳೊ ಎಂಬಂತಾಗಿತ್ತು. ಅಂತಹ ದುಃಸ್ಥಿತಿಯಲ್ಲಿದ್ದ ತಾಯಿಯನ್ನೇ ಲಾರ್ಖಾನದ ಪಿಪಿಪಿ ಸ್ಪರ್ಧಿಯಾಗಿ ಬೆನಜೀರ್ ನಿಲ್ಲಿಸಿದಳು.

ಆ ಕ್ಷೇತ್ರದಲ್ಲೇನೊ ನುಸ್ರತ್ ಗೆದ್ದಳು. ಆದರೆ ಉಳಿದ ಬಹಳಷ್ಟು ಕಡೆ ನವಾಜ್ ಷರೀಫ್‌ನ ಮುಸ್ಲಿಂ ಲೀಗ್ ಗೆದ್ದು ಬೆನಜೀರ್‌ಳ ಪಿಪಿಪಿ ಪಕ್ಷ ಹೀನಾಯವಾಗಿ ಸೋತಿತು.

ಬೆನಜೀರ್ ಎಲ್ಲವನ್ನು ಕಳೆದುಕೊಂಡಿದ್ದಳು.

ಇದಕ್ಕೆ ಸರಿಯಾಗಿ ಒಂಭತ್ತು ವರ್ಷಗಳ ಹಿಂದೆ ಬೆನಜೀರ್ ಬೆಂಬಲಕ್ಕೆ ಜನರಿದ್ದರು, ತಾಯಿಯ ಪ್ರೀತಿ ಇತ್ತು, ಸಹೋದರರ ನೆರವಿತ್ತು, ಗಂಡನ ಸಹಾಯವಿತ್ತು. ಇವೆಲ್ಲದರಿಂದ ಆಕೆ 35 ನೇ ವಯಸ್ಸಿನಲ್ಲೇ ಪ್ರಧಾನಿ ಹುದ್ದೆಗೇರಿದ್ದಳು.

ಆದರೆ ತಪ್ಪು ನಿರ್ಧಾರಗಳಿಂದ, ದುರಹಂಕಾರದಿಂದ, ಭ್ರಷ್ಟಾಚಾರದಿಂದ, ಸೇಡಿನ ಸ್ವಭಾವದಿಂದ ಆಕೆ ಎಲ್ಲವನ್ನೂ ಕಳೆದುಕೊಂಡಿದ್ದಳು. ಗಂಡ ಜೈಲಿನಲ್ಲಿದ್ದ. ತಾಯಿ ತನ್ನ ಸುತ್ತ ಏನು ನಡೆಯುತ್ತಿದೆ ಎಂದೂ ಗೊತ್ತಾಗದಂತಹ ಪರಿಸ್ಥಿತಿಯಲ್ಲಿದ್ದಳು. ತಂಗಿ ಸೋನಂ ತನ್ನ ದಾಂಪತ್ಯ ಜೀವನದಲ್ಲಿ ಆದ ವೈಮನಸ್ಯದಿಂದ ತತ್ತರಿಸಿದ್ದಳು. ಸಹೋದರರಿಬ್ಬರೂ ಮಣ್ಣಾಗಿದ್ದರು. ಪಿಪಿಪಿ ಎಂಬ ಪಕ್ಷ ಛಿಂದಿಯಾಗಿತ್ತು. ಸ್ವತಃ ಬೆನಜೀರ್ ಭ್ರಷ್ಟಾಚಾರದ ಆರೋಪಗಳನ್ನು ಪಾಕಿಸ್ತಾನದಲ್ಲಿ ಮಾತ್ರವಲ್ಲ ಯುರೋಪಿನ ಹಲವು ದೇಶಗಳಲ್ಲಿ ಎದುರಿಸುತ್ತಿದ್ದಳು.

... ಬೆನಜೀರ್ ... ಮಾಡಿದ್ದ ...

(...)

ಮಾಯಾವತಿ ದ್ಯಾವೇಗೌಡನ ಮಗಳಂಗೇ ಕಾಣ್ತಾಳೆ ನೋಡಿದ್ದೀಯಾ

ಬಯಲುಸೀಮೆಯ

ಕಟ್ಟೆಪುರಾಣ

■ ಬಿ. ಚಂದ್ರೇಗೌಡ

ಉಗ್ಗಿಯಿಂದ ಮಾಯಾವತಿಯ ವೃತ್ತಾಂತ ಕೇಳಿದ ಕಾಳಮಾವ,

"ಅವುಳುದೂ ಒಂದು ಚಾತ್ರೆ ನ್ಯಡದೋಗ್ಲಿ ಬುಡು" ಎಂದ.

"ಅವುಳೊಂತರಾ ದ್ಯಾವೇಗೌಡನ ಮಗಳಾಗೂ ಕಾಣ್ತಳೆ ಅಲ್ಲವೇನ್ಲ?" ಎಂದ ಸೀರ.

"ಊ, ರೇವಣ್ಣ, ಕುಮಾರಸ್ವಾಮಿ ನಡುವೆ ಹುಟ್ಟಿದೋಳಂಗೆ ಕಾಣ್ತಳೆ. ಗುಣದಲ್ಲಿ ದ್ಯಾವೇಗೌಡನ ಚಾಷ್ಟೆಯ ಆಗ್ಲೆ ತೋರ್‍ಯವುಳೆ."

"ದ್ಯಾವೇಗೌಡುನ ಚಾಷ್ಟೆ ಏನ್ ತೋರಿದ್ವಳ್ಳಾ?"

"ನೋಡೇ, ಒಂದು ಪಾರ್ಟಿ ಅಂದಮ್ಯಾಲೆ ಅಧ್ಯಕ್ಷ, ಉಪಾಧ್ಯಕ್ಷ, ಒಂದು ಸಮಿತಿ ಅಂತ ಏನೇನೊ ಇರತವೆ. ಪಾರ್ಟಿ ಏನಾದ್ರು ತೀರ್ಮಾನ ತಗೋಬೇಕಾದ್ರು ಆ ಸಭೆ ತೀರ್ಮಾನ ತಗತದೆ. ಈಗ ನಿನ್ನ ವಿಷಯನೆ ತಗಳೆ. ನಿನ್ನ ಪಂಚಾತಿ ಮೆಂಬ್ರು ಕ್ಯಾಂಡೇಟು ಅಂತ ತೀರ್ಮಾನ ತಗಳುವಾಗ ಇದೇ ಹೋಟ್ಳು ಮನೇಲಿ ಏನೇನ್ನಡಿತು ಗೊತ್ತೆ?"

"ಗೊತ್ತು ಕಂಡ್ಯ, ಆ ಪುಡಸಮ್ಮಿ ನನ್ನೆದ್ರಿ ನಿಲ್ಲುಸ್ತಿನ ಅಂತ ಬಂದಿದ್ದ. ರಾಜೇಗೌಡ ನನ್ನಾದ್ನಿ ನಿಲ್ಲುಸ್ತಿನಿ ಅಂದ. ಕಡಿಗಲವೆ. ನಾನು ನಿಂತಿದ್ದು?"

"ನಿಂತಿದ್ದು ಸರಿ ಕಣೆ, ಅದ್ಕು ಮದ್ಲು ಚರ್ಚೆ ನ್ಯಡಿತು. ಕಾಳಮಾವನು ನಿನ್ನ ಕಡಿಕೆ ವಾಲಿದ. ನಿಂತೆ, ಗೆದ್ದೆ. ಜುಜುಬಿ ಪಂಚಾತಿ ಮಟ್ಟದಲ್ಲಿ ಇಂತ ಚರ್ಚೆ ನ್ಯಡದಿರುವಾಗ ಇನ್ನ ರಾಜ್ಯ ರಾಷ್ಟ್ರಮಟ್ಟದಲ್ಲಿ ಏನಾರ ತೀರ್ಮಾನ ತಗಳವಾಗ ಏನು ಚರ್ಚೆ ನ್ಯಡಿಬವುದು, ಲ್ಯಕ್ಕ ಹಾಕಿದ್ದಿಯಾ?"

"ನ್ಯಡಿತವೆ ಬುಡು."

"ಆದ್ರೆ ಈ ಮಾಯಾವತಿರ ಯಾವ ಚರ್ಚೆನು ಇಲವಂತೆ. ಆಗ್ಲೆ ಅವುಳು ದ್ಯಾವೇಗೌಡನುಂಗೆ ಆಗಿದ್ದಳಂತೆ."

"ಅಂಗರೆ ಮಗನ್ನ ಮುಂದಕ್ಕೆ ಚಾಟಿದ್ದಳೆ?"

"ಏ ಅವುಳಿಗಿನ್ನು ಗಂಡನೇಯಿಲ್ಲ ಮಗೆಲ್ಲಿಂದ ಬಂದನೂ. ಅದಲ್ಲ, ದ್ಯಾವೇಗೌಡ ಇದ್ದಕಿದ್ದಂಗೆ ತಿಪ್ಪಣ್ಣ ನೀನೆ ಅಧ್ಯಕ್ಷ ಅಂದ. ಅಮ್ಯಾಲೆ ಪ್ರಕಾಶ್ ನೀನೆ ಲೀಡ್ರು ಅಂದ. ತಿರಗ ಮೀರಾಜುದ್ದೀನ್ ನೀನೆ ಈಗಿಂದೀಗ್ಲೆ ಅಧ್ಯಕ್ಷ ಅಂದ. ಅದ್ಕು ಮದ್ಲು ಮಗನ್ನೆ ಲೀಡ್ರು ಮಾಡಿದ್ದ. ಯಾರ್‍ನು ಕೇಳಲಿಲ್ಲ, ಸಭೆನೂ ಮಾಡಲಿಲ್ಲ. ಅದೇ ತರ ಮಾಯಾವತಿ ಇಲ್ಲಿಗೆ ಬಂದ್ಲು, ಆ ಸಿಂಧ್ಯಾನ ಮುಖ ನೋಡಿದ್ಲು, ನೀನೆ ಇಲ್ಲಿ ಗ್ಯಲ್ಲ ಇವುನು ಅಂದ್ಲು, ಅವುನು ತಗರಿನಂಗೆ ತಲೆ ವಗದ. ನೋಡೀಗಾಗ್ಲೆ ಪಾರ್ಟಿ ಅಧ್ಯಕ್ಷ ಗೋಪಾಲ ಅನ್ನೋನ್ನ ಗದುಮಿದ್ದಳಂತೆ."

"ತಗಳಪ್ಪ ಸುರುವಾಯ್ತಂಗರೆ ಅಲ್ಲೂವೆ?" ಎಂದ ಸೀರ.

"ಎಲ್ಲೂ ಇದಿದ್ದೆ ಕಣೊ ಮಾವ ಇದು. ನಾಕ ಜನ ಸೇರಿದ್ರು ಅಂದ್ರೆ ಸುರುವಾಯ್ತು ಅನ್ನು."

"ಗೋಪಾಲ ಅನ್ನೋನ್ನ ಯಾಕ್ ತಗದ್ಲಂತೆ?" ಎಂದಳು ಜುಮ್ಮಿ.

"ಅದು, ಮಾಯಾವತಿ ಬುಟ್ರೆ ಗೋಪಾಲನಿಗೇ ಗೊತ್ತು ಕಣೆ. ಅಲ್ಲಿ ಅವುಳು ಹೇಳಿದ್ದೇ ನ್ಯಾಯ, ಮಾಡಿದ್ದೇ ಕಾನೂನು. ಅಂತ ಹೆಂಗುಸ ಈ ಬಡ್ಡೆತ್ತವು ತಂದು ಮ್ಯರುಸ್ತ ಅವಲ್ಲ, ಇವುಕೇನ್ದೇಳನ?"

"ಅಲ್ಲಾ, ಉತ್ತುರ ಭಾರತದಿಂದ ಅವುಳ ಹಿಡಕಂಡು ಬಂದು ಮ್ಯರವಣಿಗೆ ಮಾಡ್ತವಲ್ಲ ಇವು, ಇಲ್ಲಿಂದ ಯಾರ್‍ನಾರ ಕರದು ಅವುರು ಮ್ಯರವಣಿಗೆ ಮಾಡಿದ್ದರೆ?" ಎಂದ ಕಾಳಮಾವ.

"ಇಲ್ಲ ಕಣ ಮಾವ. ಅಂತ ವಿಧಾನಸೌದ ಕಟ್ಟಿರೊ ಕ್ಯಂಗಲ್ ಹನುಮಂತಯ್ಯ ಇದ್ದ ಅವುನು ಒಂದು ಪಾರ್ಟಿ ಮಾಡಿದ್ದು ಆ ಉತ್ತರದ ನನಮಕ್ಕಳಿಗೆ ಗೊತ್ತೇ ಆಗಲಿಲ್ಲ, ದೇವರಾಜ ಅರಸು ಇಡೀ ದೇಸದಲ್ಲೇ ಯಾರೂ ಮಾಡದೆಯಿರೊ ಕ್ಯಲಸ ಮಾಡಿದ್ದ. ಅಂಥೋನು ಒಂದು ಪಾರ್ಟಿ ಕಟ್ಟಿದ್ದು ಈ ಉತ್ತರದ ನನಮಕ್ಕಳಿಗೆ ತಿಳಿತೊ ಇಲವ್ರೊ. ಅಂತದ್ರಲ್ಲಿ ಆ ಉತ್ತರ ಪ್ರದೇಶದಲ್ಲಿ ಹೂಸಿದ್ದ ಡಬ್ಬಲಿ ತುಂಬಿಕಂಡು ಬಂದು ಇಲ್ಲಿ ಮೂಸಿ ಮೂಗಳ್ಳುಸ್ತರಲ್ಲಾ ಇವುಕೇನ್ದೇಳನ?" ಎಂದು ಉಗ್ರಿ ಜೋರು ದನಿಯಲ್ಲಿ ಮಾತನಾಡುತ್ತಿರುವಾಗ ಬಂದು ನಿಂತಿದ್ದ ವಾಟಿಸ್ಸೆ

"ಇರ್ಲಿ ಬುಡೊ ಉಗ್ರಿ. ಆ ಬಿಎಸ್‌ಪಿ ಜನಗಳೇನಾದ್ರು ಕಾಂಗ್ರೆಸ್‌ಗೆ ತೊಂದ್ರೆ ಕೊಟ್ರೆ, ಖರ್ಗೆ ಏನೂ ... ಮನಿಗೋಯ್ತನೆ. ನೋಡಪ್ಪ ನಿಮ್ಮೊರ್‍ಕಲ್ಲ ಅಲ್ಲಿಗಾ... ಆದ್ರಿಂದ ನಿನ್ನ ಚೋಟಾ ಖತಂ ಅಂದ್ರಾಯ್ತು" ... ಸರಾಗವಾಗಿ.

"ಥೂ, ಥೂ, ಖರಗೆ ಇಡೀ ರಾಜ್ಯದ ಲೀ... ಕಣೊ. ಅವುನ್ನ ಬರೀ ದಲಿತ್ರ ಲೀಡ್ರು ಅನ್ನಬಾರ... ನಿನ್ನಂಥೋನು ಹಿಂಗೆ ಮಾತಾಡ್ತಿಯಲ್ಲೊ ವಾಟಸ್ಸೆ?"

"ಸಾರಿ ಉಗ್ರಿ. ಸುಮ್ನೆ ಹಾ... ಕ್ಯಂಗಂಡೆ. ಆದ್ರು ಖರ್ಗೆ ದ... ಜನಾಂಗದ ರ್‍ಯಪ್ರುಜೆಂಟ್ ಮಾ... ಆದ್ದರಿಂದ ದಲಿತ್ರು ಖರ್ಗೆ ಬು... ಮಾಯಾವತಿಗೆ ಓಟು ಮಾ... ಉದಾರವಾಗಿ ಮಾತಾಡಕ್ಯಾಗದ... ಅಂಡರ್‌ಸ್ಟ್ಯಾಂಡ್?"

"ಅರ್ಥಾಯ್ತಯಿಲ್ಲ."

"ಟ್ರೈಟು ಅಂಡರ್‌ಸ್ಟ್ಯಾಂ... ಎನಿಹೌ, ಆ ಉತ್ತರ ಭಾರ... ರಾಜಕಾರಣ ನಮ್ಮಲ್ಲಿ ನ್ಯಡಿಯಲ್ಲ ಕ... ನಮ್ಮಲ್ಲಿ ಬಸವಣ್ಣ ಬಂದೋಗ್ಯಾ... ನಮ್ಮ ಕಣ್ಣುಮುಂದೆ ದೇವರಾಜ ಅ... ಬಂದೋಗ್ಯವುನೆ. ನೀವು ಮಾಡ... ದೇವರಾಜ ಅರಸು ರಾಜಕಾ... ಮಾಡಬವುದೇ ವರತು ಮಾಯಾ... ಆಟ ಇಲ್ಲಿ ನ್ಯಡಿಯದು ಕಷ್ಟ."

"ದ್ಯಾವೇಗೌಡೇನೊ ಇದು ನನ್ನ ಕಡೆ ... ಅಂದವುನಂತೆ?" ಎಂದ ಸೀರ.

"ಅವುನ ಮಾತ್ನ ನಂಬುತಿಯ ಚಿಗಪ್ಪ? ... ಏನಾರ ಸರಕಾರ ಬದ್ದು ಚುನಾವಣೆ ಬಂದ್ರೆ ಇದು ... ಕಟ್ಟಕಡೇ ಆಟ ಅಂತನೆ. ಆಗೇನು ಕಿತಗಂಡಿ ಅವುಂ..."

"ಅದು ನಿಜವೆಯ ಬುಡು. ಅವುನ ನಾಲಗೆ ... ಆಗ್ಲೆ ಹನ್ಯರಡೊರ್ಸಾಯ್ತು."



ಕಳಂಕ ಹಚ್ಚಿ ಪರಂಪರೆ ಉಳಿಸಿ!

ಕುರುಕ್ಷೇತ್ರ ಯುದ್ಧದಲ್ಲಿನ ಅಭೂತಪೂರ್ವ ಯಶಸ್ಸಿನಿಂದ ಹಸ್ತಿನಾವತಿಯ ಜನತೆ ಪುಳಕಗೊಂಡಿತ್ತು. ಆನಂದೋತ್ಸಾಹದ ಅಲೆಯಲ್ಲಿ ತೇಲುತ್ತಿದ್ದ ಅವರು ಸಪರಿವಾರ ಸಮೇತವಾಗಿ ಪುರ ಪ್ರವೇಶಿಸುವ ಯುಧಿಷ್ಠಿರನನ್ನು ಸ್ವಾಗತಿಸಲು ತುದಿಗಾಲ ಮೇಲೆ ನಿಂತಿದ್ದರು. ಬ್ರಾಹ್ಮಣರು ಸ್ವಸ್ತಿವಾಚನಕ್ಕೆ ಸಿದ್ಧರಾಗಿದ್ದರು. ಆ ಅಮೃತ ಘಳಿಗೆ ಬಂದಿತು. ನಿರೀಕ್ಷಿಸಿದಂತೆ ಯುಧಿಷ್ಠರನು ಧೀರ ಗಂಭೀರ ನಡಿಗೆಯಿಂದ ಪುರ ಪ್ರವೇಶಿಸಿದನು. ಅಂತಹ ಸಿಹಿಗಳಿಗೆಯಲ್ಲಿ ಒಂದು ಅಚಾತುರ್ಯ ನಡೆಯಿತು. ಸನ್ಯಾಸಿ ವೇಷ ಧರಿಸಿದ, ದುರ್ಯೋಧನನ ಸ್ನೇಹಿತ ಆ ವಿಪ್ರವೃಂದದಲ್ಲಿದ್ದವನು, ಸಿಡಿಲಿನಂತೆ ಗುಡುಗಿದ: 'ಜಾತಿ ಬಾಂಧವರನ್ನೂ ಗುರುಗಳನ್ನೂ ಘಾತ ಮಾಡಿಸಿದ ನಿನಗೆ ನಮಸ್ಕಾರ! ಆದರೆ ಇಂಥ ಕುಲಕ್ಷಯವನ್ನು ಮಾಡಿದ ನಿಮಗೆ ಬದುಕು ಶ್ರೇಯಸ್ಕರವಲ್ಲ! ರಕ್ತಪಾತ ಮಾಡಿ ಬಂಧುಬಾಂಧವರನ್ನು ಕೊಂದು ನೀನು ಗಳಿಸಿದ ವಿಜಯ ನಿಜವಾದ ವಿಜಯವೆ!'

ಈ ಕ್ರೂರ ನಿಂದನೆಯಿಂದ ಜನಸ್ತೋಮ ಸ್ಥಂಭೀಭೂತವಾಯಿತು. ಯಾರ ಬಾಯಿಂದಲೂ ಮಾತು ಹೊರಡದಾಯಿತು. ಈ ಮಾತಿನ ವಜ್ರಾಘಾತದಿಂದ ಸುಧಾರಿಸಿಕೊಂಡ ಯುಧಿಷ್ಠಿರನು 'ನಿಮಗೆ ಪ್ರಣಾಮ ಮಾಡುತ್ತೇನೆ. ಬೇಡಿಕೊಳ್ಳುತ್ತೇನೆ. ನನ್ನ ಮೇಲೆ ಪ್ರಸನ್ನರಾಗಿರಿ. ದಯಮಾಡಿ ನನ್ನನ್ನು ಧಿಕ್ಕರಿಸಬೇಡಿರಿ' ಎಂದು ಬ್ರಾಹ್ಮಣರನ್ನು ಪ್ರಾರ್ಥಿಸಿದನು. ಆಗ ವಿಪ್ರವೃಂದ ಒಕ್ಕೊರಲಿನಿಂದ ಹೇಳಿತು: 'ರಾಜನೇ, ಈತ ಚಾರ್ವಾಕನೆಂಬ ರಾಕ್ಷಸನು. ದುರ್ಯೋಧನನ ಮಿತ್ರನು. ಅವನ ಹಿತವನ್ನು ಬಯಸುವವನು. ಸನ್ಯಾಸಿಯ ರೂಪದಲ್ಲಿ ಬಂದವನು. ಆತ ಹೇಳಿದ್ದು ನಮ್ಮ ಅಭಿಪ್ರಾಯವಲ್ಲ, ಆತ ನಮ್ಮ ಪ್ರತಿನಿಧಿಯೇ ಅಲ್ಲ!'

ಹೀಗೆ ಮಹಾರಾಜನಿಗೆ ಸಮಾಧಾನ ಹೇಳಿದ ವಿಪ್ರಶ್ರೇಷ್ಠರು ಕೋಪಾವಿಷ್ಟರಾಗಿ ಚಾರ್ವಾಕನನ್ನು ವೀಕ್ಷಿಸಲಾಗಿ ಇಂದ್ರನ ವಜ್ರಾಯುಧದಿಂದ ತಳಿರುಗಳಿಂದ ತುಂಬಿದ ಮರವು ಹೇಗೋ ಹಾಗೆ ಬ್ರಹ್ಮವಾದಿಗಳ ತೇಜಸ್ಸಿನಿಂದ ಆ ರಾಕ್ಷಸನು ಭಸ್ಮೀಭೂತನಾಗಿ ಕೆಳಗೆ ಬಿದ್ದನು.

ಈ ಘಟನೆ ನಡೆದಾಗ ಶ್ರೀಕೃಷ್ಣ ಪರಮಾತ್ಮನು ಸಾಕ್ಷಿಯಾಗಿದ್ದನು. ಆ ದೇವರು ಯುಧಿಷ್ಠಿರನಿಗೂ ಸಮಾಧಾನವಾಗಬೇಕು, ವಿಪ್ರವೃಂದವೂ ಸಂತುಷ್ಟವಾಗಬೇಕೆಂದು ಯೋಚಿಸಿ 'ಪ್ರೀತಿಯ ರಾಜನೇ, ಬ್ರಾಹ್ಮಣರು ಚಲಿಸುವ ದೇವತೆಗಳು. ಅವರು ಮಾತಿನಲ್ಲಿ ವಿಷವುಳ್ಳವರು. ಅಂದರೆ ಶಾಪ ಕೊಡಬಲ್ಲವರು. ಧರ್ಮವನ್ನು ಪ್ರಸಾರ ಮಾಡಬಲ್ಲವರು' ಎಂದು ಹೇಳಿ ಬ್ರಾಹ್ಮಣರನ್ನು ತೃಪ್ತಿಗೊಳಿಸಿ 'ಚಾರ್ವಾಕನ ಸಾವು ಅವನ ಹಣೆಬರಹ' ಎಂದನು!


ಹಣೆಬರಹ ಎಂದಮೇಲೆ ಅದಕ್ಕೆ ಕಾರಣ ಅಂತಾನೂ ಒಂದು ಇರಬೇಕಲ್ಲ, ಚಾರ್ವಾಕನ ಪೂರ್ವ ವೃತ್ತಾಂತವನ್ನು ಹೀಗೆ ಅರುಹಿದನು.

ಕೃತಯುಗದಲ್ಲಿ ಚಾರ್ವಾಕನೆಂಬ ಒಬ್ಬ ರಾಕ್ಷಸನು ಬದರಿಕಾಶ್ರಮದಲ್ಲಿ ಅನೇಕ ಕಾಲ ಉಗ್ರ ತಪಸ್ಸನ್ನು ಆಚರಿಸಿದನು. ಪ್ರತ್ಯಕ್ಷನಾದ ಬ್ರಹ್ಮನನ್ನು 'ಪ್ರಪಂಚದಲ್ಲಿ ಯಾವ ಪ್ರಾಣಿಯಿಂದಲೂ ನನಗೆ ಭಯ ಉಂಟಾಗದಂತೆ ಅನುಗ್ರಹಿಸು' ಎಂದು ಬೇಡಿಕೊಂಡನು. 'ತಥಾಸ್ತು' ಎಂದ ಬ್ರಹ್ಮ ಒಂದು ಶರತ್ತನ್ನು ವಿಧಿಸಿದನು. 'ಬ್ರಾಹ್ಮಣರಿಗೆ ನೀನು ಏನಾದರೂ ಅವಮಾನವಾಗುವಂತೆ ವರ್ತಿಸಿದರೆ ನಿನಗೆ ಪ್ರಾಣಭಯವಿದೆ' ಎಂದು ಹೇಳಿದನು. ದುರ್ಯೋಧನನ ಸ್ನೇಹ ಗಳಿಸಿದ ಈ ಚಾರ್ವಾಕ ಬ್ರಾಹ್ಮಣರನ್ನು ಅಪಮಾನಗೊಳಿಸಿದ್ದರಿಂದ ಈ ರೀತಿ ಸಾವನ್ನಪ್ಪಿದ.

ಗೌರೀಶ ಕಾಯ್ಕಿಣಿಯವರು 'ಲೋಕಾಯತ'ದಲ್ಲಿ ಪ್ರಸ್ತಾಪಿಸಿರುವ ಈ ವಿಷಯವನ್ನು ಇಲ್ಲಿ ಯಾಕೆ ಹೇಳಬೇಕಾಯಿತು ಅಂದರೆ.... ದೇವರು, ಧರ್ಮದ ಹೆಸರು ಕೊಲೆ, ಸುಲಿಗೆ, ಭ್ರಷ್ಟಾಚಾರ, ದಬ್ಬಾಳಿಕೆ ಇಂತಹವುಗಳಿಗೆ ಒಂದು ರೀತಿಯಲ್ಲಿ ರಹದಾರಿ ಇದ್ದ ಹಾಗೆ.

ಯುಧಿಷ್ಠಿರನ ತಪ್ಪುಗಳನ್ನು ಎತ್ತಿ ಆಡಿದವನನ್ನು ಇವನು ದುರ್ಯೋಧನನ ಸ್ನೇಹಿತ 'ಚಾರ್ವಾಕ', 'ರಾಕ್ಷಸ' ಅಂತ ವಿಪ್ರಶ್ರೇಷ್ಠರು ಹೇಳಿದ ಹಾಗೇನೆ ಇಂತಹ ಅನಿಷ್ಟಗಳ ವಿರುದ್ಧ ದನಿ ಎತ್ತುವವರನ್ನು ಈ ಕಾಲದಲ್ಲಿ 'ನಕ್ಸಲೈಟರು', 'ಅವರ ಬೆಂಬಲಿಗರು', 'ಹುಸಿ ಜಾತ್ಯತೀತ'ವಾದಿಗಳು ಇಂತಹ ಯಾವುದಾದರೂ ಒಂದು ಪಟ್ಟ ಕಟ್ಟಿದರಾಯಿತು. ಇವಕ್ಕೆ ಯಾವುದೇ ಆಧಾರ ಬೇಕಿಲ್ಲ. ಆಪಾದನೆ ಮಾಡುವುದಷ್ಟೇ ನಮ್ಮ ಕೆಲಸ. 'ನಕ್ಸಲೈಟು; 'ನಕ್ಸಲೈಟು' 'ಬೆಂಬಲಿಗ', 'ಹುಸಿ ಜಾತ್ಯತೀತವಾದಿ' ನಾನಲ್ಲ ಅಂತ ತೀಟೆ ಇದ್ದರೆ ಅವರು ಸಾಬೀತುಪಡಿಸಿಕೊಳ್ಳಾರೆ! ಒಂದು ವೇಳೆ ಸಾಬೀತು ಪಡಿಸಿದರು ಅಂತಾನೆ ಇಟ್ಟುಕೊಳ್ಳೋಣ. ಆಗ ಶ್ರೀಕೃಷ್ಣ 'ಚಾರ್ವಾಕನ ಹಣೆಬರಹ'ದ ಕಥೆ ಹೆಣೆದ ಹಾಗೆ ಒಂದು ಕಥೆ ಹೆಣೆದರಾಯಿತು! ಇಂತಹದ್ದರಲ್ಲಿ ನೈಪುಣ್ಯ ಪಡೆದ ಪಂಡಿತರಿಗೇನೂ ಬರ ಇಲ್ಲ!

* * * * * *



ಅಣಕ

■ ಎಚ್.ಎಲ್. ಕೇಶವಮೂರ್ತಿ

ಎಂ.ಪಿ. ಪ್ರಕಾಶರ ಸ್ಥಿತಿ ಶೋಚನೀಯ ಆಗಿದೆ...

ಬಿಜೆಪಿ ಸೇರ್‍ತಾರೆ ಅಂತ ಸುದ್ದಿ ಮಾಡಿದರು. ... ಹಾಗೆ ಕಾಂಗ್ರೆಸ್ ಬಾಗಿಲು ತಟ್ತಾ ನಿಂತರು. ಕಾಂಗ... ಸೇರುವುದು ಖಾತರಿ ಅಂದರು. ಒಳಗೊಳಗೆ ಬಿ... ಜೊತೆ ಮಾತುಕತೆಗೆ ಇಳಿದರು. ಒಟ್ಟಿನಲ್ಲಿ ಒಂದೆರ... ತಿಂಗಳಿನಿಂದ ಸುದ್ದಿಯಲ್ಲಿದ್ದಾರೆ. ಯಾವುದಾದರೂ ಒಂ... ಖಚಿತ ನಿಲುವು ತಾಳಿದ್ದರೆ ಅವರು ಸುದ್ದಿಯ... ಇರುತ್ತಿರಲಿಲ್ಲವೇನೋ!

ಅಲ್ಲ, ಬಿಜೆಪಿ-ಕಾಂಗ್ರೆಸ್ ತತ್ವ, ಸಿದ್ಧಾ... ಎಣ್ಣೆಸೀಗೆಕಾಯಿ ತರಹ ಅಲ್ಲವ. ಅದು ಹೇಗೆ ಅದಾದ... ಸೈ ಇದಾದರೂ ಸೈ ಅಂತಾರೆ ಈ ಎಂ.ಪಿ ಪ್ರಕಾ... ಇವರಿಗೇನು ತತ್ವ ಸಿದ್ಧಾಂತವೇ ಇಲ್ಲವೇ ಅಂದರೆ, ... 'ಅಧಿಕಾರ ಗದ್ದುಗೆ ಹಿಡಿಯುವ' ಸಿದ್ಧಾಂತ!

ಈ ರಾಜಕಾರಣಿಗಳಿಗೆ ಒಂದು ಭ್ರಮೆ ಇದೆ. ... ಹುಂಜ ಕೂಗಿದರೇ ಬೆಳಕು ಹರಿಯುವುದು ಎಂಬ ಭ್ರ...

'ಮಾಯಾವತಿ ಸೋನಿಯಾಗಿಂತ ವರ್ಚಸ್ವಿ ನಾಯ...

ಇರಬಹುದು. ಇದನ್ನು ಹೇಳಬೇಕಾದವರು ಯಾ... ಜನತೆ. ಇದನ್ನು ಹೇಳಿದವರು ಯಾರು? ಸ್ವಯಂ... ಮಾಯಾವತಿ!

'ಎಂಜಿಆರ್ ಉತ್ತರಾಧಿಕಾರಿ ಯಾರು?'

ಅವರು ವಿಲ್ ಬರೆದಿಲ್ಲ, 'ನಾನು' ಎಂದರು ಸ್ವಯಂ... ಜಯಲಲಿತ!

'ನಾವು ಯಾವ ಪಕ್ಷಕ್ಕೆ ಹೋದರೆ ಆ ಪಕ್ಷ ಅಧಿಕಾ... ಬರುತ್ತೆ'

ಇದನ್ನು ಹೇಳಿದವರು ಯಾರು?

ಸ್ವಯಂ ಎಂ.ಪಿ. ಪ್ರಕಾಶ್ ಅವರು!

ಅವರ ಪಾದ ಧೂಳಿಸ್ಪರ್ಶ ಆದರೆ ಸಾಕು. ಆ... ಪುನೀತ! ಆದರೂ ಇವರನ್ನು ಒಳಗೆ ಬಿಟ್ಟುಕೊಳ್ಳ... ಹಲವರ ವಿರೋಧ! ಇವರು ಬಂದರೆ ಪಕ್ಷ ಅಧಿಕಾ... ಬಂದೇಬರುತ್ತದೆ ಎಂಬ ದಿಗಿಲು ಆವರಿಸಿರಬೇಕು!

"ಅವ್ವಾವ ಲ್ಲಕ್ಷಣದಲ್ಲಿ ಹನ್ನರಡರೂರ್ಷ ಅಂತಿ ಚಿಗಪ್ಪ?"

"ಆಗ ಗಂಗಾಧರಮೂರ್ತಿ ಕ್ಲಲಿಯಾಗಿತ್ತಲ್ಲ? ಅದತ್ತು ಬಂದೋಣು ಈ ಶಿವರಾಮೇಗೌಡನಂಥೋನ ಜೊತೆ ರಾಜಕಾರಣ ಮಾಡದೆ ಆದ್ರೆ ರಾಜಕಾರಣ ಬುಟ್ಟು ಮನಿಗೋಯ್ತಿನಿ ಅಂದಿದ್ನ. ಅದೇ ಶಿವರಾಮೇಗೌಡ ದ್ಯಾವೇಗೌಡುನ್ನ ಕರಕಂಡು ಬಂದು ಕತ್ಗೆ ಹೂವಿನಾರ ಹಾಕಿಸಿಗಂಡ. ಅವುತ್ತೇ ನನಿಗ್ಗೊತ್ತಾಯ್ತು" ಎಂದ ಸೀರ.

"ರಾಜಕಾರಣದಲ್ಲಿ ಅವೆಲ್ಲ ಕಾಮನ್ ಚಿಗಪ್ಪ. ಅಂತವುನ್ನೆಲ್ಲ ಸೀರಿಯಸ್ಸಾಗಿ ತಗಬ್ಯಾಡ."

"ಅಂಗಂತಿಯಾ?"

"ಎಸ್. ಇಡೀ ದೇಸ ಸುತ್ತೊ ಪೇಜಾವರಸ್ವಾಮಿ ನಾಲಿಗೆನೆ ಕೆಟ್ಟು ಕ್ಯರ ಹಿಡದೋಗ್ಯದೆ. ಅವುನು ಇವತ್ತಾಡಿದ ಮಾತ ನಾಳೆ ಅಲ್ಲಗಳಿತನೆ. ನಾನು ಅಂಗಲ್ಲ ಹೇಳಿದ್ದು ಅಂತನೆ. ತೀರ ತಲಿಕೆಟ್ರೆ ನಾನಂಗೆ ಹೇಳೇಯಿಲ್ಲ ಅಂತನೆ. ಜಗದ್‌ಗುರುವೇ ಅಂಗಿರುವಾಗ ಇನ ದ್ಯಾವೇಗೌಡುಂದು ಯಾವ ಲೆಕ್ಕ, ಹೇಳು?"

"ಅಂಥಾ ಸ್ವಾಮಿನೇನ್ನ ಅವುನು?"

"ಸ್ವಾಮಿ ಅನ್ನಬ್ಯಾಡ. ಬೇಕಾದ್ರೆ ವಿಶ್ವೇಶ ತೀರ್ಥ ಅನ್ನು. ಅವುನು ಈಗ್ಯಂತ ಪಟ್ಟಾಕ್ಯವ್ನನೆ ಗೊತ್ತೆ? ಸುಗುಣೇಂದ್ರ ಕೃಷ್ಣನ ಪೂಜೆ ಮಾಡದೇ ಆದ್ರೆ ಕೃಷ್ಣನ್ನ ಮುಟ್ಟಬಾರ್ದು ಅಂತ ಕಂಡಿಷನ್ ಮಾಡ್ಯವ್ನನೆ."

"ಈ ಗುರುಗಳಾಟ ನೋಡಿದ್ರೆ, ಕನಕದಾಸನಿಗೆ ಇನ್ನೆಂಥಾ ಕ್ವಲೆ ಕೊಟ್ಟಿರಬೇಕಿವ್ರುರು?" ಎಂದ ಸೀರ.

"ಏ, ಕನಕದಾಸನ ಸಿನುಮದಲ್ಲಿ ರಾಜಕುಮಾರನ್ನ ಕಂಬಕ್ಕಟ್ಟಿವಡಿತರಲ್ಲಾ? ಅದು ಸುಳ್ಳಲ್ಲ ಚಿಗಪ್ಪ, ಹಂಡ್ರೆಡ್ ಪರಸೆಂಟ್ ನಿಜ. ಕಂಬಕ್ಕಟ್ಟಿ ವಡುದ್ರು ಕೂಡ ಕನಕ ಹಟ ಬುಡದೆ ನಾನು ದೇವರ ನೋಡ್ಲೇಬೇಕು ಅಂದವ್ನನೆ. ಆಗ ಗುಡಿ ಹಿಂದಕೆ ಬಾ ಅಂತ ಕರದು ಗ್ವಾಡೆ ವಡದು ಕಿಸ್ನನ್ನ ತಿರುಗ್ಸಿ ನೋಡ್ಸಿ ಕಳಿಸ್ಯವ್ರುರೆ, ಗೊತ್ತೆ?"

"ಅಂಗಂತಿಯಾ?"

"ದಿಸೀಸ್ ರಿಯಲ್ ಹಿಸ್ಟರಿ. ಬೇಕಾದ್ರೆ ಪೇಜಾವರಶ್ರೀಗೆ ಟ್ರಿಂಕ್ಸ್ ಮಾಡ್ಸಿ ಕೇಳಿದ್ರೆ ಇದ್ನೆ ಹೇಳದವ್ರುನು" ಎಂದು ನಾಟಿಸ್ಸೆ ಹೇಳುವಾಗ ಎಲ್ಲ ನಗಾಡಿದರು. ■

ಹೌದು, ಹಲವಾರು ರಾಜಕೀಯ ಪಕ್ಷಗಳು ಇವೆ. ಕೆಲವು ಪಕ್ಷಗಳವರಾದರೂ ಪ್ರಕಾಶ್ ಅಂಡ್ ಕಂಪನಿಗೆ ರೆಡ್ ಕಾರ್ಪೆಟ್ ಸ್ವಾಗತ ನೀಡಲು ಸಿದ್ಧ ಇದಾವೆ. ಇವರು ಆ ಪಕ್ಷಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು ಅದನ್ನು ಅಧಿಕಾರದ ಗದ್ದುಗೆಗೆ ತರಬಹುದಲ್ಲಾ.....!

'ಸಕ್ರಿಯ ರಾಜಕೀಯದಿಂದ ನಿವೃತ್ತಿ' ಘೋಷಿಸಿದ್ದರು ಪ್ರಕಾಶ್. ಕೆಲವು ತಿಂಗಳುಗಳ ಹಿಂದಿನ ಮಾತು ಇದು. ನಿವೃತ್ತಿಯ ನಂತರ ಓದು, ಬರಹಗಳಲ್ಲಿ ತಲ್ಲೀನನಾಗುವೆ ಎಂದೂ ಹೇಳಿದ್ದರು. ಈಗ ಕಾಲ ಪ್ರಶಸ್ತವಾಗಿದೆ. ಅದನ್ನೇ ಮಾಡಬಹುದಲ್ಲ ಅಂದರೆ.... ಹುಟ್ಟಿದರೆ ಒಳ್ಳೆ ಮಕ್ಕಳು ಹುಟ್ಟಬೇಕು. ತಮ್ಮ ಮಗನ್ನ ರಾಜಕೀಯಕ್ಕೆ ತಂದು ನೆಲೆಪಡಿಸುವ ಜವಾಬ್ದಾರೀನೂ ತಂದೆಯಾದ ಎಂ.ಪಿ. ಪ್ರಕಾಶ್ ಅವರ ಮೇಲೆ ಇದೆಯಲ್ಲಾ....!

* * * * * *

'ದಲಿತ್ ಕಬೇಟಿ'ಯ ಐವತ್ತೆರಡನೆ ಹುಟ್ಟುಹಬ್ಬ. ಲಕ್ನೋ, ದೆಹಲಿಗಳಲ್ಲಿ, ಒಂದು ಉತ್ತರ ಪ್ರದೇಶದ ರಾಜಧಾನಿ. ಇನ್ನೊಂದು ದೇಶದ ರಾಜಧಾನಿ. ಒಂದರಲ್ಲಿ ಮುಖ್ಯಮಂತ್ರಿ. ಇನ್ನೊಂದರಲ್ಲಿ ಭಾವೀ ಪ್ರಧಾನಿ! ಹಾಗೆ ಕರೆಸುವುದು ಅಪರಾಧ ಅಲ್ಲ.

ಬೆಂಗಳೂರಿನಲ್ಲಿಯೂ ಅದ್ದೂರಿ ಸಮಾರಂಭ. ಬಿಎಸ್‌ಪಿಯ ಮುಖಂಡ ವೀರ್‌ಸಿಂಗ್ ಅವರ ಘೋಷಣೆ: 'ನಾವು ಅಧಿಕಾರಕ್ಕೆ ಬಂದರೆ ಕರ್ನಾಟಕವನ್ನು ಉತ್ತರ ಪ್ರದೇಶ ಮಾದರಿಯಲ್ಲಿ ಅಭಿವೃದ್ಧಿ ಪಡಿಸುತ್ತೇವೆ.'

ಉತ್ತರ ಪ್ರದೇಶದ ಅಭಿವೃದ್ಧಿ ಮಾದರಿ ಯಾವುದು?

ಇರುವ ನಲವತ್ತೊಂಬತ್ತು ಮಂತ್ರಿಗಳಲ್ಲಿ ಇಪ್ಪತ್ತೆರಡು ಜನರ ಮೇಲೆ ಕ್ರಿಮಿನಲ್ ಮೊಕದ್ದಮೆ ಇರುವುದು!

ಹುಟ್ಟುಹಬ್ಬದ ಆಚರಣೆಗಾಗಿ 'ಪಕ್ಷನಿಧಿ' ಹೆಸರಿನಲ್ಲಿ ಸಾರ್ವಜನಿಕರ ಹಣ ದೋಚುವುದು!

'ಸಾತ್ ದಿನ್ ಕ ಸುಲ್ತಾನ್' ಯಡಿಯೂರಪ್ಪ ಪಟ್ಟಾಭಿಷೇಕಕ್ಕೆ ಬಂದಿದ್ದ ಸಾವಿನ ವ್ಯಾಪಾರಿ ನರೇಂದ್ರ ಮೋದಿ ಘೋಷಣೆ! ಕರ್ನಾಟಕದಲ್ಲೂ ಗುಜರಾತಿನಂತಹ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತೇವೆ!'

ಎಂತಹ ಅಭಿವೃದ್ಧಿ ಅದು?

ಸಾವಿರಾರು ಮುಗ್ಧರ ಹೆಣಗಳ ಮೇಲೆ ಅಧಿಕಾರದ ಗದ್ದುಗೆ ಏರುವ ರಕ್ತಪಾತದ ಅಭಿವೃದ್ಧಿ!

ಆ ರಾಜ್ಯದ ಮಾದರಿ, ಈ ರಾಜ್ಯದ ಮಾದರಿ [illegible] 'ಕರ್ನಾಟಕದ ಮಾದರಿ' ಎಂಬುದೇ [illegible]! ■

"ಟ್ವೀಡ್ಲ್‌ಡಂ ಅಂಡ್ ಟ್ವೀಡ್ಲ್‌ಡೀ"

ಇಬ್ಬರು ಒಂದೇ ತರಹ ಇದ್ದಾಗ ಅವಳಿಜವಳಿ, ಕರಟಕ-ದಮನಕ, ಪಡಿಯಚ್ಚು ಇತ್ಯಾದಿಯಾಗಿ ಹೇಳಲಾಗುತ್ತದೆ. ಇಂಗ್ಲಿಷ್‌ನಲ್ಲಿ ಟ್ವೀಡ್ಲ್‌ಡಂ ಅಂಡ್ ಟ್ವೀಡ್ಲ್‌ಡೀ ಎನ್ನುವುದುಂಟು. ಮೊನ್ನೆ ಕೆಲವರು ಕ್ರಾಂತಿಕಾರರು ನನ್ನನ್ನು, "ಭಾರತ ಬಂದ್‌ಗೆ ನೀವು ಯಾವ ನಿಲುವನ್ನೂ ತೆಗೆದುಕೊಳ್ಳಲಿಲ್ಲವಲ್ಲ?" ಅಂದರು. ನಾನು ಯೋಚಿಸಿ ಕೇಳಿದೆ, "ಯಾವ ನಿಲುವು ಸರಿ ಹೋಗುತ್ತಿತ್ತು?"



ಬಂದ್ ಮಾಡಿ ಎಂದರೆ ಹೆಗಡೆ, ಆಳ್ವ, ಬೊಮ್ಮಾಯಿಗಳ ಜೊತೆಗೆ ಇರುತ್ತೇವೆ; ಬಂದ್ ಮಾಡಬೇಡಿ ಅಂದರೆ ಅತ್ಯಂತ ಘೋರ ಪಾತಕಿಗಳಾದ ಕಾಂಗ್ರೆಸಿಗಳ ಜೊತೆಗಿರುತ್ತೇವೆ. ಇವೆರಡೂ ಗುಂಪುಗಳ ಸೆರಗು ಹಿಡಿದು ನೇತಾಡುವ ದೇವೇಗೌಡ, ಬಿಜೆಪಿ, ಕಮ್ಯುನಿಸ್ಟರೆಲ್ಲ ಇದ್ದಾರೆ. ಈ ಸಂದರ್ಭದಲ್ಲಿ ಟ್ವೀಡ್ಲ್‌ಡಂಗಳನ್ನು ಬೆಂಬಲಿಸೋಣವೋ ಟ್ವೀಡ್ಲ್‌ಡೀಗಳನ್ನೋ?

ಕಾಂಗ್ರೆ ಟ್ವೀಡ್ಲ್‌ಡಂ, ದಳ ಟ್ವೀಡ್ಲ್‌ಡೀ. ಇದು ಲೂಯಿ ಕ್ಯಾರೋಲ್ ಬರೆದ ಆಲೀಸ್ ಇನ್ ದಿ ವಂಡರ್‌ಲ್ಯಾಂಡ್‌ನಲ್ಲಿ ಬರುತ್ತದೆ. ಇಬ್ಬರು ದಪ್ಪನೆಯ, ಪೆದ್ದರಾದ, ತಿಕ್ಕಲುಗಳಾದ ವ್ಯಕ್ತಿಗಳಿರುತ್ತಾರೆ. ಥೇಟ್ ಒಬ್ಬನ ತರಹ ಇನ್ನೊಬ್ಬ ಒಬ್ಬನ ಹೆಸರು ಡಮ್, ಇನ್ನೊಬ್ಬ ಡೀ. ಇಬ್ಬರಿಗೂ ಸಮಾನವಾದದ್ದು ಟ್ವೀಡ್ಲ್ (ಪೀಪಿ ಸದ್ದು). ಇವರಿಬ್ಬರೂ ಎಷ್ಟು ಒಂದೇ ತರಹ ಇರುತ್ತಾರೆಂದರೆ ಇವರು ಡಂ ಮತ್ತು ಡೀ ಎಂದು ಬೋರ್ಡ್ ಹಾಕಿಕೊಂಡಿರುತ್ತಾರೆ. ಇಂಗ್ಲಿಷ್ ನಿಘಂಟಿನಲ್ಲಿ "ಟ್ವೀಡ್ಲ್‌ಡಂ ಅಂಡ್ ಟ್ವೀಡ್ಲ್‌ಡೀ"ಗೆ 'ವ್ಯತ್ಯಾಸವೇ ಇಲ್ಲದ ಭಿನ್ನತೆ' ಎಂದು ಅರ್ಥ ನೀಡಿದ್ದಾರೆ!

ಮರೆಯುವ ಮುನ್ನ



■ ಪಿ. ಲಂಕೇಶ್ -ಸೆಪ್ಟೆಂಬರ್ 10, 1989

"ಅದು ನಾನು ಬರೆದದ್ದಲ್ಲ!"



ಅದೆಲ್ಲ ಸದ್ಯಕ್ಕೆ ಇರಲಿ. 'ಪಾತಾಳದಲ್ಲಿ ಪಾಪಚ್ಚಿ'ಯನ್ನು ನಿಮ್ಮಲ್ಲಿ ಕೆಲವರು ಓದಿರಬಹುದು. ನಾನು ಚಿಕ್ಕವನಾಗಿದ್ದಾಗ ಓದಿದ ಪುಸ್ತಕ ಇದು; ನಾ. ಕಸ್ತೂರಿಯವರು ಲೂಯಿ ಕ್ಯಾರೋಲ್‌ನ 'ಆಲೀಸ್ ಇನ್ ದಿ ವಂಡರ್‌ಲ್ಯಾಂಡ್' ಎಂಬ ಪುಸ್ತಕವನ್ನು ಕನ್ನಡಕ್ಕೆ ರೂಪಾಂತರಿಸಿದ್ದಾರೆ. ಈ ಪುಸ್ತಕ ಬರೆದ ಹತ್ತೊಂಭತ್ತನೆ ಶತಮಾನದ ಲೂಯಿ ಕ್ಯಾರೋಲ್ ಸಂಕೋಚದ, ಮೌನಿಯಾದ ಬ್ರಹ್ಮಚಾರಿ. ಕಾಲೇಜಿನಲ್ಲಿ ವಿಜ್ಞಾನದ ಪ್ರೊಫೆಸರ್. ಈತ ತನ್ನ ಗೆಳೆಯರ ಮಕ್ಕಳನ್ನು ರಂಜಿಸಲು ಈ ಪುಸ್ತಕ ಬರೆದ. ಜನಕ್ಕೆ ಈ ಪುಸ್ತಕ ತುಂಬ ಹಿಡಿಸಿತು. ಇದನ್ನು ಎಷ್ಟು ಹಚ್ಚಿಕೊಂಡರೆಂದರೆ ಲೂಯಿ ಕ್ಯಾರೋಲ್ ಇಡೀ ಜಗತ್ತಿನಲ್ಲಿ ಪ್ರಖ್ಯಾತನಾದ. ಆದರೆ ಕ್ಯಾರೋಲ್ ಕೆಲವು ಪಾಂಡಿತ್ಯಪೂರ್ಣ ವಿಜ್ಞಾನದ ಪುಸ್ತಕಗಳನ್ನು ಬರೆದಿದ್ದ. ಮಕ್ಕಳ ಪುಸ್ತಕವಾದ ಪಾಪಚ್ಚಿಗೆ ಬದಲು ಈ ವಿಜ್ಞಾನದ ಪುಸ್ತಕಗಳ ಮೂಲಕವೇ ಹೆಸರು ಪಡೆಯಬೇಕೆಂದು ಬಯಸಿದ್ದ ಈತ. ಈತನ ನಿಜವಾದ ಹೆಸರು ಡಾಡ್ಜ್‌ಸನ್. ಪಾಪಚ್ಚಿಯನ್ನು ಲೂಯಿ ಕ್ಯಾರೋಲ್ ಎಂಬ ಕಾಲ್ಪನಿಕ ಹೆಸರಿನಲ್ಲಿ ಪ್ರಕಟಿಸಿದ್ದ. ಇದೆಲ್ಲದರ ಬಗ್ಗೆ ಕ್ಯಾರೋಲ್‌ಗೆ ಎಷ್ಟು ಮುಜುಗರ ಎಂದರೆ ಪಾಪಚ್ಚಿ ತುಂಬ ಪ್ರಖ್ಯಾತವಾದ ಮೇಲೆ ಆ ಬಗ್ಗೆ ಪ್ರಶ್ನಿಸಿದರೆ ಈತ ಹೇಳುತ್ತಿದ್ದ "ನನ್ನ ನಿಜವಾದ ಹೆಸರಿನಲ್ಲಿ ಪ್ರಕಟವಾಗದ ಯಾವ ಪುಸ್ತಕವೂ ನನ್ನದಲ್ಲ."

ಈತನ ಹತ್ತೊಂಭತ್ತನೆ ಶತಮಾನಕ್ಕೆ ಒಂದು ಶತಮಾನ ಮುಂಚೆ, ಹದಿನೆಂಟನೆ ಶತಮಾನದಲ್ಲಿ ಬರೆದ ಇನ್ನೊಂದು ಪುಸ್ತಕವಿದೆ. ಅದೂ ಆಕಸ್ಮಿಕವಾಗಿ, ಸಾಹಿತಿಯೊಬ್ಬನ ಮನಸ್ಸು ಸ್ಫೂರ್ತಿಯಿಂದ ತುಂಬಿದಾಗ ಹೊಮ್ಮಿದ ಪುಸ್ತಕ. ಅದು ಲೈಂಗಿಕ ಪುಸ್ತಕ. 'ಫ್ಯಾನಿ ಹಿಲ್' ಎಂಬ ಈ ಪುಸ್ತಕವನ್ನು ಬರೆದವನು ಜಾನ ಕ್ಲೆಲ್ಯಾಂಡ್. ಕ್ಯಾರೋಲ್ ಮತ್ತು ಕ್ಲೆಲ್ಯಾಂಡ್ ಇವತ್ತು ನೂರೈವತ್ತು ವರ್ಷ ಇನ್ನೂರೈವತ್ತು ವರ್ಷ ಮುಗಿಸಿ ಹಚ್ಚ ಹಸಿರಾಗಿ, ಚೇತೋಹಾರಿಯಾಗಿ ಉಳಿದಿದ್ದಾರೆ.

ತೀರಿಕೊಂಡ ಶಿಕ್ಷಕಿ

ಮಧ್ಯಮ ವರ್ಗದ ಭಾರತೀಯರಿಗೆ ಹಲವು ರೀತಿಯಲ್ಲಿ ಶಾಕ್ ಆಗಿರುತ್ತದೆ. ಶಾಕ್‌ನ ಅನೇಕ ಮೂಲಗಳಲ್ಲಿ ಒಂದು ಇಂಗ್ಲಿಷ್ ಭಾಷೆ. ಬರಬೇಕಾದಷ್ಟು ಇಂಗ್ಲಿಷ್ ಬಾರದೆ, ಬರಬೇಕಾದ ರೀತಿಯಲ್ಲಿ ಬಾರದೆ; ಇಂಗ್ಲಿಷ್ ಕಲಿತವರೆಲ್ಲ ದೊಡ್ಡವರು, ವಿಶಿಷ್ಟರು ಅನ್ನಿಸಿ; ತಮಗೆ ದಕ್ಕದೆ ಇದ್ದ ಇಂಗ್ಲಿಷ್ ತಮ್ಮ ಮಕ್ಕಳಿಗಾದರೂ ಸಿಗಲಿ ಅನ್ನಿಸಿ..... ಮೊನ್ನೆ ತೀರಿಕೊಂಡ 'ಹೋಂ ಸ್ಕೂಲ್'ನ ಸರ್ವಾಧಿಕಾರಿಣಿ ಮಿಸ್ ಮಾದಪ್ಪನವರನ್ನು ಕಂಡರೆ ಒಮ್ಮೊಮ್ಮೆ ಸಿಟ್ಟು ಬರುತ್ತಿತ್ತು. ಆಕೆ ಕೊಡಗಿನ ಹೆಂಗಸು: ಒಮ್ಮೆಯೂ ಕನ್ನಡ ಮಾತಾಡದೆ ಇದ್ದಂಥ ಹೆಣ್ಣುಮಗಳು. ಗಂಡ, ಮಕ್ಕಳು, ಸ್ನೇಹಿತರು ಯಾರೂ ಇದ್ದಂತಿರಲಿಲ್ಲ. ಸ್ಕೂಲು ಚೆನ್ನಾಗಿ ನಡೆಸುತ್ತಿದ್ದರು. ಶಿಸ್ತಿನಿಂದ, ಸೂಕ್ಷ್ಮವಾಗಿ, ಕಟ್ಟುನಿಟ್ಟಾಗಿ. ಈಕೆಯ ಬಗ್ಗೆ ನನಗೆ ಏಕೆ ತಾತ್ಸಾರದ ಜೊತೆಗೆ ಗೌರವ ಬರುತ್ತಿತ್ತು ಎಂದು ನೋಡಿಕೊಂಡಿದ್ದೇನೆ. ಕಾರಣಗಳು ಹೀಗಿರಬಹುದು: ಈಕೆ ಯಾರ ಹಂಗಿನಲ್ಲೂ ಇರಲಿಲ್ಲ, ಭ್ರಷ್ಟಳಾಗಿರಲಿಲ್ಲ. ಮಕ್ಕಳನ್ನು ಪ್ರೀತಿಸುತ್ತಿದ್ದಳು, ಮಕ್ಕಳಿಗೆ ಶಿಕ್ಷಣ ನೀಡುವುದರಲ್ಲಿ ಸಾರ್ಥಕ್ಯ ಪಡೆದಿದ್ದಳು. ಎಲ್ಲಕ್ಕಿಂತ ಹೆಚ್ಚಾಗಿ ಈಕೆ ನಮ್ಮ ಮಕ್ಕಳಿಗೆ ನಾವೆಲ್ಲ ಕೊಡಲಾಗದಂಥ ಘನತೆ, ವ್ಯಕ್ತಿತ್ವ, ಆತ್ಮವಿಶ್ವಾಸ, ಸ್ವಾವಲಂಬನೆ ಇವನ್ನೆಲ್ಲ ಕೊಡಬಹುದು ಎಂಬ ಆಶೆ ನಮ್ಮಲ್ಲಿತ್ತು.

ಅಪ್ಪಟ ಕನ್ನಡ ಪ್ರೇಮಿಗಳಾದ ನಮ್ಮಂಥವರಲ್ಲಿ ಕೂಡ ಆಕೆಯ ಬಗ್ಗೆ ನಮಗೆಲ್ಲ ಇದ್ದ ತಾತ್ಸಾರ ಬೇಕೆಂತಲೇ ಹುಟ್ಟಿಸಿಕೊಂಡದ್ದು. ಯಾಕೆಂದರೆ ನಮಗೆಲ್ಲ ಗೊತ್ತಿತ್ತು. ಆಕೆಗಿದ್ದ ಶಿಸ್ತು ಮತ್ತು ಛಲ ಕನ್ನಡಕ್ಕೆ ಕೂಡ ನೆರವಾಗಬಲ್ಲದು. ಗೊಂದಲವಾಗುತ್ತಿದೆಯೆ? ಇಲ್ಲ ವಿವರಿಸುತ್ತೇನೆ. ವೇಳೆ, ಸ್ವಚ್ಛತೆ, ಗ್ರಹಿಕೆ ಮುಂತಾದ್ದನ್ನು ಕುರಿತು ಮಿಸ್ ಮಾದಪ್ಪನಿಗಿದ್ದ ಕಾಳಜಿ ಎಷ್ಟೆಂದರೆ, ಆಕೆಯ ಈ ಮೌಲ್ಯಗಳನ್ನು ಮೈಗೂಡಿಸಿಕೊಂಡವನು ಕನ್ನಡದ ಅನಿವಾರ್ಯತೆಯನ್ನು ತಿಳಿದುಕೊಳ್ಳಲು ಬೇಕಾದ ಮನಸ್ಸು ಪಡೆಯುತ್ತಿದ್ದ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ನಮ್ಮ ಕನ್ನಡ ಶಾಲೆಗಳಲ್ಲಿ ಕೂಡ ಕನ್ನಡ ನಿಜಕ್ಕೂ ಬೆಳೆಯಬೇಕಾದರೆ, ಕನ್ನಡದ ಮೂಲಕ ನಮ್ಮ ಮಕ್ಕಳು ವಿಕಸನಗೊಳ್ಳಬೇಕಾದರೆ, ಆಕೆಗಿದ್ದ ಶಿಸ್ತು ಮತ್ತು ಛಲ ಇಲ್ಲದಿದ್ದರೆ ಆಗುವುದಿಲ್ಲ, ಕನ್ನಡ ಪ್ರೇಮ ಬರೀ ಬಯಕೆಗಳಾಗಿಯೇ ಉಳಿದುಬಿಡುತ್ತದೆ.

ಜೈಲಿನ ರೊಟ್ಟಿ

ಮನುಷ್ಯರೆಲ್ಲರೂ ತಿನ್ನುವ
ಜೇಲಿನ ರೊಟ್ಟಿಯ
ಆಕಾರ ಯಾವಾಗಲೂ ಅನಿಶ್ಚಿತ
ಅರ್ಧ ರುಚಿಹೀನ ಅರ್ಧ ಸಿಹಿ
ಕೊಂಚ ಬೇಯ್ದಂತೆ ಕಾಣುವ ಹಸೇಹಿಟ್ಟು
ಜೇಲೊಳಗಿನ ಅಗಾಧ ಹಸಿವೆಗೆ
ಅಕಸ್ಮಾತ್ ತಡ ಮಾಡುವ ಕೈಗೆ
ಆ ರೊಟ್ಟಿ ಕೂಡ ಸಿಗುವುದಿಲ್ಲ!
ಅಂಥ ರೊಟ್ಟಿ ಕೂಡ ಜೇಲೊಳಗೆ
ಉದ್ದ ಗಿಡ್ಡ ಕತ್ತರಿಸಿಕೊಂಡು ಬರುತ್ತದೆ
ಹಾಗೆ ಬಂದಾಗದರ ಮೇಲೆ
ಜೇಲಿನಾಧಿಕಾರಿಗಳ ತಾಜಾ ಜೊಲ್ಲು ಅಂಟಿರುತ್ತದೆ

ಹಗಲು ಜೇಲಿನ ಕೋಣೆಯ ತುಂಬ
ಗಬ್ಬು ವಾಸನೆ ಬೂಸು ಹಿಡಿಯಬಾರದು
ಎಂದು ತಂಗಳು ರೊಟ್ಟಿ ಅಂಗಾತ ಮಲಗಿರುತ್ತವೆ
ಮನೆಯ ಈ ರೊಟ್ಟಿ ಜೇಲೊಳಗೆ ಬರಲೂ
ಜೇಲಿನ ಕಂಬಿಗಳಿಗೆ ಲಂಚ ತಿನ್ನಿಸಿವೆ.

ಹೊಟ್ಟೆಯ ಹಸಿವು ನೀಗಿಸುವ ಆ
ರೊಟ್ಟಿಯ ತಿನ್ನುತ್ತಲೇ
ಹಸಿದ ಹೊಟ್ಟೆಯ ಕಣ್ಣುಗಳಿಗೆ
ಸಾಮಾಜಿಕ ನ್ಯಾಯ ರೊಟ್ಟಿಯ
ಕನಸು ತಿನ್ನಿಸಿದೆ
ಎಂಥ ವಿಚಿತ್ರ! ಆ ಗಳಿಗೆಯಿಂದ
ನಮ್ಮ ರೊಟ್ಟಿಯ ರುಚಿಯೇ
ಬದಲಾಗಿ ಹೋಯಿತು.



■ ಬಸವರಾಜ ಸೂಳಿಭಾವಿ

ಟಾಟಾನ ತೇರು!

(3ನೇ ಪುಟದಿಂದ)

ನೀರು ನಿಲ್ಲುತ್ತದೆ. ಅದನ್ನು ಆ ಪ್ರದೇಶದಿಂದ ಹೊರತೆಗೆಯುವ ವೆಚ್ಚ ಕಂಪನಿಯ ಒಟ್ಟಾರೆ ಹೂಡಿಕಾ ವೆಚ್ಚದ ಭಾಗವೇ. ಆದರೆ ಸಿಂಗೂರಿನಲ್ಲಿ ಸರ್ಕಾರವೇ 170 ಕೋಟಿ ಖರ್ಚು ಮಾಡಿ ಟಾಟಾಗಾಗಿ ಒಳಚರಂಡಿ ವ್ಯವಸ್ಥೆ ಮಾಡಿಕೊಡುತ್ತಿದೆ.

ಅದೇರೀತಿ ವಿದ್ಯುತ್ ಮತ್ತು ನೀರನ್ನು ಸಹ ಶೇ.50ರಷ್ಟು ರಿಯಾಯಿತಿ ದರದಲ್ಲಿ ರಾಜ್ಯ ಸರ್ಕಾರವೇ ಪೂರೈಸುತ್ತದೆ. ಇದಲ್ಲದೆ ಈಗ ಟಾಟಾ ತಮ್ಮ ಈ ಉದ್ಯಮಕ್ಕೆ ಎಕ್ಸೈಸ್ ತೆರಿಗೆಯನ್ನು ಮನ್ನಾ ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಕೋರಿದೆ. ಇದಲ್ಲದೆ ರಾಜ್ಯ ಸರ್ಕಾರ ಈಗಾಗಲೇ ಹಲವಾರು ತೆರಿಗೆ ರಿಯಾಯಿತಿಯನ್ನು ನೀಡಿದೆ. ಅಂದರೆ ಒಂದು ವೇಳೆ ಇದೇ ರಿಯಾಯಿತಿಯನ್ನು ಹಿಂದೊಮ್ಮೆ ಸರ್ಕಾರದ್ದೇ ಸಂಸ್ಥೆಯಾಗಿದ್ದ ಮಾರುತಿಗೂ ನೀಡಿದ್ದರೆ ಅದೂ ಸಹ ಹೆಚ್ಚು ಕಡಿಮೆ ಇದೇ ದರಕ್ಕೆ ಕಾರನ್ನು ಒದಗಿಸುತ್ತಿತ್ತಲ್ಲವೇ?

ಅಂದರೆ ಇದರಲ್ಲಿ ಟಾಟಾ ಜನರಿಗಾಗಿ ಮಾಡುತ್ತಿರುವ ಹೊಸ ಸೇವೆಯೇನು? ಬದಲಿಗೆ ಜನರಿಂದ ಸುಲಿದು ತನ್ನ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳುತ್ತಿರುವ ಒಂದು ಪಕ್ಕಾ ಬಿಸಿನೆಸ್ ಯೋಜನೆಯಲ್ಲದೇ ಮತ್ತೇನು? ಏಕೆಂದರೆ ಇಂದು ಭಾರತದಲ್ಲಿ ವೆಚ್ಚ ಮಾಡಬಲ್ಲಷ್ಟು ಸಾಮರ್ಥ್ಯವಿರುವ ಒಂದು ಮೇಲ್ಮುಖಿ ಚಲನೆಯಲ್ಲಿರುವ ಶೇ.10 ರಷ್ಟು ಅಂದರೆ 10 ಕೋಟಿಯಷ್ಟಿರುವ ನವ ಮಧ್ಯಮ ವರ್ಗ ಸೃಷ್ಟಿಯಾಗಿದೆ. ಈ ನವ ಮಧ್ಯಮ ವರ್ಗ ಬೆಳೆದದ್ದೇ ಆಕ್ರಮಣಶೀಲ ಜಾಗತೀಕರಣದ ಸಂದರ್ಭದಲ್ಲಿ.

ಹುಟ್ಟಿನೊಂದಿಗೇ ಕೊಳ್ಳುಬಾಕತನವನ್ನು ಮತ್ತು ಸಾಮಾಜಿಕ ನ್ಯಾಯ, ಸಮಾನತೆ ಇನ್ನಿತ್ಯಾದಿ ಮೌಲ್ಯಗಳ ಬದಲಿಗೆ ಇಂದಿನ, ಈಗಿನ ಸ್ವಂತ ಸುಖವೇ ಪ್ರಧಾನವೆಂಬ ಮೌಲ್ಯವನ್ನು ಕಟ್ಟಿಕೊಂಡು ಹುಟ್ಟಿರುವ ಈ ಮಧ್ಯಮ ವರ್ಗಕ್ಕೆ ಅಪಾರ ಕೊಳ್ಳುವ ಹಸಿವಿದೆ ಮತ್ತು ಕಿಸೆಯಲ್ಲಿ ದುಡ್ಡಿದೆ. ಇವೆರಡರ ಮಿಲನದಲ್ಲೇ ನ್ಯಾನೋ ಕಾರು ಹುಟ್ಟಿದೆ. ಇಂದು ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರತಿ ಸಾವಿರ ಜನರಿಗೆ 500-800 ಕಾರುಗಳಿದ್ದರೆ ಭಾರತದಲ್ಲಿ ಪ್ರತಿ ಸಾವಿರ ಜನರಿಗೆ ಕೇವಲ 7 ಕಾರುಗಳಿವೆ. ಇದಲ್ಲದೆ ಕಾರು ಮಾರುಕಟ್ಟೆಗೆ ಜಗತ್ತಿನಾದ್ಯಂತ ವಿಸ್ತರಣಾ ಸಾಧ್ಯತೆ ಇರುವುದೇ ಈ ಸಣ್ಣ ಮಾರುಕಟ್ಟೆ ಕ್ಷೇತ್ರದಲ್ಲಿ. ಹೀಗಾಗಿ ಕೇವಲ ಟಾಟಾ ಅಲ್ಲ ನಾಳೆ ಎಲ್ಲಾ ಕಾರು ಉದ್ಯಮಗಳು ಸಣ್ಣ ಕಾರಿನ ಕ್ಷೇತ್ರಕ್ಕೆ ಲಗ್ಗೆ ಇಡಲಿದ್ದಾರೆ. ಇದರಲ್ಲಿ ಇರುವುದು ಲಾಭದ ಹಿತಾಸಕ್ತಿಯೇ ಹೊರತು ಜನತೆಗಾಗಿ ಕಾರು, ಸ್ಕೂಟರ್ ಕುಟುಂಬದ ಬಗ್ಗೆ ಕಣ್ಣೀರು ಇವೆಲ್ಲಾ ತಮ್ಮ ನರಭಕ್ಷಕ ಲಾಭಕೋರತನಕ್ಕೆ ನೈತಿಕ ಮುಖವಾಡವಷ್ಟೇ.

ವಾಸ್ತವದಲ್ಲಿ ಈ ನ್ಯಾನೋ ಕಾರಿನ ಸುತ್ತ ಸೃಷ್ಟಿಯಾಗಿರುವ ಈ ಉನ್ಮಾದದಿಂದ ಮತ್ತು ಟಾಟಾ ಬೀಸಿರುವ ಕನಸಿನ ಬಲೆಯಿಂದ ಹೊರ ಬಂದು ಇದರ ಪರಿಣಾಮವನ್ನು ನಿಜಕ್ಕೂ ಜನತೆಯ ಪರಿಸರದಲ್ಲಿಟ್ಟು ನೋಡುವ ಅಗತ್ಯವಿದೆ. ಟಾಟಾ ಕಂಪನಿಯ ಕಾರು ಮಧ್ಯಮ ವರ್ಗದ ಕನಸನ್ನೇನೋ ಪೂರೈಸಬಹುದು. ಆದರೆ ಆ ಕಾರು ನಿಜಕ್ಕೂ ಓಡಬೇಕಿರುವುದು ರಸ್ತೆಗಳಲ್ಲಿ. ಭಾರತದ ರಸ್ತೆಗಳಲ್ಲಿ ಈಗಾಗಲೇ 1.2 ಕೋಟಿ ಕಾರುಗಳು ಮತ್ತು 6 ಕೋಟಿ ದ್ವಿಚಕ್ರ ವಾಹನಗಳಿವೆ. ನ್ಯಾನೋ ಕಾರಿನಿಂದಾಗಿ ದ್ವಿಚಕ್ರ ವಾಹನಗಳ ಸಂಖ್ಯೆಯಲ್ಲಿ ದೊಡ್ಡ ಏರುಪೇರೇನಾಗದಿದ್ದರೂ ಕಾರುಗಳ ಸಂಖ್ಯೆ ವರ್ಷಕ್ಕೆ ಮೂರು ಲಕ್ಷದಷ್ಟು ಹೆಚ್ಚಲಿವೆ. ಒಂದು ಅಂದಾಜಿನ ಪ್ರಕಾರ ಈ ಪ್ರಮಾಣದಲ್ಲಿ ಮಾರಾಟವಾಗದಿದ್ದರೆ ನ್ಯಾನೋ ಕಾರು ವಹಿವಾಟು ಹೆಚ್ಚಿನ ಲಾಭವನ್ನೇನೂ ತರುವುದಿಲ್ಲವಂತೆ.



ಇನ್ನೊಂದು ಅಂದಾಜಿನ ಪ್ರಕಾರ 1951ರ ನಂತರ ಭಾರತದ ನಗರದ ಜನಸಂಖ್ಯೆ 4.6 ಪಟ್ಟು ಹೆಚ್ಚಿದ್ದರೆ ವಾಹನಗಳ ಸಂಖ್ಯೆ 158 ಪಟ್ಟು ಹೆಚ್ಚಿದೆ. ಆದರೆ ರಸ್ತೆಗಳ ಧಾರಣಾ ಸಾಮರ್ಥ್ಯವೇನು ಹೆಚ್ಚಾಗಿಲ್ಲ. ಉದಾಹರಣೆಗೆ ಬೆಂಗಳೂರಿನಲ್ಲಿ ರಸ್ತೆಗಳ ಧಾರಣಾ ಸಾಮರ್ಥ್ಯಕ್ಕಿಂತ ನಾಲಕ್ಕು ಪಟ್ಟು ಹೆಚ್ಚು ವಾಹನಗಳಿವೆ ಮತ್ತು ಅದರಲ್ಲಿ ಶೇ. 90 ಭಾಗ ಖಾಸಗಿ ವಾಹನಗಳೆ ಹೆಚ್ಚು. ಆದರೆ ಸಾರ್ವಜನಿಕ ಸಂಚಾರ ಸಾಧನಗಳಾದ ಬಸ್ಸು ಇತ್ಯಾದಿಗಳು ರಸ್ತೆಯ ಶೆ. 10 ಭಾಗವನ್ನು ಮಾತ್ರ ಆಕ್ರಮಿಸಿ "ಜನತೆಯ" ಶೇ. 70 ರಷ್ಟು ಸಂಚಾರ ಬೇಡಿಕೆಯನ್ನು ಪೂರೈಸುತ್ತದೆ. ಆದರೆ ಕಾರು ಮತ್ತು ದ್ವಿಚಕ್ರ ವಾಹನಗಳು ರಸ್ತೆಯ ಶೇ.90 ಭಾಗವನ್ನು ಆಕ್ರಮಿಸಿ ಶೇ. ಐದರಷ್ಟು ಸಂಚಾರ ಬೇಡಿಕೆಯನ್ನು ಪೂರೈಸುತ್ತದೆ. ಅಂದರೆ ಒಂದು ಲೀಟರ್ ಇಂಧನಕ್ಕೆ ಬಸ್ಸು ಅತಿ ಹೆಚ್ಚು ಜನರನ್ನು ಸಾಗಾಟ ಮಾಡುತ್ತದೆ. ಆ ಮೂಲಕ ಪ್ರತಿ ಮನುಷ್ಯನ ಸಂಚಾರದ ಕಾರಣದಿಂದ ಉಂಟಾಗುವ ಮಾಲಿನ್ಯವನ್ನು ಅದಷ್ಟು ಕಡಿಮೆ ಮಾಡುತ್ತದೆ. ಆದರೆ ಶ್ರೀಮಂತ ಮತ್ತು ಮೇಲ್ಮಧ್ಯಮ ವರ್ಗದ ಕಾರುಗಳಲ್ಲಿ ಸಾಮಾನ್ಯವಾಗಿ ಆರೆಂಟು ಜನರನ್ನು ಸಾಗಿಸಬಲ್ಲ ಸೀಟು ಸಾಮರ್ಥ್ಯವಿದ್ದರೂ ಶ್ರೀಮಂತರ ಐಷಾರಾಮಿ ಜೀವನ ಶೈಲಿಯ ಭಾಗವಾಗಿ ಅದರಲ್ಲಿ ಓಡಾಡುವುದು ಒಬ್ಬೊಬ್ಬರೇ. ಆದ್ದರಿಂದ ಪ್ರತಿ ಲೀಟರ್ ಇಂಧನ ದುರುಪಯೋಗವಾಗುತ್ತದೆ ಮತ್ತು ಮಾಲಿನ್ಯ ಹೆಚ್ಚುತ್ತದೆ. ಹೀಗಾಗಿ ಸಾಮೂಹಿಕ ಸಾರಿಗೆಗೆ ಬದಲಾಗಿ ಕಾರಿನಂತ- ಅದು ನ್ಯಾನೋ ಕಾರೇ ಆಗಿರಲಿ-ಖಾಸಗಿ ವಾಹನಗಳ ಬಳಕೆ ಹೆಚ್ಚಾದಷ್ಟು ಪರಿಸರ ಮಾಲಿನ್ಯ ಹೆಚ್ಚಾಗುತ್ತದೆ.

ಇದರ ನೇರ ಪರಿಣಾಮ ಬೀರುವುದು ನಗರದ ಕೆಳ ಮಧ್ಯಮ ವರ್ಗಗಳ ಮೇಲೆಯೇ ಹೊರತು ಈ ಮಾಲಿನ್ಯದ ಹೊಣೆಯನ್ನಾಗಲೀ ಅಥವಾ ಭಾರವನ್ನಾಗಲೀ ಶ್ರೀಮಂತರು ಹೊರುವುದಿಲ್ಲ. ಉದಾಹರಣೆಗೆ ರಸ್ತೆಯೆಂಬುದು ಈವರೆಗೆ ಎಲ್ಲಾ ಸಾರ್ವಜನಿಕರಿಗೆ ಮುಕ್ತವಾಗಿರುತ್ತಿತ್ತು. ಅಂದರೆ ಒಂದರ್ಥದಲ್ಲಿ ಸಾರ್ವಜನಿಕ ಆಸ್ತಿಯಾಗಿರುತ್ತಿತ್ತು. ಈಗ ನ್ಯಾನೋ ಕಾರುಗಳ ಕಾರಣಕ್ಕೂ ರಸ್ತೆಗಳ ಮೇಲೆ ವಾಹನ ದಟ್ಟಣೆ ಏರುತ್ತಾ ಟ್ರಾಫಿಕ್ ಜಾಮ್‌ಗಳು ಹೆಚ್ಚಾಗುತ್ತವೆ.

ಅಂಥ ಸಂದರ್ಭವನ್ನು ಒಂದು ಪ್ರಜಾತಂತ್ರ ಹೇಗೆ ನಿಭಾಯಿಸುತ್ತದೆ? ಈ ಟ್ರಾಫಿಕ್ ಜಾಮ್‌ಗಳಿಗೆ ಕಾರಣ ವಾಹನ ಸಂಖ್ಯೆ ಹೆಚ್ಚಾಗಿರುವುದು ಮತ್ತು ಅದನ್ನು ಹೊರಬಲ್ಲಷ್ಟು ಸಾಮರ್ಥ್ಯವಿರುವ ರಸ್ತೆಗಳನ್ನು ಸರ್ಕಾರ ನಿರ್ಮಿಸದೇ ಇರುವುದು. ಹೀಗಾಗಿ ಈ ಸಮಸ್ಯೆಗೆ ಪರಿಹಾರವಿರುವುದೇ ವಾಹನಗಳ ಸಂಖ್ಯೆಯನ್ನು - ಅಂದರೆ ಖಾಸಗಿ ವಾಹನಗಳ ಸಂಖ್ಯೆಯನ್ನು - ಕಡಿಮೆ ಮಾಡಿ ಸಾರ್ವಜನಿಕ ಸಾಗಾಟ ವ್ಯವಸ್ಥೆಯನ್ನು ಹೆಚ್ಚಿಸುವಲ್ಲಿ. ಆದರೆ ಪ್ರಜಾತಂತ್ರದ ಹೆಸರಲ್ಲಿ ಮೂಲಭೂತವಾಗಿ ಶ್ರೀಮಂತರ ಪರವಾದ ತಾರತಮ್ಯವಾದಿ ನೀತಿಗಳನ್ನೇ ರೂಪಿಸುವ ಬಡಿವಾರದ ಪ್ರಜಾತಂತ್ರ ಏನು ಮಾಡುತ್ತದೆ?

ಶ್ರೀಮಂತರ ಜೀವನ ಶೈಲಿಯೇ ಮಾಲಿನ್ಯಕ್ಕೆ ಮು... ಒತ್ತಡಕ್ಕೆ ಕಾರಣವಾಗಿದ್ದರೂ ಅದರ ಶಿಕ್ಷೆಯನ್ನು ಬ... ಮಧ್ಯಮ ವರ್ಗಕ್ಕೆ ವಿಧಿಸುತ್ತದೆ. ಹೀಗಾಗಿ ಅ... ತೋರುವ ಪರಿಹಾರ ರಸ್ತೆಗಳ ಖಾಸಗೀಕರಣ. ವಾಸ್ತ... ವಾಗಿ ರಸ್ತೆ ಒಂದು ಸಾರ್ವಜನಿಕ ಆಸ್ತಿ. ಆದರೆ ವಾಹ... ದಟ್ಟಣೆಯ ಹೆಸರಲ್ಲಿ ಪ್ರತ್ಯೇಕವಾದ ಖಾಸಗಿ ರಸ್ತೆಗಳ... ಸುಂಕದ ರಸ್ತೆಗಳನ್ನು ಸರ್ಕಾರ ನಿರ್ಮಿಸುತ್ತದೆ. ದುಬಾ... ಸುಂಕ ಕೊಡದ ವಾಹನಗಳನ್ನು ಅರ್ಥಾತ್ ಜ... ವರ್ಗಗಳನ್ನು ರಸ್ತೆಯಿಂದ ಹೊರಹಾಕುತ್ತದೆ. ಅಂದು... ಬಡವರ ಸಾಗಾಟ ಸಾಧನವಾದ ಸೈಕಲ್, ಆಟೋಗಳ... ಹೊರಹಾಕಲಾಗುತ್ತದೆ. ಅಷ್ಟು ಮಾತ್ರವಲ್ಲದೆ ಮಾಲಿ... ನಿಯಂತ್ರಣದ ಹೆಸರಲ್ಲಿ ಹತ್ತು ವರ್ಷಕ್ಕಿಂತ ಹಳೆಯದಾ... ವಾಹನಗಳನ್ನು ರಸ್ತೆಯಿಂದ ಹೊರಹಾಕಲಾಗುತ್ತದೆ.

ಹೀಗೆ ಅಪರಾಧ ಶ್ರೀಮಂತ ವರ್ಗದ್ದಾದರು... ಶಿಕ್ಷೆ ಮಾತ್ರ ಬಡ ಮಧ್ಯಮ ವರ್ಗಕ್ಕೇ ಆಗುತ್ತ... ಆದರೆ ಇದನ್ನು ಕೇವಲ ನ್ಯಾನೋ ಎಂಬ ಮಧ್ಯ... ವರ್ಗದ ಕಾರು ರಸ್ತೆಯ ಮೇಲೆ ಬರುತ್ತಿರುವಾಗಲ... ಮುಂದಿಡುತ್ತಿರುವುದು ಏಕೆ ಎಂಬ ಸಹಜ ಪ್ರಶ್ನೆಯು... ಎದುರಾಗುತ್ತದೆ. ಆದರೆ ಇದು ಮಧ್ಯಮ ವರ್ಗ... ವಿರೋಧಿ ವಾದವಲ್ಲ. ಬದಲಿಗೆ ಈ ಮಧ್ಯಮ ವರ್ಗ... ಎಂದಿಗೂ ಸೇರಲಾಗದ ಶ್ರೀಮಂತ ವರ್ಗ ತ... ದುರಾಸೆಗೆ ಮಧ್ಯಮ ವರ್ಗದ ಈ ಕನಸನ್ನು ನೈತಿ... ಸಮರ್ಥನೆಯಾಗಿ ಬಳಸಿಕೊಳ್ಳುತ್ತಿರುವ ಬಗ್ಗೆ ಇದೊಂದು ಎಚ್ಚರಿಕೆ! ಮತ್ತು ಈ ಬಗೆಯ ಪರಿಹಾರದಿಂದ ಇಡೀ ಜನತೆ - ನ್ಯಾನೋ ಜನತೆಯನ್ನೂ - ಒಳಗೊಂಡಂ... ಇಡೀ ವಿಶ್ವ ನಿಧಾನವಾಗಿ ಪ್ರಪಾತ ದೆಡೆಗೆ ಸಾಗುತ್ತಿರು... ಬಗ್ಗೆ ಎಚ್ಚರಿಕೆ ಅಷ್ಟೆ.

ಜಾಗತಿಕ ತಾಪಮಾನದ ಅಪಾಯವು ತಡವಾ... ಯಾದರೂ ಎಲ್ಲೆಡೆ ಸಾರ್ವಜನಿಕ ಸಾಗಾಟ ವ್ಯವಸ್ಥೆಯ... ಬಗ್ಗೆ ಚಿಂತನೆಯನ್ನು ಹಚ್ಚುತ್ತಿರುವ ಹೊತ್ತಿನಲ್ಲಿ ನ್ಯಾನೋ ಕಾರು ಜಗತ್ತಿನ ಗಮನವನ್ನು ತದ್ವಿರುದ್ಧ ದಿಕ್ಕಿನ... ತಿರುಗಿಸಿರುವುದು ಒಂದು ಸೂಚನೆಯಷ್ಟೇ. ದೆಹಲಿಯ ಪ್ರಗತಿ ಮೈದಾನದಲ್ಲಿ ನ್ಯಾನೋ ಕಾರು ಪ್ರದರ್ಶನ... ವೇಳೆ ಸಿಂಗೂರಿನಲ್ಲಿ ಟಾಟಾ ಮಾಡಿದ ಅನ್ಯಾಯ... ವಿರುದ್ಧ ಪ್ರತಿಭಟಿಸುತ್ತಿದ್ದ ಜನರು ರತನ್ ಟಾಟಾ... ಹಾಸ್ಯದ ವಸ್ತುವಾಗಿದ್ದು ಮತ್ತು ನೆರೆದಿದ್ದ ಜನತೆಯ... ಸಂಪೂರ್ಣ ಅವಗಣನೆಗೆ ತುತ್ತಾಗಿದ್ದು ನ್ಯಾನೋ ಹುಟ್ಟುಹಾಕುವ ಸಂಸ್ಕೃತಿಯ ಸೂಚನೆಯಷ್ಟೇ.

ಕೃಷ್ಣನ ಹುಂಡಿಗಾಗಿ, ಭಕ್ತರ ಭಿಕ್ಷೆಗಾಗಿ

ಶ್ರೀಕೃಷ್ಣನ ಪೂಜೆ, ಪೀಠ ಇವೆಲ್ಲಾ ಒಂದು ಜಾತಿಗೆ ಸೀಮಿತವಾಗಿದ್ದು. ಆದರೆ ಇದೊಂದು ಜನಪರ ಕಾರ್ಯಕ್ರಮವೆಂಬಂತೆ ಪೇಜಾವರ ಸೇರಿದಂತೆ ಉಡುಪಿಯ ಅಷ್ಟ ಮಠಾಧೀಶರು ಬೀದಿಗಿಳಿದು ರಂಪ ಮಾಡಿದ್ದು ಸೋಜಿಗ ಹುಟ್ಟಿಸುತ್ತದೆ. ಇದು ಬ್ರಾಹ್ಮಣ ಪುರೋಹಿತಶಾಹಿಗಳಿಗೆ ಮಾತ್ರ ಸೀಮಿತವಾಗಿರುವ ವಿಚಾರ. ಆದರೂ ದೇವಸ್ಥಾನದ ನಿಯಂತ್ರಣ, ಹುಂಡಿಯ ಮೇಲೆ ಹತೋಟಿಯನ್ನು ಸಾಧಿಸಲು ಇವರೆಲ್ಲ ಮಾಡಿದ್ದು ಪ್ರಜಾಪ್ರಭುತ್ವದ ಕಗ್ಗೊಲೆ ಎನಿಸುತ್ತದೆ.

ಅಂದಹಾಗೆ, ಕೃಷ್ಣನಿಗೆ ಪೂಜೆ ಇವರಿಂದ ಮಾತ್ರ ಸಿಂಧು ಎಂದು ಶ್ರೀಕೃಷ್ಣ ಇವರಿಗೆ ಮುಚ್ಚಳಿಕೆ ಬರೆದುಕೊಟ್ಟಿದ್ದಾನೆಯೇ? ಅಥವಾ ನಮ್ಮ ಭಾರತದ ಸಂವಿಧಾನದಲ್ಲಿ ಇಂತಿಂಥ ದೇವಸ್ಥಾನಗಳಿಗೆ, ಇಂತಿಂಥ ದೇವರಿಗೆ ಇಂತಿಂಥ ಜನರಿಂದ ಮಾತ್ರ ಪೂಜೆ ಸಿಂಧುವೆಂದು ಲಿಖಿತ ಪ್ರಸ್ತಾವನೆ ಏನಾದರೂ ಇದೆಯಾ? ಲಕ್ಷಗಟ್ಟಲೆ ಆಸ್ತಿ-ಭಕ್ತರ ಕಾಣಿಕೆ ಸಿಗುವ ಕಡೆ ಬ್ರಾಹ್ಮಣರು-ಪುರೋಹಿತಗಳು ವಕ್ಕರಿಸಿರುವುದು ಯಾತಕ್ಕಾಗಿ? ಕೃಷ್ಣನ ಹುಂಡಿಗಾಗಿ, ಕೇವಲ ಭಕ್ತರ ಭಿಕ್ಷೆಗಾಗಿ!

ಅಧಿಕಾರದ ಆಸೆ, ರಾಜಕಾರಣಿಗಳ ಸಖ್ಯ, ಭಕ್ತರು ತುಂಬುವ ಹುಂಡಿ-ಇವೇ ಎಲ್ಲವನ್ನು ತ್ಯಜಿಸಿರುವ ಸನ್ಯಾಸಿಗಳಿಗೆ ಮುಖ್ಯವಾಗಿರುವುದು ಏನನ್ನು ಸೂಚಿಸುತ್ತದೆ? ಇಂತಹ ಸಂಪರ್ಕಗಳಿಂದ ಬಂದ ಹಣದಲ್ಲಿ ಲೇವಾದೇವಿ ಮಾಡುವುದು, ಸಿನಿಮಾ ಕಟ್ಟಡಗಳನ್ನು ನಿರ್ಮಿಸುವುದು, ಆಸ್ತಿ ಮಾಡಿಕೊಳ್ಳುವುದು, ಡೊನೇಷನ್ ಕೀಳುವ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದು... ಇವುಗಳಲ್ಲಿ ಭಕ್ತಿ ಅಥವಾ ಧರ್ಮ ಇದೆಯೇ? ಬದಲಾಗಿ ಓರ್ವ ಉದ್ಯಮಿ ಮಾಡುವ ಕ್ರಿಯೆಗಳಂತಿಲ್ಲವೇ ಇವರೆಲ್ಲರ ಕಾರುಬಾರುಗಳು?

ಎಲ್ಲರಿಗಿಂತಲೂ ಪೇಜಾವರರು ಹೆಚ್ಚಾಗಿ ಪ್ರತಿಯೊಂದು ಆಗುಹೋಗುಗಳಲ್ಲಿ ತಮ್ಮ ಇಳಿ ವಯಸ್ಸಿನಲ್ಲೂ ಮೂಗು ತೂರಿಸುತ್ತಾ ಪಕ್ಕಾ ರಾಜಕೀಯ ನಾಯಕನಂತೆ ವರ್ತಿಸುತ್ತಾರೆ, ಧರ್ಮದ ಹೆಸರಿನಲ್ಲಿ!

ಶ್ರೀಕೃಷ್ಣ ಬ್ರಾಹ್ಮಣರಿಗೆ ಮಾತ್ರ ಸೀಮಿತವಾ? ಶ್ರೀಕೃಷ್ಣನಿಗೆ ನಿಜವಾದ ಭಕ್ತರೆನಿಸಿದ ಕನಕದಾಸರ ಅನುಯಾಯಿಗಳಾದ ಕುರುಬರನ್ನು ಯಾಕೆ ಪೀಠಕ್ಕೆ ತಂದು ಕೂರಿಸಬಾರದು? ಕುರುಬರು ಶ್ರೀಕೃಷ್ಣನ ಪೂಜೆಯನ್ನು ಯಾಕೆ ಮಾಡಬಾರದು? ಆದರೆ ಇದನ್ನು ಮಾಡಬೇಕಿರುವ ಸರ್ಕಾರವೇ ಪರ್ಯಾಯ ಎಂಬ ಬೀದಿ ಜಗಳವನ್ನು ನೋಡುತ್ತಾ ಸುಮ್ಮನಿದ್ದರೆ ಸಾಮಾನ್ಯ ಜನರು ಏನು ಮಾಡಬೇಕು?

ಇನ್ನು ಯಾವುದೇ ಕಾರಣಕ್ಕೂ ಪುರೋಹಿತಶಾಹಿಗಳು ಇಂತಹ ಬದಲಾವಣೆಯನ್ನು ತರಲು ಪ್ರಯತ್ನಿಸುವುದಿಲ್ಲ. ಯಾಕೆಂದರೆ ಈ ಮಠಾಧೀಶರ ಬದುಕಿಗೆ ಶ್ರೀಕೃಷ್ಣನೇ ಬಂಡವಾಳ, ಮಠವೇ ಅನ್ನದಾಶ್ರಯ. ಇಂತಹ 'ಅಕ್ಷಯ ಪಾತ್ರಕ್ಕೆ' ಬೇರೆ ಜನಾಂಗದವರನ್ನು ಅವರು ಕೂರಿಸುತ್ತಾರೆಯೇ? ಇಲ್ಲವೇ ಇಲ್ಲ, ಯಾಕೆಂದರೆ ಇವರಿಗೆ ಹಿಂದೂಗಳೆಂದರೆ ಕೇವಲ ಬ್ರಾಹ್ಮಣರು ಮಾತ್ರ. ದಲಿತರು, ಕುರುಬರು, ನಾಯಕರು, ಒಕ್ಕಲಿಗರು, ಎಸ್‌ಸಿ, ಎಸ್‌ಟಿಗಳು ಚುನಾವಣಾ ಕಾರಣಕ್ಕೆ ಮಾತ್ರ ಹಿಂದೂಗಳು.

ಈ ಎಲ್ಲ ಕಾರಣಗಳಿಂದಾಗಿ ಆದಷ್ಟು ಬೇಗನೆ ಶ್ರೀಕೃಷ್ಣನನ್ನು ಇವರ ಕಪಿಮುಷ್ಠಿಯಿಂದ ವಿಮೋಚನೆಗೊಳಿಸಬೇಕಿದೆ.

-ಡಿ.ಎಲ್. ನಾಗರಾಜ್, ಹರಪನಹಳ್ಳಿ

ಹೊಗಳಿಕೆ ತೆಗಳಿಕೆ

ಡಿಸೆಂಬರ್ 31, 2007 ರಂದು ಮಂಗಳೂರಿನಲ್ಲಿ ಝೀ ಟೀವಿ ಕನ್ನಡ ವಾಹಿನಿ ನಡೆಸಿದ ಚಿತ್ರೀಕರಣದ ಕರಾವಳಿ ಮತ್ತು ಕೋಮುವಾದ, (SEZ)ದಲ್ಲಿ ಪ್ರಗತಿಪರಚಿಂತಕ ಪಟ್ಟಾಭಿ ಸೋಮಯಾಜಿಯವರನ್ನು ಬಿಜೆಪಿ ಶಾಸಕ ರಘುಪತಿ ಭಟ್ ಮತ್ತು ಅವರ ಗುಂಪು ಅವಮಾನಿಸಲು ಪ್ರಯತ್ನಿಸಿರುವುದು ಖಂಡನಾರ್ಹ. I may disapprove what you say but I will fight for your right to say it ಎಂಬ principle ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲತಳಹದಿ. ಭಾರತ ಒಂದು ಪ್ರಜಾತಾಂತ್ರಿಕ ಗಣರಾಜ್ಯ ಎಂಬುವುದನ್ನು ಸದರಿ ದೇಶಭಕ್ತರು ಅರಿತುಕೊಳ್ಳಬೇಕು. ವೈಚಾರಿಕ ಸಂವಾದ/ಚರ್ಚೆಗಳು ಸುಧಾರಣೆಯ ಜನತಾಂತ್ರಿಕ ಮಾರ್ಗಗಳು ಪರಸ್ಪರ ಚರ್ಚೆಗಳ... ನಡೆದಾಗ reality ಯು ಪ್ರಕಟಗೊಳ್ಳುತ್ತದೆ. ಆದ್ದರಿಂ... ಈ ವೀರರು ಫ್ಯಾಸಿಸ್ಟ್ ಮನೋಭಾವವನ್ನು ಪ್ರಕಟಿಸಿ... ವುದನ್ನು ಈ ನಾಡಿನ ಹಿತದೃಷ್ಟಿಯಿಂದ ನಾವೆಲ್ಲರು... ಬಲವಾಗಿ ವಿರೋಧಿಸಬೇಕಾಗಿದೆ.


-ಎಂ.ಆರ್. ವಿದ್ಯಾಧರ, ಮದಿಕೇ...

'ಬಾದಾಮಿಯನ್ನು ಗುಡಿಸಿ ಗುಂಡಾಂತರ ಮಾಡಿ... ಮಹಾಗುಂಡಪ್ಪ ಪಟ್ಟಣಶೆಟ್ಟಿ!' ಎಂಬ ವರದಿಗೆ ... ಪ್ರತಿಕ್ರಿಯೆ. ಚಿಡ್ಡಿಚತುರ ಪಟ್ಟಣಶೆಟ್ಟಿ ಕಳೆದ ವಿಧಾನಸ... ಚುನಾವಣೆಯಲ್ಲಿ ಬಿಜೆಪಿಯಿಂದ ಗೆದ್ದು ಶಾಸಕನಾಗಿ ಕ್ಷೇತ್ರ... ಕಡಿದು ಕಟ್ಟೆಹಾಕಿದ್ದು ಅಷ್ಟರಲ್ಲೇ ಇದೆ. ತನ್ನ ಬೂಟ... ನೆಕ್ಕುವ ಅಧಿಕಾರಿಗಳನ್ನು ತಂದು ಆಯಾ ಕಟ್ಟಿನ ಸ್ಥಳಗಳ... ಕೂಡಿಸಿ ನುಂಗುವುದೆ ತನ್ನ ಕೆಲಸ ಎಂದು ತಿಳಿದ ಪಟ್ಟ... ಶೆಟ್ಟಿ, ಇಡೀ ಕ್ಷೇತ್ರವನ್ನೇ ಚಿಡ್ಡಿಮಯ ಮಾಡಲು ಈ... ಪಣತೊಟ್ಟಿದ್ದು ವಿಪರ್ಯಾಸಕರ. ಬರುವ ಚುನಾವಣೆಯ... ಜನ ಈತನನ್ನು ಮನೆಗಟ್ಟಬೇಕಿದೆ.

-ರಮಜಾನ ಕೆ. ಕೊರ್ತಿ, ಬಾದಾ...

ರೀಮೇಕ್ ಮಾಡೀರಿ ಜೋಕೆ!

ಕೊನೆಗೂ ರೀಮೇಕ್ ಚಿತ್ರಗಳನ್ನು ಕಂಡುಹಿಡಿಯಲು ರಾಜ್ಯಪಾಲರ ಆಡಳಿತಾವಧಿಯಲ್ಲಿ ಒಂದು ಸಮಿತಿ ರಚನೆಯಾಗಿರುವುದು ಸಮಾಧಾನದ ವಿಷಯ. ಬರಗೂರು ರಾಮಚಂದ್ರಪ್ಪ ಈ ಸಮಿತಿಯ ಅಧ್ಯಕ್ಷರಾಗಿದ್ದು ಅವರ ಬೆಂಬಲಕ್ಕೆ ಪತ್ರಕರ್ತ ಸುಬ್ರಮಣ್ಯ, ಸಂಕಲನಕಾರ ಸುರೇಶ್ ಅರಸ್ ಮೊದಲಾದವರು ಇರುವುದೂ ನೆಮ್ಮದಿಯ ಸಂಗತಿ.



ಆದರೆ ಇತ್ತೀಚಿಗೆ ಬರೀ ರೀಮೇಕ್ ಅಲ್ಲ, ರೀಮಿಕ್ಸ್‌ಗಳೂ ಬರುತ್ತಿರುವುದರಿಂದ ಈ ಸಮಿತಿ ಅಂತಹ ಸಿನಿಮಾಗಳ ಬಗ್ಗೆಯೂ ಎಚ್ಚರಿಕೆ ವಹಿಸಿದರೆ ಕನ್ನಡ ಚಿತ್ರರಂಗಕ್ಕೆ ಒಳ್ಳೆಯದು.


ಕುತೂಹಲ ಮೂಡಿಸಿದ 'ಕರುನಾಡು'

ಇತ್ತೀಚಿಗೆ ಪತ್ರಕರ್ತರಿಗಾಗಿ ಬರಗೂರು ರಾಮಚಂದ್ರಪ್ಪ ನಿರ್ದೇಶನದ 'ಏಕಲವ್ಯ' ಮತ್ತು ಮೂರ್ತಿ ಎಂಬುವವರು ನಿರ್ದೇಶಿಸಿರುವ 'ಕರುನಾಡು' ಎಂಬ ಎರಡು ಕಲಾತ್ಮಕ ಚಿತ್ರಗಳ ಪ್ರದರ್ಶನವಿತ್ತು.

ಬರಗೂರರ ಚಿತ್ರ ಎಂದಿನಂತೆ ಸಕಲ ತಾಂತ್ರಿಕ ದೌರ್ಬಲ್ಯಗಳಿಂದ ತುಂಬಿದ್ದರೂ, ನಟರ ಆಯ್ಕೆಯಲ್ಲಿ ಸಂಪೂರ್ಣವಾಗಿ ಮುಗ್ಗರಿಸಿದ್ದರೂ, ಅದರ ಸಂಭಾಷಣೆ, ಹಾಡುಗಳು ಮತ್ತು ಕಥಾ ಆಶಯದಿಂದಾಗಿ ನೋಡುವಂತಿದ್ದು.

ಅದಕ್ಕೆ ಹೋಲಿಸಿದರೆ, ಮೂರ್ತಿ ನಿರ್ದೇಶನದ 'ಕರುನಾಡು' ತುಂಬಾ ಚೆನ್ನಾಗಿತ್ತು. ಇದರ ನಾಯಕಿ ಲಕ್ಷ್ಮಿ ಹೆಗಡೆಯ ನಟನೆ ಮನಸ್ಸಿಗೆ ತಟ್ಟುತ್ತದೆ. ಪಿ.ಕೆ.ಎಚ್. ದಾಸ್ ಛಾಯಾಗ್ರಹಣವಂತೂ ಸೂಪರ್ಬ್ ಆಗಿದೆ. ಪ್ರವೀಣ್ ಗೋಡ್ಖಿಂಡಿಯ ಹಿನ್ನೆಲೆ ಸಂಗೀತ ಚಿತ್ರದ ಆಶಯಕ್ಕೆ ಪೂರಕವಾಗಿದೆ. ಇದೆಲ್ಲಕ್ಕಿಂತ ಮುಖ್ಯವಾಗಿ ಕುಂದಾಪುರದ ನದಿ ತೀರಗಳು ಮನಮೋಹಕವಾಗಿ ಮೂಡಿಬಂದಿವೆ. ಒಂದು ಹಳ್ಳಿಯನ್ನು ದಾಸ್ಯದ ಹಿಡಿತದಿಂದ ನಾಯಕಿ ಹೇಗೆ ಹೊರತರುತ್ತಾಳೆ ಎಂಬ ಕಥಾಹಂದರ ಕುತೂಹಲವಾಗಿ ಮೂಡಿಬಂದಿದೆ.

ಇಂಥ ಚಿತ್ರ ನಿರ್ಮಿಸಿದ ನಿರ್ಮಾಪಕ ಬೇಕರಿ ಶ್ರೀನಿವಾಸ್‌ರಿಗೆ ಮತ್ತು ನಿರ್ದೇಶಕ ಮೂರ್ತಿಗೆ ಹ್ಯಾಟ್ಸ್‌ಆಫ್.



ಯೋಗ ಭಂಗಿಯಲ್ಲಿ ಶಿಲ್ಪಾ

ಯೋಗಾಸನ ಕಲಿಯಬೇಕೆ? ಅದೂ ಜಿರಾಫೆಯಂತಿರುವ ಶಿಲ್ಪಾಶೆಟ್ಟಿ ಎಂಬ ಲಂಬೂ ಚೆಲುವೆಯಿಂದ?

ಬ್ರಿಟನ್ನಿನ 'ಬಿಗ್ ಬಾಸ್' ಟಿವಿ ಕಾರ್ಯಕ್ರಮದಲ್ಲಿ ನಡೆದ ರಂಪಾಟದ ಮೂಲಕ ಫೇಮಸ್ ಆದ ಈ ಕರಾವಳಿ ಪೋರಿ ಈಗ ಒಂದು ಹೊಸ ಡಿವಿಡಿ ಬಿಡುಗಡೆ ಮಾಡಿದ್ದಾಳೆ. ಅದೂ ಯೋಗಾಸನ ಕಲಿಸುವ ಡಿವಿಡಿಯಂತೆ. ಅದರಲ್ಲಿ ಸ್ವತಃ ಶಿಲ್ಪಾ ವಿವಿಧ ಭಂಗಿಗಳಲ್ಲಿ ಆಸನಗಳನ್ನು ಹಾಕಿ ತೋರಿಸಿದ್ದಾಳಂತೆ.

ಆದರೆ ಸದ್ಯಕ್ಕೆ ಅದನ್ನು ಯೂರೋಪ್, ದುಬೈಗಳಲ್ಲಿ ಮಾತ್ರ ರಿಲೀಸ್ ಮಾಡಲಾಗುತ್ತಿದೆ.

ಅಂದಹಾಗೆ, ಈಗ ರಾಜ್ ಕುಂದ್ರಾ ಎಂಬಾತನೊಂದಿಗೆ ಲವ್ ಪ್ರಕರಣದಲ್ಲಿ ತೊಡಗಿರುವ ಈಕೆ ಅದೆಂಥಾ ಯೋಗಾಸನವನ್ನು ಮಾಡಿದ್ದಾಳೆ? ಎಂಬ ಕುತೂಹಲದಿಂದ ಪಡ್ಡೆಗಳು ಕಾದುಕುಳಿತಿದ್ದಾರೆ.

ಸೋತವರ ಹಿಂದಿರುವ ಸತ್ಯ



ಪ್ರಾರಂಭದಲ್ಲಿ ನಿರ್ದೇಶಕರಾಗಿ ದೊಡ್ಡ ಯಶಸ್ಸನ್ನು ಕಂಡ ಅದೆಷ್ಟೋ ಜನ ಅದ್ಯಾಕೆ ಆನಂತರದ ಪ್ರಯತ್ನಗಳಲ್ಲಿ ಸಿಕ್ಕಾಪಟ್ಟೆ ಡಲ್ ಆಗುತ್ತಾರೆ? ಯಾಕೆ ಮೊದಲೆಲ್ಲ ಮಿಂಚಿದ್ದ ಸುನಿಲ್ ಕುಮಾರ್ ದೇಸಾಯಿ, ಉಪೇಂದ್ರ, ಕಾಶೀನಾಥ್, ಪ್ರೇಮ್ ತರಹದ ನಿರ್ದೇಶಕರು ಕೆಲ ಯತ್ನಗಳ ನಂತರ ಸೋಲುತ್ತಾ ಸಾಗುತ್ತಾರೆ? ಯಾಕೆ ಆರಂಭದಲ್ಲಿ ಹೊಸತನ್ನು ಕೊಟ್ಟ ಇಂತಹವರು ಆಮೇಲೆ ತಮ್ಮ ಬತ್ತಳಿಕೆ ಖಾಲಿಯಾದಂತೆ ಕಾಣಿಸುತ್ತಾರೆ?

ಈ ಪ್ರಶ್ನೆಗಳಿಗೆ ಉತ್ತರ ಅವರ ಟೀಮಿನ ಸದಸ್ಯರಿರಬಹುದೇ ಅನ್ನಿಸುತ್ತೆ ಹಲವು ಉದಾಹರಣೆಗಳನ್ನು ನೋಡಿದರೆ.



ಸುನಿಲ್ ಕುಮಾರ್ ದೇಸಾಯಿ ಆರಂಭದಲ್ಲಿ ಮಾಡಿದ ಸಿನಿಮಾಗಳಲ್ಲಿ ಅವರಿಗೆ ಅಸೋಸಿಯೇಟ್ ಆಗಿದ್ದವರು ರಂಗನಾಥ್ ಎಂಬ ವ್ಯಕ್ತಿ. ಆದರೆ ಅವರ ಅಕಾಲಿಕ ಸಾವಿನ ನಂತರ ದೇಸಾಯಿಯ ಸಿನಿಮಾಗಳೂ ಜೀವ ಇಲ್ಲದಂತಾದವು. 'ಪರ್ವ', 'ಮರ್ಮ', 'ರಮ್ಯ ಚೈತ್ರಕಾಲ' ಮತ್ತು 'ಕ್ಷಣಕ್ಷಣ' ಎಂಬ ಸಿನಿಮಾಗಳೆಲ್ಲವೂ ಸಾಲಾಗಿ ತೋಪೆದ್ದವು.




ಉಪೇಂದ್ರರ ಜೊತೆ ಆರಂಭದಲ್ಲಿ ಇದ್ದ ಲೋಕಿ, ಮುರಳಿಮೋಹನ್ ಮತ್ತು ರಾಜಾರಾಂ ಎಂಬ ಮಿತ್ರರು ಕಂ ಸಲಹೆಗಾರರು ದೂರವಾದ ನಂತರ ಉಪ್ಪಿಯಿಂದ ಒಂದೇ ಒಂದು ಚಿತ್ರವನ್ನು ಕೂಡಾ ನಿರ್ದೇಶಿಸಲು ಸಾಧ್ಯವಾಗಿಲ್ಲ. ಇವತ್ತಿಗೂ ಹೊಸ ಬಗೆಯ ಚಿತ್ರವನ್ನು ನೀಡಲು ಉಪ್ಪಿ ಹೆಣಗಾಡುತ್ತಿದ್ದಾರಾದರೂ ಅವರಿಗೆ ಸರಿಯಾಗಿ ಸಾಥ್ ನೀಡುವಂತಹ ತಂಡ ಇಲ್ಲ.



ನಿರ್ದೇಶಕ ನಾಗಣ್ಣನದ್ದೂ ಇದೇ ಕತೆ. ಕೋಲಾರ ನಾಗೇಶ್ ಎಂಬ ಪ್ರತಿಭಾವಂತ ಯುವಕ ನಾಗಣ್ಣನೊಂದಿಗೆ ಇದ್ದಷ್ಟು ದಿನ 'ಗೌರಮ್ಮ', 'ಕುಟುಂಬ'ದಂತಹ ಒಳ್ಳೊಳ್ಳೆ ಹಿಟ್ ಚಿತ್ರಗಳನ್ನು ನೀಡಿದರು. ಆದರೆ ಯಾವಾಗ ತನ್ನೊಂದಿಗೆ ಅಷ್ಟು ವರ್ಷಗಳ ಕಾಲ ನಿಯತ್ತಿನಿಂದ ದುಡಿದಿದ್ದ ಆ ಹುಡುಗನನ್ನು ನಾಗಣ್ಣ ದೂರ ಮಾಡಿದರೋ ಅಂದಿನಿಂದ ಒಂದು ಸಿನಿಮಾವನ್ನು ಮಾಡಲು ಅವರಿಂದಾಗಿಲ್ಲ. ಅದು ಹೇಗೋ ಎರಡು ವರ್ಷಗಳ ನಂತರ ಸೂರಪ್ಪ ಬಾಬು ನಿರ್ಮಾಣದ 'ಬಂಧು-ಬಳಗ' ಎಂಬ ಚಿತ್ರ ಆರಂಭವಾಗಿತ್ತಾದರೂ, ಈಗ ಫೈನಾನ್ಸ್ ಪ್ರಾಬ್ಲಂನಿಂದ ಬಂಧುವೂ ಇಲ್ಲದೆ, ಬಳಗವೂ ಇಲ್ಲದೆ ಚಿತ್ರ ನಿಂತುಹೋಗಿದೆ.

ಪ್ರೇಮ್ ಕೂಡ ಅಷ್ಟೇ. ಮೊದಲು ಆತನೊಂದಿಗಿದ್ದ ಸಾಯಿಕೃಷ್ಣ ಮತ್ತು ಇತರರ ತಂಡ ದೂರಾದಮೇಲೆ ಬಂದಿರುವ ಚಿತ್ರವೇ 'ಪ್ರೀತಿಯಾಭೂಮಿ'. ಈ ಚಿತ್ರ ಹೇಗಿದೆ ಎಂಬುದು ಈಗ ಎಲ್ಲರಿಗೂ ಗೊತ್ತಿರುವ ವಿಚಾರವಾಗಿರುವುದರಿಂದ ಇದನ್ನು ಇನ್ನಷ್ಟು ಲಂಬಿಸುವ ಅಗತ್ಯವಿಲ್ಲ ಎನಿಸುತ್ತದೆ.

ಈ ಉದಾಹರಣೆಗಳನ್ನು ನೋಡಿದ ನಂತರ ಮೊದಲೇ ಕೇಳಿದ ಪ್ರಶ್ನೆಗಳಿಗೆ ಉತ್ತರ ಹೊಳೆದಿರಬೇಕಲ್ಲ?!




ಸವೆದ ನೆನಪಿನಲ್ಲಿ ಸೆಕೆಂಡ್ ಇನ್ನಿಂಗ್ಸ್!

'ಸವಿ ಸವಿ ನೆನಪು' ಎಂಬ ಚಿತ್ರ ಕನ್ನಡದಲ್ಲೇ ಮಕಾಡೆ ಮಲಗಿದ್ದರೂ ಅದರ ನಿರ್ಮಾಪಕ ಎಸ್.ವಿ.ಬಾಬು ಈಗ ಆ ಚಿತ್ರವನ್ನು ತೆಲುಗಿನಲ್ಲಿ ರೀಶೂಟ್ ಮಾಡಿ ಆಂಧ್ರದಲ್ಲಿ ರಿಲೀಸ್ ಮಾಡಲು ಯತ್ನಿಸುತ್ತಿದ್ದಾರೆ. ಚಿತ್ರದ ಆಡಿಯೋ ಈಗಾಗಲೇ ತೆಲುಗಿನಲ್ಲಿ ಹಿಟ್ ಆಗಿರುವುದರಿಂದ ಚಿತ್ರವೂ ಹಿಟ್ ಆಗುತ್ತೆ ಎಂಬುದು ಅವರ ನಂಬಿಕೆ.

ಇದರೊಂದಿಗೆ ಕನ್ನಡದಲ್ಲೂ ಮೂರು ಸಿನಿಮಾಗಳನ್ನು ಮಾಡುವ ಸಾಹಸಕ್ಕೆ ಬಾಬು ಕೈಹಾಕಿದ್ದಾರೆ. ಮೊದಲನೆಯದು ಶಿವಮಣಿ ನಿರ್ದೇಶನದಲ್ಲಿ ಹೊಸಬರ ಚಿತ್ರ. ಎರಡನೆಯದು ಸಿಹಿಕಹಿ ಚಂದ್ರು ನಿರ್ದೇಶಿಸಲಿರುವ, ಕೋಮಲ್ ನಾಯಕನಾಗಿರುವ ಚಿತ್ರ. ಮೂರನೆಯದು ವರ್ಷದ ಕೊನೆಯಲ್ಲಿ ಸೆಟ್ಟೇರಲಿದ್ದು ಅದರಲ್ಲಿ ಗಣೇಶ್ ನಟಿಸಲಿದ್ದಾನೆ.

ಹೀಗೆ ಮೂರು ವಿಭಿನ್ನ ಚಿತ್ರಗಳನ್ನು ಒಮ್ಮೆಗೇ ಕೈಗೆತ್ತಿಕೊಂಡಿರುವ ಬಾಬು ಗಾಂಧಿನಗರದಲ್ಲಿ ತಮ್ಮ ಎರಡನೇ ಇನ್ನಿಂಗ್ಸ್ ಆರಂಭಿಸಿದ್ದಾರೆ.

ತೆಲುಗಿನಲ್ಲಿ ಮುಗ್ಗರಿಸಿದ ಮುಂಗಾರು 'ವಾನ'



'ಮುಂಗಾರು ಮಳೆ' ಕನ್ನಡ ಚಿತ್ರರಂಗದಲ್ಲಿ ದಾಖಲೆಗಳನ್ನೇ ಸೃಷ್ಟಿಸಿತ್ತು. ಆದರೆ 'ವಾನ' ಎಂಬ ಅದರ ತೆಲುಗು ರೀಮೇಕ್ ಮೊದಲ ವಾರವೇ ಸಂಪೂರ್ಣವಾಗಿ ಮುಗ್ಗರಿಸಿದೆ.

ಇಲ್ಲಿ ಗೆದ್ದ ಚಿತ್ರ ಎಲ್ಲೆಲ್ಲೂ ಗೆಲ್ಲುತ್ತದೆ ಎಂದು ಭಾವಿಸಿದ್ದ ಸೂರ್ಯಪ್ರಕಾಶ್ ರಾವ್ ಎಂಬುವವರು 'ಮುಂಗಾರು ಮಳೆ' ಐವತ್ತು ದಿನಗಳನ್ನು ಪೂರೈಸಿದ ಸಂದರ್ಭದಲ್ಲಿ ಅದರ ಹಿಂದಿ, ತಮಿಳು, ತೆಲುಗು ಮತ್ತು ಮಲಯಾಳಂ ಹಕ್ಕುಗಳನ್ನು 45 ಲಕ್ಷ ರೂಪಾಯಿಗಳಿಗೆ ಖರೀದಿಸಿದ್ದರು. ಆದರೆ ಯಾವಾಗ ಚಿತ್ರ ನೂರು ದಿನ, 25 ವಾರ, ಇಂತಹ ದಾಖಲೆಗಳನ್ನು ಮೀರಿ ಓಡಿತೋ ಆಗ ಅದರ ತೆಲುಗು ರೀಮೇಕ್ ಒಂದರ ಹಕ್ಕನ್ನೇ ಒಂದು ಕೋಟಿ ರೂಪಾಯಿಗಳಿಗೆ ಖರೀದಿಸಲು ಹಲವರು ಮುಂದಾಗಿದ್ದರಂತೆ.

ಕೊನೆಗೆ ಅದು ಎಮ್. ಎಸ್. ರಾಜು ಎಂಬ ನಿರ್ಮಾಪಕರ ಪಾಲಾಯಿತು. ಅದಕ್ಕೆ ಆತ ಸೂರ್ಯಪ್ರಕಾಶ್ ರಾವ್‌ಗೆ ಎಷ್ಟು ಹಣ ಕೊಟ್ಟರೋ ಗೊತ್ತಿಲ್ಲ. ಆದರೆ ರಾವ್‌ರಂತೆ ರಾಜು ಕೂಡ ಚಿತ್ರ ಗೆದ್ದೇ ಗೆಲ್ಲುತ್ತದೆ ಎಂದು ಭ್ರಮಿಸಿದ್ದರು. ಆದ್ದರಿಂದ ಅದನ್ನು ತಾವೇ ನಿರ್ದೇಶಿಸುವ ನಿರ್ಧಾರವನ್ನೂ ತೆಗೆದುಕೊಂಡರು. ಆದರೆ ಅವರು ಮಾಡಿರುವ ನಿರ್ದೇಶನವೆಂದರೆ 'ಮುಂಗಾರು ಮಳೆ'ಯ ಜೆರಾಕ್ಸ್ ಕಾಪಿ ಅಷ್ಟೇ. ಅಂದಹಾಗೆ ತೆಲುಗು ಅವತರಣಿಕೆಯಲ್ಲಿ ಕನ್ನಡದ ಮನೋಮೂರ್ತಿಯವರು ಸಂಗೀತ ನಿರ್ದೇಶನವನ್ನು ನೀಡಿದ್ದ ಹಾಡುಗಳನ್ನು ಯಥಾವತ್ತಾಗಿ ಬಳಸಿಕೊಂಡಿದ್ದರೂ ಅವರಿಗೆ ಯಾವುದೇ ಕ್ರೆಡಿಟ್ ಕೊಟ್ಟಿಲ್ಲ ಮಾತ್ರವಲ್ಲ ಬೇರೆ ಯಾರದ್ದೋ ಹೆಸರನ್ನು ಹಾಕಿಕೊಳ್ಳಲಾಗಿದೆ.

ಚಿತ್ರವನ್ನು ನೋಡಿದ ವಿಮರ್ಶಕರು ಮತ್ತು ಪ್ರೇಕ್ಷಕರು ಅದರಲ್ಲಿನ ಸಂಗೀತವನ್ನು ಮತ್ತು ಛಾಯಾಗ್ರಹಣವನ್ನು ಮೆಚ್ಚಿದ್ದರೂ ಚಿತ್ರದಲ್ಲಿ ಕತೆಯೇ ಇಲ್ಲ, ನಿರೂಪಣೆ ಜಾಳುಜಾಳಾಗಿದೆ, ಕತೆಯಂತೂ ಓಬಿರಾಯನ ಕಾಲದ್ದೇನೋ ಅನ್ನಿಸುವಂತಿದೆ ಎಂದೆಲ್ಲಾ ಟೀಕಿಸಿದ್ದಾರೆ.

ಅಂದಹಾಗೆ ಕನ್ನಡದ ಚಿತ್ರವೊಂದರ ರೀಮೇಕ್ ಹೀಗೆ ಫ್ಲಾಪ್ ಆಗುತ್ತಿರುವುದು ಇದೇ ಮೊದಲಲ್ಲ. ಇತ್ತೀಚೆಗೆ 'ಜೋಗಿ' ಮತ್ತು 'ಅಮೃತಧಾರೆ'ಯ ತಮಿಳು ಅವತರಣಿಕೆಗಳೂ ಹೀಗೆ ಸೋತಿದ್ದವು. ಆದರೆ ಅದೇ ಹೊತ್ತಿಗೆ ಬೇರೆ ಭಾಷೆಗಳಿಂದ ಕನ್ನಡದಲ್ಲಿ ರೀಮೇಕ್ ಮಾಡಿದ್ದ ಚಿತ್ರಗಳು ಇಲ್ಲಿ ಹಿಟ್ ಆಗುತ್ತಲೇ ಇವೆ.

ಇದರ ಅರ್ಥವೇನು?

ಇಷ್ಟೇ: ಕನ್ನಡದವರಿಗೆ ಹಳಸಿದ್ದ ಚಿತ್ರಾನ್ನವಾದರೂ ನಡೆಯುತ್ತೆ, ಆದರೆ ತಮಿಳು ಮತ್ತು ತೆಲುಗಿನವರಿಗೆ ಬಿಸಿ ಬಿಸಿಯಾದ ಹೊಸದೇ ಬೇಕು! ನಮ್ಮ ದುರ್ದೈವ ಎಂತಹದ್ದು ನೋಡಿ!

R B P LANKESH, Kannada Weekly Price Rs. 10/- 30-1-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4.



ನವೀನನ ಧಿಮಾಕು!

ನವೀನ್ ಎಂಬ ಹುಡುಗ ತನ್ನಲ್ಲಿ ಪ್ರತಿಭೆ ಇದೆಯೆಂಬುದನ್ನು ಪದೇ ಪದೇ ಸಾಬೀತುಪಡಿಸಿದ್ದಾನೆ. ಹೀರೋ ರೋಲ್ ಇರಲಿ, ತಮ್ಮನ ರೋಲ್ ಇರಲಿ, ವಿಲನ್ ರೋಲ್ ಇರಲಿ, ಟಿವಿ ಧಾರಾವಾಹಿ ಇರಲಿ, ಈತ ಎಲ್ಲದರಲ್ಲೂ ಸೈ ಅನಿಸಿಕೊಂಡಿದ್ದಾನೆ. ಆದರೂ ಪಾಪ ಈತನಿಗೆ ಒಪ್ಪುವಂತಹ ಪಾತ್ರ ಸಿಕ್ಕಿಲ್ಲ, ಆದ್ದರಿಂದ ಒಂದು ದೊಡ್ಡ ಬ್ರೇಕ್ ಕೂಡ ದೊರಕಿಲ್ಲ.



ಅದನ್ನ ಅರಿತು ಅವರ ತಂದೆ ಮತ್ತು ಚಿತ್ರರಂಗದ ಹಿರಿಯ ನಟ ಶ್ರೀನಿವಾಸಮೂರ್ತಿ ಈಗ ತಮ್ಮ ಮಗ ನವೀನ್ ಕೃಷ್ಣಾಗೋಸ್ಕರ ವಿಭಿನ್ನವಾದ ಕಥಾವಸ್ತುವನ್ನು ಹೊಂದಿರುವ, ಎಲ್ಲಕ್ಕಿಂತ ಮುಖ್ಯವಾಗಿ ನವೀನ್‌ಗೆ ಹೊಂದಿಕೆಯಾಗುವಂತಹ ಪಾತ್ರವಿರುವ 'ಧಿಮಾಕು' ಎಂಬ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.

'ಮಂಥನ' ಎಂಬ ಸೀರಿಯಲ್‌ನಲ್ಲಿ ನಟಿಸುತ್ತಿರುವ ಮಗೇಶ್ ಕುಮಾರ್ ಎಂಬ ಯುವಕ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದು ಸದ್ಯದಲ್ಲೇ ಚಿತ್ರ ಆರಂಭವಾಗಲಿದೆ.

ನವೀನನ 'ಧಿಮಾಕು' ಗೆದ್ದು ಆತನಿಗೊಂದು ದೊಡ್ಡ ಬ್ರೇಕ್ ಸಿಗುವಂತಾಗಲಿ.

ಇವರ ಬೆಲೆ ಇಷ್ಟೇನಾ?

'ಭೀಮೂಸ್ ಬ್ಯಾಂಗ್ ಬ್ಯಾಂಗ್ ಕಿಡ್ಸ್' ಚಿತ್ರದ ಹಾಡೊಂದಕ್ಕೆ ಕನ್ನಡ ಚಿತ್ರರಂಗದ 16 ನಾಯಕನಟರು ಒಂದಾದರಲ್ಲ? ಅವರನ್ನು ಹೀಗೆ ಒಂದಾಗಿಸಲು ವೆಚ್ಚವಾದದ್ದು ಸರಾಸರಿ ಒಂದು ಕೋಟಿ ರೂಪಾಯಿಗಳು ಮಾತ್ರ.

ಇದರರ್ಥ ಅವರೆಲ್ಲರಿಗೆ ಆ ಹಣವನ್ನು ಹಂಚಲಾಯಿತು ಎಂದಲ್ಲ, ಬದಲಾಗಿ ಅವರಲ್ಲ ಯಾವುದೇ ಸಂಭಾವನೆ ಪಡೆಯದಿದ್ದರೂ ಆ ಹಾಡನ್ನು ಕ್ಯಾಡ್ ಬರೀಸ್ ಚಾಕೊಲೇಟ್ ಕಂಪನಿಯವರು ಪ್ರಾಯೋಜಿಸಿದ್ದು ಆದರೆ ಚಿತ್ರೀಕರಣಕ್ಕೆ ಅವರು ಒಂದು ಕೋಟಿ ರೂಪಾಯಿಗಳನ್ನು ನೀಡಿದರು ಎಂದಷ್ಟೇ. ಕನ್ನಡ ಚಿತ್ರರಂಗದಲ್ಲಿ ಈತನಕ ಯಾವ ಹಾಡಿಗೂ ಇಷ್ಟೊಂದು ಹಣ ವೆಚ್ಚವಾಗಿದ್ದಿಲ್ಲ, ಅಷ್ಟರಮಟ್ಟಿಗೆ ಇದೊಂದು ದಾಖಲೆಯೇ ಸರಿ.

ಆದರೆ ಇದೇ ಕ್ಯಾಡ್‌ಬರೀಸ್ ಕಂಪನಿ ಬೇರೆ ಕಡೆ ವೆಚ್ಚ ಮಾಡುವುದು ಎಷ್ಟು ಹಣವನ್ನು ಎಂದು ನೋಡಿದರೆ ಅಚ್ಚರಿಯಾಗುತ್ತದೆ. ಉದಾಹರಣೆಗೆ, ಬಾಲಿವುಡ್ ಬಿಗ್ ಬಿ ಅಮಿತಾಬ್ ಬಚ್ಚನ್ ಈ ಚಾಕೊಲೇಟ್ ಕಂಪೆನಿಯ ಬ್ರಾಂಡ್ ಅಂಬಾಸಿಡರ್ ಆಗಿದ್ದಾರೆ. ಅದಕ್ಕೆಂದು ಅಮಿತಾಬ್‌ಗೆ ಈ ಕಂಪೆನಿ ಕೊಟ್ಟಿರುವ ಮೊತ್ತ ಕೇವಲ 6 ಕೋಟಿಗಳು.

ಇಲ್ಲಿ ಇನ್ನೊಂದು ವ್ಯತ್ಯಾಸವಿದೆ. ಈ ಕಂಪನಿಯ ಜಾಹೀರಾತಿನಲ್ಲಿ ಬಚ್ಚನ್ ಕಾಣಿಸಿಕೊಂಡಿದ್ದು ಕೇವಲ ಇಪ್ಪತ್ತು ಸೆಕೆಂಡುಗಳು. ಆದರೆ ಇದೇ ಕಂಪನಿ ಪ್ರಾಯೋಜಿತ ಐದು ನಿಮಿಷದ ಕನ್ನಡದ ಹಾಡೊಂದರಲ್ಲಿ 16 ನಾಯಕನಟರಿದ್ದರು.

ಇಲ್ಲಿ ಸ್ವಲ್ಪ ಲೆಕ್ಕ ಹಾಕುವ ಅಗತ್ಯವಿದೆ. ಬಚ್ಚನ್‌ಗೆ ಇಪ್ಪತ್ತು ಸೆಕೆಂಡ್‌ಗಳಿಗೆ ಆರು ಕೋಟಿ ಎಂದಾದರೆ ಆತನ ಪ್ರತಿ ಸೆಕೆಂಡ್ ಬೆಲೆ 3.33 ಕೋಟಿ ರೂಪಾಯಿಗಳಾಗುತ್ತದೆ. ಇಲ್ಲಿ ಒಂದು ಕೋಟಿಗೆ 16 ನಟರಾದರೆ ಅವರಿಗೆ ತಲಾ 6.25 ಲಕ್ಷವಾಗುತ್ತದೆ, ಮತ್ತು ಅದನ್ನು ಐದು ನಿಮಿಷ - ಅಂದರೆ 300 ಸೆಕೆಂಡ್- ನಿಂದ ಭಾಗಿಸಿದರೆ, ಅವರ ಶೇಕಡವಾರು ಬೆಲೆ ಕೇವಲ 2,083 ರೂಪಾಯಿಗಳಾಗುತ್ತದೆ!

ಅಂದರೆ, ನಮ್ಮ ಎಲ್ಲಾ ನಟರನ್ನು ಸೇರಿಸಿದರೂ ಬಚ್ಚನ್‌ರ ಒಂದು ಸೆಕೆಂಡ್ ಬೆಲೆಯೂ ಇಲ್ಲವೇ?

ಛೆ, ಛೆ, ಛೆ!

ಮುಸ್ಸಂಜೆಯಲ್ಲಿ ಒಂದಾದವರು...






'ಹಿಂಮಪಾತ' ಎಂಬ ಚಿತ್ರ ಬಾಕ್ಸ್ ಆಫೀಸಿನಲ್ಲಿ ಬಿದ್ದ ನಂತರ ಅದರ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಮತ್ತು ನಾಯಕ ನಟ ವಿಷ್ಣುವರ್ಧನ್ ನಡುವಿನ ಸ್ನೇಹವೂ ಹಿಮದಂತೆ ಕರಗಿಹೋಗಿತ್ತು.

ಆದರೆ ಈಗ ಇವರಿಬ್ಬರೂ ಒಂದಾಗಿದ್ದಾರೆ ಮಾತ್ರವಲ್ಲ, ಸದ್ಯದಲ್ಲೇ ಜೊತೆಯಾಗಿ ಕೆಲಸ ಮಾಡಲಿದ್ದಾರೆ. ಅದು ಬಾಬು ನಿರ್ಮಾಣದ ನೂರನೇ ಚಿತ್ರವಾಗಿರುತ್ತದೆ ಮಾತ್ರವಲ್ಲ ವಿಷ್ಣು ನಟನೆಯ ಇನ್ನೂರನೆ ಸಿನಿಮಾವಾಗಿರುತ್ತದೆ.

ಅಂತೂ ಮೈಸೂರಿನ ಈ ಬಾಲ್ಯದ ಗೆಳೆಯರು ತಮ್ಮ ಚಿತ್ರ ಬದುಕಿನ ಮುಸ್ಸಂಜೆಯಲ್ಲಿ ಒಂದಾಗಿ ಸೆಂಚುರಿ ಮತ್ತು ಡಬಲ್ ಸೆಂಚುರಿ ಬಾರಿಸಲು ಸಜ್ಜಾಗಿದ್ದಾರೆ.

'ಮಯೂರ'ನ ಮರಣ?



ಕಳೆದ ವಾರ ಪುನೀತ್ ರಾಜ್‌ಕುಮಾರ್ ಅಭಿನಯಿಸುತ್ತಿರುವ 'ಮಯೂರ' ಚಿತ್ರದ ನಿರ್ದೇಶಕ ಶೋಭನ್ ನಿಧನಹೊಂದಿದ ಸುದ್ದಿ ಗಾಂಧಿನಗರವನ್ನು ತಲ್ಲಣಗೊಳಿಸಿತ್ತು. ಆದರೂ ಈ ಚಿತ್ರದ ನಿರ್ದೇಶನ ಮಹೇಶ್ ಬಾಬು ಮಾಡಲಿದ್ದು ಚಿತ್ರ ಮುಂದುವರೆಯುತ್ತದೆ ಎಂಬ ಸುದ್ದಿ ಎಲ್ಲರಿಗೂ ಸಮಾಧಾನ ತಂದಿತ್ತು.

ಆದರೆ ಇದೀಗ ಈ ಚಿತ್ರವೇ 'ಸಡನ್ ಡೆತ್' ಆಗಿದೆ. ಈ ಚಿತ್ರವನ್ನು ಅಲ್ಲಿಗೇ ಕೈಬಿಟ್ಟು ಬೇರೇನಾದರೂ ಮಾಡೋಣ ಎಂಬ ತೀರ್ಮಾನವನ್ನು ಎಲ್ಲರೂ ಕೈಗೊಂಡಿದ್ದಾರಂತೆ. ಆದರೆ ಈ ಬಗ್ಗೆ ನಿರ್ಮಾಪಕ ಶ್ರೀಕಾಂತ್ ಅಧಿಕೃತವಾಗಿ ಏನೂ ಹೇಳಿಲ್ಲ.



ಆಪ್ತ ಚಿತ್ರದಲ್ಲಿ ವಿಜಯ್, ಸ್ಮಿತಾ

ಗಣೇಶನಿಗೆ ಕೊಟ್ಟಿದ್ದೆಷ್ಟು?



ಇವತ್ತು ನಟ ಗಣೇಶನ ಸಂಭಾವನೆ ಎಷ್ಟು? ಈ ಪ್ರಶ್ನೆಗೆ ಗಾಂಧಿನಗರದ ಹಲವರು ಕೊಡುವ ಉತ್ತರ 'ಆತ ಒಂದು ಕೋಟಿ ರೂಪಾಯಿಗಳನ್ನು ದಾಟಿದ್ದಾರೆ'.

ಆದರೆ ಮೊನ್ನೆ ನಿರ್ಮಾಪಕ ಎಸ್.ವಿ ಬಾಬು "ನಾನು ಗಣೇಶನನ್ನು ನಲವತ್ತೈದು ಲಕ್ಷಕ್ಕೆ ಬುಕ್ ಮಾಡಿದ್ದೇನೆ. ರಾಕ್‌ಲೈನ್ ವೆಂಕಟೇಶ್ ಆತನಿಗೆ ಮೂವತ್ತಾರು ಲಕ್ಷ ನೀಡಿದ್ದಾರೆ" ಎಂದು ಪತ್ರಕರ್ತರ ಎದುರು ಹೇಳಿದ್ದಾರೆ.

ಅಸಲಿ ಪ್ರಶ್ನೆ ಯಾವುದೆಂದರೆ ಬಾಬು ಕೊಟ್ಟ ಲೆಕ್ಕ ರಾಮನ ಲೆಕ್ಕ ಇರಬಹುದು, ಆದರೆ ಕೃಷ್ಣನ ಲೆಕ್ಕದಲ್ಲಿ ಗಣೇಶನಿಗೆ ಕೊಟ್ಟಿದ್ದೆಷ್ಟು ಎಂಬುದು?! ಆ ಪ್ರಶ್ನೆಗೆ ಬಾಬು ಆಗಲೀ, ರಾಕ್‌ಲೈನ್ ಆಗಲೀ, ಗಣೇಶ್ ಆಗಲೀ ಖಂಡಿತವಾಗಿಯೂ ಉತ್ತರಿಸುವುದಿಲ್ಲ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-4